

ಐಕ್ಯರಂಗ

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ ಸಂಪುಟ-೧೧ ಸಂಚಿಕೆ-೮ ಫೆಬ್ರವರಿ ೧೯, ೧೯೮೯ ರೂ. ೧-೦೦

ಎಲ್.ಡಿ.ಎಫ್. ಸರ್ಕಾರದ ವಿರುದ್ಧ ಪಕ್ಷಪಾತ ನಿಲ್ಲಬೇಕು

ಸಿ.ಪಿ.ಐ.(ಎಂ) ಪಾಲಿಟ್‌ಬ್ಯೂರೋ ಕರೆಯ ಮೇರೆಗೆ ಫೆಬ್ರವರಿ 18ರಂದು ದೇಶಾದ್ಯಂತ 'ಕೇರಳದಿನ' ಆಚರಿಸುವ ಸಂದರ್ಭದಲ್ಲಿ ಪಕ್ಷದ ಕೇಂದ್ರ ಪತ್ರಿಕೆ 'ಪೀಪಲ್ಸ್‌ಡೆಮಾಕ್ರಸಿ'ಯಲ್ಲಿ ಬರೆಯುತ್ತಾ ಅವರು ಹೀಗಂದಿದ್ದಾರೆ.

ಕಾಂಗ್ರೆಸ್(ಐ) ಕೇವಲ ರಾಜಕೀಯ ವೆನ್ನಬಹುದಾದ ತಂತ್ರಗಳಿಗೇ ತನ್ನನ್ನು ಸೀಮಿತಗೊಳಿಸಿಕೊಂಡಿಲ್ಲ. ದೇಶದ ಅರ್ಥಿಕದ ಮೇಲೆ ಕೇಂದ್ರದ ಹತೋಟಿ, ರಾಜ್ಯಪಾಲರ ಹುದ್ದೆ ಮತ್ತು ಸಂವಿಧಾನದ ಇತರ ಅಂಶಗಳನ್ನು ರಾಜಕೀಯ ಆಟಗಳಿಗೆ ಪೂರಕವಾಗಿ ಅದು ಬಳಸಿಕೊಳ್ಳುತ್ತದೆ. ಮೊದಲು ಕಮ್ಯೂನಿಸ್ಟ್ ಮಂತ್ರಿ ಮಂಡಳದ ಜತೆಗೆ ಈ ರೀತಿ ವರ್ತಿಸಲಾಗಿದ್ದರೆ ಈಗ ಎಲ್ಲಾ ಕಾಂಗ್ರೆಸ್ಸೇತರ ಪಕ್ಷಗಳ ಬಗ್ಗೆಯೂ ಇದೇ ರೀತಿ ವರ್ತಿಸಲಾಗುತ್ತಿದೆ. ಚುನಾಯಿತ ರಾಜ್ಯ ಸರ್ಕಾರಗಳನ್ನು ವಜಾ ಮಾಡುವ ಸಂವಿಧಾನದ 35 6ನೇ ಕಲಮಿನ ಬಳಕೆಯ ಬಗ್ಗೆ ಅಧ್ಯಯನ ಮಾಡಿದ ಸರ್ಕಾರಿಯ ಆಯೋಗದ ಪ್ರಕಾರ ಅರ್ಧಕ್ಕೂ ಹೆಚ್ಚು ಸಂದರ್ಭಗಳಲ್ಲಿ ಸಂಬಂಧಪಟ್ಟ ರಾಜ್ಯ ಸರ್ಕಾರವನ್ನು ವಜಾ ಮಾಡಲು ಯಾವುದೇ ರಾಜಕೀಯ ಅಥವಾ ಸಂವಿಧಾನಾತ್ಮಕ ಕಾರಣಗಳಿರಲಿಲ್ಲ. ಹಲವು ಸಂದರ್ಭಗಳಲ್ಲಿ ಕಾಂಗ್ರೆಸ್ ಪಕ್ಷದ ಒಳಗಿನ ಸಮಸ್ಯೆಗಳ ಪರಿಹಾರದಲ್ಲಿ ಕೇಂದ್ರದ ಅಧಿಕಾರದ ಪ್ರಯೋಗವಾಗಿ

ದೇಶಾದ್ಯಂತ ಕೇರಳ ದಿನಾಚರಣೆ

ದೇಶದ ಆಳುವ ಪಕ್ಷದ ಸ್ಥಾನಕ್ಕೆ ತಾನು ಏಕಮಾತ್ರ ಹಕ್ಕುದಾರ ಎಂದು ಭಾವಿಸುವ ಪಕ್ಷವೊಂದು ಜನರಿಂದ ಬೇರೆ ಯಾವುದೇ ಪಕ್ಷ ಚುನಾಯಿತವಾಗುವುದನ್ನು ಸಹಿಸುವುದಿಲ್ಲ. ಪ್ರಜಾಪ್ರಭುತ್ವ ಶಕ್ತಿಗಳು ಒಂದಾಗಿ, ಜನರನ್ನು ಅಣಿನೆರೆಸಿ ಆಳುವ ಕಾಂಗ್ರೆಸ್ ಪಕ್ಷ ಹಾಗೂ ಅದರ ಮಿತ್ರರುಗಳು ಕಾಂಗ್ರೆಸ್ಸೇತರ ಸರ್ಕಾರಗಳನ್ನು ಅಸ್ಥಿರಗೊಳಿಸಲು ಆಡುವ ಆಟವನ್ನು ವಿಫಲಗೊಳಿಸಬೇಕು ಎಂದು ಸಿ.ಪಿ.ಐ.(ಎಂ) ಪ್ರಧಾನಕಾರ್ಯದರ್ಶಿ ಕಾಂ.ಇ.ಎಂ.ಎಸ್. ನಂಬೂದರಿಪ್ಪಾಡ್ ಹೇಳಿದ್ದಾರೆ.

ಕೇಂದ್ರದ ವಿಶ್ವಾಸ ಕಳಕೊಂಡ ಕಾಂಗ್ರೆಸ್ ಮುಖ್ಯಮಂತ್ರಿಯನ್ನು ಬದಲಿಸಲು ಇದರ ಬಳಕೆಯಾಗಿದೆ ಎಂದು ಸರ್ಕಾರಿಯಾ ಆಯೋಗ ಗಮನಿಸಿರುವುದಾಗಿ ಇ.ಎಂ.ಎಸ್. ಹೇಳಿದ್ದಾರೆ.

ರಾಜ್ಯಪಾಲರ ಹುದ್ದೆಯನ್ನು ಕಾಂಗ್ರೆಸ್ಸೇತರ ಸರ್ಕಾರಗಳ ವಿರುದ್ಧ ಕೇಂದ್ರ ಸರ್ಕಾರ ಬಳಸುವುದನ್ನು ಗಮನಿಸಿದ ಸರ್ಕಾರಿಯ ಆಯೋಗ ಕೇಂದ್ರದ ಆಳುವ ಪಕ್ಷದ ಮುಖಂಡರನ್ನು ಯಾರನ್ನೂ ರಾಜ್ಯಪಾಲರಾಗಿ ಕಳಿಸಬಾರದೆಂದು ಶಿಫಾರಸು ಮಾಡಿತು. ಆದರೆ ಈ ಶಿಫಾರಸಿನ ಕೆಲವೇ ತಿಂಗಳಲ್ಲಿ ಅದನ್ನು ಉಲ್ಲಂಘಿಸಿ ಅದುವರೆಗೆ ಕೇಂದ್ರ ಮಂತ್ರಿಯಾಗಿದ್ದ ರಾಮ್‌ದುಲಾರಿ ಸಿನ್ಹಾರನ್ನು ಕೇರಳಕ್ಕೆ ರಾಜ್ಯಪಾಲರಾಗಿ ಕಳುಹಿಸಲಾಯ್ತು. ಶ್ರೀಮತಿ ಸಿನ್ಹಾ ಈಗಲೂ ಬಿಹಾರದ ಗುಂಪುಗಾರಿಕೆ-ಪೀಡಿತ ಕಾಂಗ್ರೆಸ್(ಐ) ಒಳಕಿತ್ತಾಟಗಳಲ್ಲಿ ಭಾಗಿಗಳಾಗಿದ್ದಾರೆ. ಇದಕ್ಕೆ ಹಲವು ಬಾರಿ ಆಕೆ ತನ್ನ ರಾಜ್ಯಕ್ಕೆ ಹೋಗಿ ಬಂದಿದ್ದಾರೆ. ಇದೇ ಕೆಲಸದಲ್ಲೇ ಆಕೆಗೆ ಸಂಸದೀಯ ಮಂಡಳಿಯ ಸದಸ್ಯನೂ ಆದ ಕೇರಳದ ಕಾಂಗ್ರೆಸ್(ಐ) ಮುಖಂಡನ ನೆರವು ಬೇಕು. ಈ ಹಿನ್ನೆಲೆಯಲ್ಲಿಯೇ ಆಕೆಯ ಚಟುವಟಿಕೆಗಳನ್ನು ಗಮನಿಸಬೇಕು. ಈ ಪುಟ 8ಕ್ಕೆ

ಗುಟ್ಟುರಟ್ಟು ಮಾಡಿದ ಸಾರ್ವಜನಿಕ ಸಮಿತಿ ವರದಿ ಲೆಕ್ಕಪತ್ರ

-ಎನ್.ಕೆ.ಉಪಾಧ್ಯಾಯ

ಬಿರ್ಲಾ ಒಡೆತನದ ಹರಿಹರ ಫಾಲಿಫೈಬರ್ಸ್ ಸಂಸ್ಥೆಗೆ ಉತ್ಪಾದನಾ ವೆಚ್ಚಕ್ಕಿಂತ ಕಡಿಮೆ ಬೆಲೆಗೆ ನೀಲಗಿರಿ ಮರ ಪೂರೈಸುವ ಸರ್ಕಾರದ ನಿರ್ಧಾರದಿಂದಾಗಿ ರಾಜ್ಯ ಬೊಕ್ಕಸಕ್ಕೆ ರೂ. 9ಕೋಟಿಯಷ್ಟು ನಷ್ಟವಾಗಿದೆಂಬ ಅಂಶವನ್ನು ಸರ್ಕಾರವೇ ನೇಮಿಸಿದೆ. ವಿಧಾನಮಂಡಲದ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ವರದಿ ಬಯಲುಗೊಳಿಸಿದೆ. ನೀರಾವರಿಯನ್ನೊಳಗೊಂಡು ಅಭಿವೃದ್ಧಿ ಯೋಜನೆಗಳಿಗೆ ಹಣದ ಕೊರತೆಯ ಕಾರಣವನ್ನು ತೋರಿಸುತ್ತಿರುವ ರಾಜ್ಯದ ಜನತಾದಳ ಸರ್ಕಾರ ತನ್ನ ವರ್ಗ ಗುಣಕ್ಕನುಸರಿಸಿ ಬಿರ್ಲಾ ಮತ್ತಿತರ ಗುತ್ತೇದಾರಿ ಬಂಡವಾಳದಾರರಿಗೆ ಅತಿ ಕಡಿಮೆ ಬೆಲೆಯಿಂದ ನೀಲಗಿರಿ ಹಾಗೆಯೇ ಬೇರೆ ಜಾತಿಯ ಮರಗಳನ್ನು ಪೂರೈಸುತ್ತಾ ಬಂದಿರುವುದು ಖಂಡನೀಯ.

ಒಂದೆಡೆ ಕೃತಕ ನೂಲು, ಪ್ಲೈವುಡ್, ಪೇಪರ್ ಉತ್ಪಾದನೆ ಮಾಡುವ ಬಂಡವಾಳದಾರರ ಒತ್ತಡಕ್ಕೆ ಬಲಿಯಾಗಿರುವಂತೆಯೇ ಮತ್ತೊಂದೆಡೆ ಖಾಸಗೀ ವೈದ್ಯ ಕಾಲೇಜುಗಳ ವ್ಯವಸ್ಥಾಪಕರ ಒತ್ತಡಕ್ಕೂ ಬಲಿಬಿದ್ದು ಸ್ವಂತ ಆಸ್ಪತ್ರೆಯನ್ನು ಹೊಂದದೆ ಸರ್ಕಾರಿ ಆಸ್ಪತ್ರೆಗಳ ಸೌಲಭ್ಯವನ್ನು ಬಳಸಿಕೊಳ್ಳುತ್ತಿರುವ ಖಾಸಗೀ ವೈದ್ಯಕೀಯ ಕಾಲೇಜುಗಳಿಂದ ಸರ್ಕಾರಕ್ಕೆ ಸಂದಾಯವಾಗಬೇಕಾಗಿರುವ 4 ಕೋಟಿ 17 ಲಕ್ಷ ರೂ.ಗಳನ್ನು ವಸೂಲಿ ಮಾಡದೆ ಬಾಕಿ ಉಳಿಸಿ ಖಾಸಗೀ ವೈದ್ಯಕೀಯ ಸಂಸ್ಥೆಗಳನ್ನು ನಡೆಸುತ್ತಿರುವವರ ಪ್ರಭಾವಕ್ಕೆ ಒಳಗಾಗಿರುವ ಅಂಶ ತೆರೆಕಂಡಿದೆ. ಬಿರ್ಲಾರವರ ಹರಿಹರ ಫಾಲಿಫೈಬರ್ಸ್ ಸಂಸ್ಥೆಗೆ ನೀಲಗಿರಿ ಮರಗಳನ್ನು ಅದನ್ನು ಬೆಳೆಯಲಿಕ್ಕೆ ತಗಲುವ ರೂ. 44.17 ವೆಚ್ಚವನ್ನು ಗಮನಕ್ಕೆ ತೆಗೆದುಕೊಳ್ಳದೆ ಸಾರ್ವಜನಿಕರಿಗೆ ತಿಳಿಯಲಾರದ ಕಾರಣದಿಂದ ಉತ್ಪಾದನಾ ವೆಚ್ಚಕ್ಕೆ ಕಡಿಮೆ ಬೆಲೆಗೆ ಅಂದರೆ ಟನ್ನಿಗೆ ರೂ. 24ರಂತೆ ಮಾರಾಟ ಮಾಡಲಾಗಿದೆ. ಅರಣ್ಯ ಇಲಾಖೆ ಅಧಿಕಾರಿಗಳ ಈ ಶಿಫಾರಸನ್ನು ಸರ್ಕಾರ ವಿಮರ್ಶೆ ಮಾಡದೆ ಒಪ್ಪಿಕೊಂಡಿರುವುದರಿಂದ ಸರ್ಕಾರಕ್ಕೆ ಅಪಾರ ಹಾನಿ ತಟ್ಟಿದೆ. 1971ರಲ್ಲಾದ ಒಪ್ಪಂದದಲ್ಲಿ ಆಗಿಂದಾಗ್ಗೆ ಪುಟ 8

'ಕೈಗಾದ ಬಗ್ಗೆ ಪೇಜಾವರ ಶ್ರೀಗಳು, ಶಿಕ್ಷಣದ ಬಗ್ಗೆ ಧರ್ಮಾಧಿಕಾರಿ ನಿರ್ಧರಿಸುವುದು ನಮಗೊಂದು ಸವಾಲು'

-ಪಿ.ರಾಮಚಂದ್ರರಾವ್

ಇಂದು ನಮ್ಮ ದೇಶದಲ್ಲಿ, ರಾಜ್ಯದಲ್ಲಿ ಕೈಗಾ ಅಣುಸ್ಥಾವರ ಬೇಕೆ ಬೇಡವೆ ಎಂಬುದನ್ನು ನಿರ್ಧರಿಸುವಲ್ಲಿ ಪೇಜಾವರ ಮಠಾಧೀಶ ಅಭಿಪ್ರಾಯ ಮುಖ್ಯವಾಗುತ್ತಿದೆ. ಶಿಕ್ಷಣ ಹೇಗಿರಬೇಕು ಎಂಬುದನ್ನು ಧರ್ಮಸ್ಥಳದ ಧರ್ಮಾಧಿಕಾರಿಗಳು, ಇತರ ಮಠಾಧಿಪತಿಗಳು ನಿರ್ಧರಿಸುತ್ತಾರೆ. ರಾಜಕೀಯ ಮತ್ತು ಶಿಕ್ಷಣದ ಮೇಲೆ ಧರ್ಮದ ಕಪಿಮುಷ್ಟಿ ಬಿಗಿಯಾಗಿದೆ. ಇಂದು ನಮ್ಮ ಮುಂದಿರುವ ಚಾರಿತ್ರಿಕ ಸವಾಲು- ರಾಜಕೀಯ ಮತ್ತು ಶಿಕ್ಷಣಗಳನ್ನು ಧರ್ಮದ ಕಪಿಮುಷ್ಟಿಯಿಂದ ಬಿಡಿಸುವುದು. ಇಂತಹ ಸವಾಲು ಯುರೋಪಿನಲ್ಲಿ 14-15 ನೇ ಶತಮಾನಗಳಲ್ಲಿ ಜನತೆಯ ಮುಂದಿತ್ತು. ಲೆಕ್ಕವಿಲ್ಲದಷ್ಟು ಯುದ್ಧಗಳು, ಹೋರಾಟಗಳು ನಂತರ ಯುರೋಪಿನ ಜನತೆ ಸವಾಲನ್ನು ಎದುರಿಸಿ, ಬಗೆಹರಿಸಿದ ನಂತರವೇ ಕಗ್ಗತ್ತಲ ಯುಗ ಕಳೆದ ತೀವ್ರ ಪ್ರಗತಿಯತ್ತ ಯಾತ್ರೆ ಆರಂಭವಾಯಿತು. ಈ ಸವಾಲನ್ನು ಎದುರಿಸದೆ ಸ್ವೀಕರಿಸದೆ ನಮ್ಮ ದೇಶದಲ್ಲಿ ಪ್ರಗತಿ ಸಾಧ್ಯವಿಲ್ಲ. ಇದು ಇಂದಿನ ಕಾಲಘಟ್ಟದಲ್ಲಿ ಶಿಕ್ಷಣದ ಸಮಸ್ಯೆಗಳನ್ನು ಚರ್ಚಿಸುವಾಗ ಗಮನದಲ್ಲಿಟ್ಟುಕೊಳ್ಳಬೇಕಾದ ಮುಖ್ಯ ಅಂಶ-. ಇದು ರಾಜ್ಯ ಸಿ.ಪಿ.ಐ(ಎಂ) ಕಾರ್ಯದರ್ಶಿ ಕಾ॥ ಪಿ.ರಾಮಚಂದ್ರರಾವ್ ಎಸ್.ಎಫ್.ಐ. ರಾಜ್ಯ ಸಮಾವೇಶದ ಸಮಾರಂಭವನ್ನುದ್ದೇಶಿಸಿ ಮಾಡಿದ ಭಾಷಣದ ಸಾರ.

ಎಸ್.ಎಫ್.ಐ.ನ ರಾಜ್ಯ ಸಮಾವೇಶ ತುಮಕೂರಿನಲ್ಲಿ ಫೆಬ್ರವರಿ 12 ಮತ್ತು 13ರಂದು ನಡೆಯಿತು.

ಸಮಾವೇಶ ನಡೆದ ಸ್ಥಳಕ್ಕೆ ಇತ್ತೀಚೆಗೆ ಹುತಾತ್ಮರಾದ ಎಸ್.ಎಫ್.ಐ.ನ ಮೊದಲ ದಿನಗಳಲ್ಲಿನ ಸದಸ್ಯರೊಬ್ಬರಾದ ಕಾ॥ ಸಫ್ದರ್ ಹಶ್ಮಿಯವರ ಹೆಸರಿಡಲಾಗಿತ್ತು. 'ಸಫ್ದರ್ ಹಶ್ಮಿ ನಗರ' ಎಸ್.ಎಫ್.ಐ. ಕೆಂಪು ಚುಕ್ಕಿಯ ಬಿಳಿ ಪತಾಕೆಗಳಿಂದ ತೋರಣಗಳಿಂದ ಅಲಂಕೃತವಾಗಿತ್ತು. ಸಮಾವೇಶದ ಮೊದಲು ಪ್ರತಿನಿಧಿಗಳು ನಗರದ ಬೀದಿಗಳಲ್ಲಿ ಮೆರವಣಿಗೆಯಲ್ಲಿ 'ಸಫ್ದರ್ ಹಶ್ಮಿ' ನಗರ ಸೇರಿದರು. ಹಿರಿಯ ಸ್ವಾತಂತ್ರ ಹೋರಾಟಗಾರರು 'ಸ್ವಾತಂತ್ರ ಜ್ಯೋತಿ'ಯನ್ನು ತಂದಿದ್ದು ಸಮಾವೇಶದ ಉದ್ಘಾಟನಾ ಸಮಾರಂಭದ ವಿಶೇಷ ಆಕರ್ಷಣೆಯಾಗಿತ್ತು.

ರಾಜ್ಯ ಅಧ್ಯಕ್ಷ ಕಾ॥ ಬಯ್ಯಾರೆಡ್ಡಿಯವರಿಂದ ಎಸ್.ಎಫ್.ಐ. ಧ್ವಜಾರೋಹಣದಿಂದ ಸಮಾವೇಶ ಆರಂಭವಾಯಿತು. ಹುತಾತ್ಮರ ಚೌಕದ ಮುಂದೆ "ಲಾಲ್ ಸಲಾಂ"ನೊಂದಿಗೆ ನೆರೆದಿದ್ದವರೆಲ್ಲಾ ಸಭಾಂಗಣಕ್ಕೆ ತೆರಳಿದರು.

ಸ್ವಾಗತ ಸಮಿತಿಯ ವತಿಯಿಂದ ಟಿ.ಕೆ.ಗೋವಿಂದರಾಜು ನೆರೆದಿದ್ದವರನ್ನು ಉದ್ಘಾಟನಾ ಸಮಾರಂಭಕ್ಕೆ ಸ್ವಾಗತಿಸಿದರು. ವೇದಿಕೆಗೆ ಕೇರಳದಲ್ಲಿ ಮತೀಯ ಶಕ್ತಿಗಳಿಗೆ ಬಲಿಯಾದ ಎಸ್.ಎಫ್.ಐ. ನಾಯಕ ಕಾ॥ ಸಜೀವನ್ ಹೆಸರಿಡಲಾಗಿತ್ತು. ಸಮಾವೇಶ ಹಶ್ಮಿ ಸಜೀವನ್, ಸೇರಿದಂತೆ ಹಲವಾರು ಅಗಲಿದ ಅಂತರ್ರಾಷ್ಟ್ರೀಯ ನಾಯಕರಿಗೆ ಪ್ರಜಾಸತ್ತಾತ್ಮಕ ಚಳುವಳಿಯ ಹುತಾತ್ಮರಿಗೆ ಶ್ರದ್ಧಾಂಜಲಿ ಸಲ್ಲಿಸಿತು. ಅವರಲ್ಲಿ ತಗಡೂರು ರಾಮಚಂದ್ರರಾವ್, ಶ್ರೀಕೃಷ್ಣ ಆಲನಹಳ್ಳಿ ಸೇರಿದ್ದರು. ಪುಟ 8

ಭೂಮಿಗಾಗಿ ರಾಷ್ಟ್ರವ್ಯಾಪೀ ಹೋರಾಟಕ್ಕೆ ಹುನ್ನಾರ

ಅಖಿಲಭಾರತ ಕಿಸಾನ ಸಭಾ ಪದಾಧಿಕಾರಿಗಳ ವಿಸ್ತೃತ ಸಭೆ ಜನವರಿ ಒಂದರಂದು ತಿರುವನಂತಪುರದಲ್ಲಿ ನಡೆಯಿತು. ಎ.ಐ.ಕೆ.ಎಸ್. ಉಪಾಧ್ಯಕ್ಷರಾದ ಕಾ॥ ಹರಿಕಿಶನ್ ಸಿಂಗ್ ಸುರ್ಜಿತ್ ಅವರು ಭೂಮಿಗಾಗಿ ರಾಷ್ಟ್ರವ್ಯಾಪಿ ಚಳುವಳಿಯನ್ನು ನಡೆಸಲು ರಾಜ್ಯ ಸಮಿತಿಗಳು ತಯಾರಿ ನಡೆಸಬೇಕೆಂದು ಕರೆ ಕೊಟ್ಟರು. ನಾಲ್ಕು ಎಡ ಪಕ್ಷಗಳ ಕಿಸಾನ್ ಹಾಗೂ ಕೃಷಿ ಕೂಲಿಕಾರ ಸಂಘಟನೆಗಳ ಜಂಟೀ ಕ್ರಿಯಾ ಸಮಿತಿ ಏಪ್ರಿಲ್ ತಿಂಗಳಲ್ಲಿ ಅಖಿಲ ಭಾರತ ಭೂ ಸುಧಾರಣಾ ಸಮಾವೇಶವನ್ನು ನವದೆಹಲಿಯಲ್ಲಿ ನಡೆಸಲಿದೆ. ಆ ಸಮಾವೇಶ ಭೂಮಿಗಾಗಿ ತಿಂಗಳುಗಟ್ಟಲೆ, ದೀರ್ಘಕಾಲಿಕ ಚಳುವಳಿಯನ್ನು ನಡೆಸುವ ಕುರಿತು ಚರ್ಚಿಸಲಿದೆಯೆಂದು ಹೇಳಿದರು. 1989 ಚುನಾವಣಾ ವರ್ಷವಾಗಲಿದೆ. ಬಂಡವಾಳ ಶಾಹಿ ಭೂಮಾಲೀಕ ಆಳುವ ಮತ್ತು ವಿರೋಧ ಪಕ್ಷಗಳು, ಭೂಮಿಯ ಪ್ರಶ್ನೆಯನ್ನು ಸೇರಿಸಿ ಹಲವಾರು ಜನಪರ ಬೇಡಿಕೆಗಳನ್ನು ಪ್ರಚಾರ ಮಾಡಿ ಮತ ಪಡೆಯಲು ಪ್ರಯತ್ನಿಸಲಿವೆ. ಹಾಗೆಯೇ ಈ ಪಕ್ಷಗಳ ಮಧ್ಯೆ ತೀವ್ರ ಘರ್ಷಣೆಯೇರ್ಪಡುತ್ತಿದೆ. ಕಾರಣ ಅಖಿಲ ಭಾರತ ಕಿಸಾನ್ ಸಭಾ ಜಂಟೀ ಹೋರಾಟಗಳ ಮುಖಾಂತರ ವಿಶಾಲ ಜನ ಸಮೂಹವನ್ನು ಈ ಬೇಡಿಕೆಗಳಿಗೆ ಆಕರ್ಷಿಸುವ ಮುಖಾಂತರ ಪರಿಸ್ಥಿತಿಯನ್ನು ಉಪಯೋಗಿಸಿಕೊಳ್ಳಬೇಕಾಗಿದೆಯೆಂದು ಅಭಿಪ್ರಾಯಪಟ್ಟರು.

ಈ ಹಿನ್ನೆಲೆಯಲ್ಲಿ ರಾಜ್ಯ ಮಟ್ಟದ ಭೂಸುಧಾರಣಾ ಸಮಾವೇಶಗಳನ್ನು ನಡೆಸಿ, ಸೆಪ್ಟಂಬರ್ ಚಳುವಳಿಯಲ್ಲಿ ಹಾಗೂ ಅದರ ಪೂರ್ವ ನಡೆದ ಚಳುವಳಿಗಳ ಆಧಾರದಲ್ಲಿ ನಿರ್ದಿಷ್ಟವಾಗಿ ಆಯಾ ರಾಜ್ಯದಲ್ಲಿ ಯಾವ ಭೂಮಿಗಾಗಿ ರೈತಾಪಿ, ಕೃಷಿ ಕೂಲಿಕಾರರಿಂದ ಸ್ಪಂದನೆಯಿದೆಯೆಂಬುದನ್ನು ನಿರ್ದಿಷ್ಟವಾಗಿ ಹಾಗೂ ಸೂಕ್ಷ್ಮವಾಗಿ ಅಧ್ಯಯನ ನಡೆಸಿ ತೀರ್ಮಾನಕ್ಕೆ ಬರಬೇಕು. ಎರಡನೇದಾಗಿ ಆ ಬೇಡಿಕೆಗಾಗಿ ವ್ಯಾಪಕವಾದ ದೀರ್ಘಕಾಲಿಕ ಚಳುವಳಿ ನಡೆಸಲು ಇರುವ ಸಾಧ್ಯಾ ಸಾಧ್ಯತೆಗಳ ಕುರಿತು ಚರ್ಚಿಸಿ, ಸಮಯವನ್ನು ಅಂದಾಜು ಮಾಡಿ ಅಖಿಲಭಾರತ ಸಮಾವೇಶದ ಮುಂದೆ ಮಂಡಿಸಬೇಕೆಂದು ಕರೆ ನೀಡಿದರು.

ಸೆಪ್ಟೆಂಬರ್ ಚಳುವಳಿಯ ಅನುಭವ

ಪಾಟ್ನಾದಲ್ಲಿ ನಡೆದ ಅಖಿಲ ಭಾರತ ಕಿಸಾನ್ ಸಭಾದ 25 ನೇ ಸಮ್ಮೇಳನ 12 ಬೇಡಿಕೆಗಳ ಪಟ್ಟಿಯನ್ನು ಅಂಗೀಕಾರ ಮಾಡಿ ರಾಷ್ಟ್ರವ್ಯಾಪಿ ಚಳುವಳಿಗೆ ಕರೆ ನೀಡಿತು. 1986 ಸೆಪ್ಟೆಂಬರ್‌ನಲ್ಲಿ ಸ್ವತಂತ್ರವಾಗಿ ಒಂದು ವಾರದ ಪಿಕೆಟಿಂಗ್ ಚಳುವಳಿಗೆ ಕರೆ ನೀಡಿತ್ತು. 1987 ಸೆಪ್ಟೆಂಬರ್‌ನಲ್ಲಿ ಅದೇ 12 ಬೇಡಿಕೆಗಳಿಗೆ ನಾಲ್ಕು ಎಡಪಕ್ಷಗಳ ರೈತ-ಕೃಷಿ ಕೂಲಿಕಾರರ ಸಂಘಟನೆಗಳೊಡನೆ ಜಂಟೀ ಕ್ರಿಯಾ ಸಮಿತಿ ನಡೆಸಿ 15 ದಿನದ ಜೈಲ್‌ಭರೋ ಚಳುವಳಿ 6ನೇ ಪುಟಕ್ಕೆ

ಮುಂದಿನ ಸಂಚಿಕೆಗಳಲ್ಲಿ.....
1) ಭಾರತದಲ್ಲಿ ಸಾರ್ವಜನಿಕ ವಲಯ
2) ಮಹಿಳೆಯರ ಕುರಿತು

ರಾಜೀವ್ ಆಳ್ವಿಕೆಗೆ ಅಜೇಯ ಪ್ರತಿರೋಧ ಮೂಡಿಸುವುದು ನಮ್ಮ ಜವಾಬ್ದಾರಿ

(ಕಳೆದ ಸಂಚಿಕೆಯಿಂದ)

13ನೇ ಮಹಾಧಿವೇಶನದ ರಾಜಕೀಯ ವರದಿಯ ಮೇಲಿನ ಚರ್ಚೆಗೆ ಉತ್ತರ ನೀಡುತ್ತಾ ಕಾಂ. ಬಿ.ಟಿ.ಆರ್. ವರದಿಯ ಅಂತರಾಷ್ಟ್ರೀಯ ಭಾಗದ ಮೇಲೆ, ಕೋಮುವಾದಿ ಆಕ್ರಮಣದ ಸ್ವಭಾವದಲ್ಲಿ ಆಗಿರುವ ಬದಲಾವಣೆ ಬಗ್ಗೆ ವಿವರಿಸಿರುವುದನ್ನು ಓದಿರುವಿರಿ. ಅಲಿಪ್ತ ವಿದೇಶಾಂಗ ನೀತಿಯ ಮುಂದುವರಿಕೆ ಕುರಿತಂತೆ ಹನ್ನೆರಡನೇ ಮಹಾಧಿವೇಶನ ನೀಡಿದ ನಿರ್ದೇಶನವನ್ನು ನೆನಪಿಸುತ್ತಾ ಈಗ ವಿಶ್ವಬ್ಯಾಂಕ್ ಮತ್ತಿತರ ಮೂಲಗಳಿಂದ ಒತ್ತಡವಿದ್ದಾಗ್ಯೂ ಅಲಿಪ್ತ ನೀತಿ ಮುಂದುವರಿಯುತ್ತಿರುವುದು ನಮ್ಮ ಪ್ರಯತ್ನದಿಂದಾಗಿ ಅಲ್ಲ, ಎಡ ಪ್ರಜಾಪ್ರಭುತ್ವದ ರಂಗದ ಮೇಲೆ ಎಂದು ರಾಜಕೀಯ ನಿರ್ಣಯ ಹೇಳಿರುವತ್ತ ಬಿ.ಟಿ.ಆರ್. ಗಮನ ಸೆಳೆದರು. ಮುಂದೆ ಓದಿ......

ಪಾಕಿಸ್ತಾನಕ್ಕೆ ಸಾಮ್ರಾಜ್ಯಶಾಹಿಗಳ ಶಸ್ತ್ರಪೂರೈಕೆ ನಮ್ಮ ಸರ್ಕಾರ ಚಂಚಲವಾಗದಂತೆ ತಡೆದುದರಿಂದಾಗಿ ಎಂಬ ಸಂಗತಿಯತ್ತ ರಾಜಕೀಯ ನಿರ್ಣಯ ಗಮನ ಸೆಳೆದಿದೆ. ನಮ್ಮ ದೃಷ್ಟಿಕೋನದಲ್ಲಿ ಹಾಗೂ ಕೆಲಸದಲ್ಲಿ ಈ ನ್ಯೂನ್ಯತೆಯಿದೆಯೆಂದು ಒಪ್ಪಿಕೊಳ್ಳುವ ಬದಲು ಅಲಿಪ್ತನೀತಿಯ ರಕ್ಷಣೆಯ ಮಹತ್ವವನ್ನು ಅಲ್ಲಗಳೆಯಲಾಗಿದೆ.

ಇದು ಅಲಿಪ್ತ ನೀತಿಯ ಸಾಮ್ರಾಜ್ಯಶಾಹೀ ವಿರೋಧಿ ಸತ್ವದ, ಬೂರ್ಜ್ವಾ ವರ್ಗವೂ ಸೇರಿದಂತೆ ಭಾರತೀಯ ಜನತೆ ಸಾಮ್ರಾಜ್ಯಶಾಹಿ ಹಾಗೂಯೊಂದಿಗೆ ಹೊಂದಿರುವ ವೈರುಧ್ಯ ಆಳವನ್ನು ಅರ್ಥ ಮಾಡಿಕೊಳ್ಳುವಲ್ಲಿನ ವಿಫಲತೆಯಲ್ಲದೆ ಬೇರೇನಿಲ್ಲ. ಈ ಮೂಲಕ ವಿದೇಶಾಂಗ ನೀತಿ ಯನ್ನು ಬುಡಮೇಲು ಮಾಡುವ ಸಾಮ್ರಾ ಜ್ಯಶಾಹೀ ಯೋಜನೆಗಳನ್ನು ಪ್ರತಿರೋಧಿಸಲು ನಿರಾಕರಿಸಿದಂತಾಗುತ್ತದೆ. ಒಂದು ಕಾರ್ಮಿಕ ವರ್ಗದ ಪಕ್ಷದ ಪ್ರೌಢತೆಯನ್ನು ಅದು ಸರ್ಕಾರದ ವಿದೇಶಾಂಗ ನೀತಿಯಲ್ಲಿ ಕಳೆಯುವ ಆಸಕ್ತಿಯ ಮೇಲೆ ಅಳೆಯಬೇಕು ಎಂದು ಮಾರ್ಕ್ಸ್ ಗಮನಿಸಿದ್ದನ್ನು ಇಲ್ಲಿ ನೆನಪಿಸ ಬಯಸುತ್ತೇನೆ.

ಮುಸ್ಲಿಂ ಅಲ್ಪಸಂಖ್ಯಾತರ ಪ್ರಶ್ನೆ ಮತ್ತು ಆದಿವಾಸಿಗಳು ಹಾಗೂ ಹರಿಜನರಲ್ಲಿನ ಹೊಸ ಜಾಗೃತಿ ಮತ್ತು ಆಂದೋಲನಗಳ ಬಗ್ಗೆ ಪ್ರತಿನಿಧಿಗಳು ಹೆಚ್ಚು ಗಮನ ನೀಡಿದ್ದರೆ ಬಹಳ ಸಹಾಯವಾಗುತ್ತಿತ್ತು. ಹೆಚ್ಚಾಗಿ ಕೃಷಿಗೆ ಸಂಬಂಧಪಟ್ಟವರೇ ಆದ ಈ ಎಲ್ಲಾ ಜನಸಮೂಹಗಳನ್ನು ಹೆಚ್ಚೆಚ್ಚಾಗಿ ಸರ್ವ ಸಾಮಾನ್ಯ ಪ್ರಜಾಪ್ರಭುತ್ವ ಆಂದೋಲನಗಳಲ್ಲಿ ಅಣಿನೆರೆಸದೆ, ಈಗ ಅವರು ಸರ್ವಸಾಮಾನ್ಯ ಪ್ರಜಾಪ್ರಭುತ್ವ ಹಾಗೂ ವರ್ಗ ಹೋರಾಟಗಳಿಂದ ಪರಕೀಯವಾಗಿ ನಿಂತಿರುವ ಸನ್ನಿವೇಶವನ್ನು ಹೋಗಲಾಡಿಸದೆ ಜನತಾ ಪ್ರಜಾಪ್ರಭುತ್ವಕ್ಕಾಗಿ ಹೋರಾಟ ಯಶಸ್ವಿಯಾಗಲು ಸಾಧ್ಯವೇ ಇಲ್ಲ.

ನಮ್ಮ ನಡುವೆ ಕೂಡಾ ಮುಸ್ಲಿಂ ಅಲ್ಪಸಂಖ್ಯಾತರ ವಿರುದ್ಧ ಪಕ್ಷಪಾತದ ಪೂರ್ಣ ಅರಿವು ಇಲ್ಲವೆಂದರೆ ತಪ್ಪಾಗಲಾರದು. ಈಗ ಪಕ್ಷಪಾತ ಮಾತ್ರವೇ ಅಲ್ಲ ಗಲಭೆಗಳ ಸಮಯದಲ್ಲಿ ಅವರ ಭದ್ರತೆಗೇ ಬೆದರಿಕೆ ಬರುತ್ತಿದೆ. ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆ ಸರ್ವಾಧಿಕಾರದ ವಿರುದ್ಧ, ಪ್ರಜಾಪ್ರಭುತ್ವಕ್ಕಾಗಿ, ರಾಷ್ಟ್ರೀಯ ಐಕ್ಯತೆಗಾಗಿ ಹೋರಾಟದ ವಿಭಿನ್ನ ಅಂಗ. ಈ ಹಕ್ಕುಗಳ ರಕ್ಷಣೆಯಲ್ಲಿ ಮಧ್ಯಪ್ರವೇಶ, ಸಾಮೂಹಿಕ ಮಧ್ಯಪ್ರವೇಶ ಮಾಡಬೇಕೆಂದು ರಾಜಕೀಯ ನಿರ್ಣಯ ಕರೆ ನೀಡಿದೆ.

ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ ಹೋರಾಟ, ಕೋಮುವಾದಿ ಮತ್ತು ಮೂಲಭೂತವಾದಿಗಳ ವಿರುದ್ಧ ಹೋರಾಟ, ಅಲ್ಪಸಂಖ್ಯಾತರ ಪ್ರಜಾಪ್ರಭುತ್ವ ಹಕ್ಕುಗಳನ್ನು ಭರವಸೆ ನೀಡುವ ಹೋರಾಟ ಇವೆಲ್ಲಾ ಪಂಜಾಬ್, ಅಸ್ಸಾಂ, ತ್ರಿಪುರಾ, ಮತ್ತು ಡಾರ್ಜಿಲಿಂಗ್‌ನಲ್ಲಿ ನಮ್ಮ ಸಂಗಾತಿಗಳು ಯಾವ ಉದ್ದೇಶಕ್ಕಾಗಿ ಅಪಾರ ತ್ಯಾಗ ಮಾಡಿದರೋ, ಯಾವುದಕ್ಕಾಗಿ ನಮ್ಮ ಅತ್ಯುತ್ತಮ ಸಂಗಾತಿಗಳು ತಮ್ಮ ಬಲಿದಾನ ನೀಡಿದರೋ ಆ ರಾಷ್ಟ್ರೀಯ ಐಕ್ಯತೆ ರಕ್ಷಣೆಯ ನಮ್ಮ ಹೋರಾಟದ ಅಂಗ.

ಹರಿಜನರು ಮತ್ತು ಆದಿವಾಸಿಗಳಲ್ಲಿನ ಹೊಸ ಸಾಮೂಹಿಕ ಜಾಗೃತಿ ನಮ್ಮ ಕೃಷಿಕ ಜನ ಸಮೂಹಗಳ ಅತ್ಯಂತ ದಲಿತ ವಿಭಾಗಗಳ ಜಾಗೃತಿ. ಈ ವಿಭಾಗಗಳಿಲ್ಲದೆ ಕರ್ಷಕ ಕ್ರಾಂತಿಯ ಮಾತು, ಊಳಿಗಮಾನ್ಯ ಸಂಬಂಧಗಳೊಂದಿಗೆ ಲೆಕ್ಕಾಚಾರ ಚುಕ್ತಾ ಮಾಡುವ ಮಾತುಗಳೆಲ್ಲಾ ಕೇವಲ ಮಾತುಗಳಾಗಿಯೇ ಉಳಿಯುತ್ತವೆ. ಈ ಆಂದೋಲನಗಳ ಸದ್ಯದ ಮುಖಂಡತ್ವ ಮತ್ತು ಸಂಘಟನೆಗಳು ಸಂಕುಚಿತ ಪಂಥವಾದೀ ಮಾರ್ಗ ಹಿಡಿದಿದ್ದಾರೆಂದ ಮಾತ್ರಕ್ಕೇ ಅದು ಈ ಜನ ಸಮೂಹಗಳನ್ನು ಸರ್ವ ಸಾಮಾನ್ಯ ಹೋರಾಟದತ್ತ ಗೆದ್ದುಕೊಳ್ಳಲು ಸರಿಯಾದ ನಿಲುವು ತಗೊಳ್ಳಲು ಅಡ್ಡಿಯಾಗಬಾರದು.

ವಸ್ತುತಃ ಅವರು ಊಳಿಗಮಾನ್ಯ ವ್ಯವಸ್ಥೆಯ ವಿರುದ್ಧ ಹೋರಾಡುತ್ತಿದ್ದಾರೆ. ಅವರ ಊಳಿಗಮಾನ್ಯ-ವಿರೋಧಿ ಬೇಡಿಕೆಗಳನ್ನು ನಾವು ಪ್ರತಿಪಾದಿಸದಿದ್ದರೆ ನಾವು ಅವರಿಗೆ ಅರ್ಥಹೀನ. ಈ ಊಳಿಗಮಾನ್ಯ-ವಿರೋಧಿ ಬೇಡಿಕೆಗಳು ಆರ್ಥಿಕ ಬೇಡಿಕೆಗಳು ಮಾತ್ರವೇ ಅಲ್ಲ. ಅವರ ನಾಗರೀಕ ಹಕ್ಕುಗಳು ಮತ್ತು ಜಾತಿ ಪಕ್ಷಪಾತದ ಅಂತ್ಯ ಇತ್ಯಾದೀ ಬಗ್ಗೆಯೇ ಹೆಚ್ಚು. ರಾಜಕೀಯ ನಿರ್ಣಯ ಹೇಳಿರುವಂತೆ ನಮ್ಮ ಸಮಾಜದ ಎಲ್ಲಾ ದಲಿತ ವಿಭಾಗಗಳು ಸದ್ಯದ ಆಳ್ವಿಕೆಯ ವಿರುದ್ಧ ತಮ್ಮ ಸಿಟ್ಟನ್ನು ವಿವಿಧ ಬ[illegible] ವ್ಯಕ್ತಪಡಿಸುತ್ತಿದ್ದಾರೆ.

ಈ ಅಸಂತೃಪ್ತಿ ಅಂಗೀಕೃತ ರಾಜಕೀಯ ಪಕ್ಷಗಳ ಸುತ್ತ ಹರಳುಗಟ್ಟಿಕೊಳ್ಳುತ್ತಿಲ್ಲ. ಸ್ವಲ್ಪ ಭಾಗವನ್ನು ಮಾತ್ರವೇ ಈ ಪಕ್ಷಗಳು ಪ್ರತಿನಿಧಿಸಲು ಸಾಧ್ಯವಾಗಿದೆ. ಈ ಅಸಂತೃಪ್ತಿ ಸರಿಯಾಗಿ ಕ್ರೋಢೀಕರಿಸಲ್ಪಟ್ಟು ಈಗಿನ ಆಳ್ವಿಕೆಗೆ ಒಂದು ಅಜೇಯ ಪ್ರತಿರೋಧ ಮೂಡುವಂತೆ ನೋಡಿಕೊಳ್ಳುವುದು ನಮ್ಮ ಜವಾಬ್ದಾರಿ.

ಈ ಸನ್ನಿವೇಶದಲ್ಲಿ ನಮ್ಮಪಕ್ಷಗಳು ಮತ್ತು ಇತರ ಎಡ ಪಕ್ಷಗಳು ಎಲ್ಲಾ ಪ್ರಜಾಪ್ರಭುತ್ವ ಶಕ್ತಿಗಳು ಒಟ್ಟಾಗಿ ಮುಂದೆ ಸಾಗುವಂತೆ ಮಾಡುವ ಬಹುಪಾಲು ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕಾಗುತ್ತದೆ. ರಾಜಕೀಯ ನಿರ್ಣಯ ಈ ಅಂಶದ ಮೇಲೆ ಹೆಚ್ಚಿನ ಒತ್ತು ನೀಡಿದೆ. ಜನತೆಯ ಕಣ್ಣಿನಲ್ಲಿ ಈ ಸ್ಥಾನಮಾನ ಗಳಿಸಲು ಸಾಧ್ಯವಾಗಿರುವುದು ನಮ್ಮ ಸಾಮೂಹಿಕ ಚಟುವಟಿಕೆಗಳು ಮತ್ತು ಎಲ್ಲಕ್ಕಿಂತ ಮಿಗಿಲಾಗಿ ರಾಷ್ಟ್ರೀಯ ಐಕ್ಯತೆಯ ರಕ್ಷಣೆಗಾಗಿ ನಮ್ಮ ನಿರಂತರ ಹೋರಾಟ ಮತ್ತು ಅದಕ್ಕಾಗಿ ಮಾಡಿದ ತ್ಯಾಗದಿಂದ ಎಂಬುದನ್ನು ನೆನಪಿಸಿಕೊಳ್ಳಬೇಕಷ್ಟೆ.

ಎಡಪಕ್ಷಗಳ ಬೆಂಬಲ ಪಡೆದ ಜಾತ್ಯಾತೀತ ಪಕ್ಷಗಳ ಒಂದು ಕೂಟ ಏರ್ಪಡಿಸಲು ಪ್ರಯತ್ನಿಸುತ್ತೇವೆಯಾದರೂ ಸಾಮೂಹಿಕ ಚಟುವಟಿಕೆಗಳ ಮೇಲೆ ಹೆಚ್ಚುತ್ತಿರುವ ಅಸಂತೃಪ್ತಿಯನ್ನು ಕೇಂದ್ರೀಕರಿಸುವತ್ತ ಹೆಚ್ಚು ಒತ್ತು ಕೊಡುತ್ತೇವೆ. ಇದಿಲ್ಲದೆ ರಾಜೀವ್‌ಗಾಂಧಿಯ ಸೋಲು ಸಾಧ್ಯವಾಗಲಿಕ್ಕಿಲ್ಲ. ಕಾಂಗ್ರೆಸ್(ಐ) ಆಗಲೇ ಚುನಾವಣಾರಂಗಕ್ಕಿಳಿದಿದೆ. ಮಹಿಳಾ ಅಭಿವೃದ್ಧಿ ಕಾರ್ಯಕ್ರಮವೊಂದು ಘೋಷಣೆಯಾಗಿದೆ. ಮತದಾನದ ವಯಸ್ಸನ್ನು 18ಕ್ಕಿಳಿಸಿರುವುದು ತನ್ನದೇ ಸಾಧನೆ ಎಂದು ಹೇಳಿಕೊಂಡು ಯುವಜನರ ಮತ ಸೆಳೆಯುವ ಪ್ರಯತ್ನ ನಡೆಸುತ್ತಿದೆ. ಬಡತನ-ವಿರೋಧಿ ಕಾರ್ಯಕ್ರಮಗಳಲ್ಲಿ ಹೊಸಕ್ರಮ ಘೋಷಿಸಿ ಗ್ರಾಮೀಣ ಜನ ಸಮೂಹಗಳ ಅತ್ಯಂತ ದಲಿತ ವಿಭಾಗಗಳನ್ನು ಆಕರ್ಷಿಸಲು ಪ್ರಯತ್ನಿಸುತ್ತಿದೆ. ಅವರಿಗೆ ಉದ್ಯೋಗ ಮೀಸಲಾತಿಯ ಆಮಿಷ ತೋರಿಸುತ್ತಿದೆ.

ಚುನಾವಣಾ ಹೋರಾಟದ ಗೆಲುವಿಗಾಗಿ ತಕ್ಷಣ ನಾವು ಬೆಳೆಯುತ್ತಿರುವ ಸಾಮೂಹಿಕ ಅಸಂತೃಪ್ತಿಯೊಂದಿಗೆ ನಮ್ಮನ್ನು ಜೋಡಿಸಿಕೊಂಡು ಅದನ್ನು ಕಾಂಗ್ರೆಸ್(ಐ) ಆಳ್ವಿಕೆಗೆ ನೀತಿಬದ್ಧ ವಿರೋಧವಾಗಿ ಕ್ರೋಢೀಕರಿಸಬೇಕು. ನಮ್ಮ ಪಕ್ಷ ಮತ್ತು ನಮ್ಮ ಸಾಮೂಹಿಕ ಸಂಘಟನೆಗಳು ತಮ್ಮ ಸಾಮೂಹಿಕ ಚಟುವಟಿಕೆಗಳನ್ನು ಬಹುಪಾಲು ಹೆಚ್ಚಿಸಿಕೊಳ್ಳಬೇಕು. ಕಳೆದ ಮೂರು ವರ್ಷಗಳಲ್ಲಿ ಈ ಸಂಘಟನೆಗಳು ಅಗಾಧ ಕೆಲಸ ಮಾಡಿವೆ.

ಡಿ.ವೈ.ಎಫ್.ಐ., ಎಸ್.ಎಫ್.ಐ., ಕಿಸಾನ್ ಸಭಾದ ಸದಸ್ಯ ಸಂಖ್ಯೆಯಲ್ಲಿ ಗಮನಾರ್ಹ ಹೆಚ್ಚಳ, ಅಖಿಲಭಾರತ ಕೃಷಿ ಕೂಲಿಕಾರ ಸಂಘದ ಸದಸ್ಯತ್ವದಲ್ಲಿ ಹೆಚ್ಚಳ, ನಮ್ಮ ಪ್ರಭಾವದಲ್ಲಿರುವ ಕಾರ್ಮಿಕ ಸಂಘಗಳ ಸದಸ್ಯತ್ವದಲ್ಲಿ ಹೆಚ್ಚಳ ಮಹಿಳಾ ಸಂಘಟನೆಯ ಸದಸ್ಯತ್ವದಲ್ಲಿ ಹೆಚ್ಚಳ ಇವೆಲ್ಲಾ ಈಗಾಗಲೇ ಹೋರಾಟಶೀಲ ಜನ ಸಮೂಹಗಳೊಂದಿಗೆ ಹೊಸ ಸಂಬಂಧಗಳನ್ನು ಬೆಸೆದಿವೆ. ಇದರಿಂದ ಮುಂಬರುವ ಕಾಲಾವಧಿಯಲ್ಲಿ ಸಾಮೂಹಿಕ ಅಸಂತೃಪ್ತಿಗೆ ನೇತೃತ್ವ ಕೊಡಲು ನಮಗೆ ಸಾಧ್ಯವಾಗಬೇಕು. ರಾಜೀವ್‌ಗಾಂಧಿಯನ್ನು ಅಧಿಕಾರದಿಂದಿಳಿಸುವ ಹೋರಾಟಕ್ಕೆ ದೃಢ ಬುನಾದಿಯಾಗಬೇಕು.

ನಮಗೆ ವಿಶ್ರಾಂತಿಯೆಂಬುದಿಲ್ಲ ಎಂದು ನೀವು ಅರಿತಿದ್ದೀರಿ ಎಂಬ ಭರವಸೆ ನನಗಿದೆ. ನಮ್ಮಲ್ಲಿ ಪ್ರತಿಯೊಬ್ಬರೂ ಈಗ ರಾಜೀವ್ ಸರ್ಕಾರವನ್ನು ಸೋಲಿಸುವ, ಕೋಮುವಾದಿ ಮತ್ತು ಪ್ರತ್ಯೇಕವಾದಿ ಶಕ್ತಿಗಳನ್ನು ದೂರತಳ್ಳುವ ಕಾರ್ಯರಂಗದಲ್ಲಿರುತ್ತವೆ ಎಂಬ ವಿಶ್ವಾಸ ನನಗಿದೆ.

ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ರಂಗ ಜನತಾ ಪ್ರಜಾಪ್ರಭುತ್ವ ರಂಗ ಸಾಧಿಸುವ ಒಂದು ಸಾಧನ ಕ್ರಾಂತಿಕಾರೀ ಹೋರಾಟದ ಮೂಲಕ ಜನತಾ ಪ್ರಜಾಪ್ರಭುತ್ವ ರಂಗದ ಭಾಗವಾಗುವ ವರ್ಗಗಳನ್ನು ಮತ್ತು ವಿಭಾಗಗಳನ್ನು ಅಣಿನೆರೆಸುವ ಸಾಧನ.

-12ನೇ ಮಹಾಧಿವೇಶನದ ರಾಜಕೀಯ ನಿರ್ಣಯ.

ಭಾರತೀಯ ಜನತೆಯ, ಭಾರತೀಯ ಕಾರ್ಮಿಕ ವರ್ಗದ ಹೋರಾಟದಲ್ಲಿ ಮುಖಂಡತ್ವದಲ್ಲಿರುವ ಒಂದು ಶಕ್ತಿಯಾಗಿ, ಶಾಂತಿ, ಸ್ವಾತಂತ್ರ್ಯ ಮತ್ತು ಸಮಾಜವಾದ ರಕ್ಷಿಸುವ ವಿಶ್ವ ಕಮ್ಯೂನಿಸ್ಟ್ ಆಂದೋಲನದ ಒಂದು ದಳವಾಗಿ ನಮ್ಮ ಪಕ್ಷದ ಮುನ್ನಡೆಯಲ್ಲಿ 13ನೇ ಮಹಾಧಿವೇಶನ ಒಂದು ಮಹತ್ವ ಪೂರ್ಣ ಮೈಲಿಗಲ್ಲು.

-ಪಿ.ಡಿ.ಸಂಪಾದಕೀಯ

ಬೃಹತ್‌ರ್‍ಯಾಲಿ, ಅಮಿತೋತ್ಸಾಹ, ಇತರ ರಾಜ್ಯಗಳ ಪ್ರತಿನಿಧಿಗಳನ್ನು ನೋಡಲು ಕಾಯುತ್ತಿದ್ದ ಜನ ಸಮೂಹಗಳ ಕಾತುರತೆ ಇವೆಲ್ಲಾ ಪಕ್ಷದ ಮೇಲೆ, ಅದರ ನೇತೃತ್ವದ ಮಂತ್ರಿಮಂಡಲದ ಮೇಲೆ ಸತತವಾಗಿ ಅಪವಾದ ಹೊರಿಸುತ್ತಿರುವ ಕಾಂಗ್ರೆಸ್(ಐ) ಹಾಗೂ ಅದರ ದಿನಪತ್ರಿಕೆಗಳಿಗೆ ತಕ್ಕ ಉತ್ತರ ನೀಡಿದೆ. ಕೋಮುಪಕ್ಷಗಳೊಡನೆ ಸ್ನೇಹ ಬೆಳೆಸಿ ಅವುಗಳೊಡನೆ ಶಾಮೀಲಾಗುವ ಕಾಂಗ್ರೆಸ್(ಐ) ನೀತಿಗಳಿಗೂ ತೋರಿದ ಅತ್ಯಂತ ಸ್ಪಷ್ಟ ಧಿಕ್ಕಾರವಾಗಿತ್ತದು.

-ಪಿ.ಡಿ.ಸಂಪಾದಕೀಯ.

ಪ್ರತಿನಿಧಿಗಳಲ್ಲಿ, ಕಾರ್ಮಿಕ ವರ್ಗದಿಂದ ಬಂದವರು 87 ಮಂದಿ, ಕೃಷಿ ಕೂಲಿಕಾರ ವರ್ಗದಿಂದ 18ಮಂದಿ, ಬಡರೈತರಿಂದ 65 ಮಂದಿಯಾದರೆ, ಮಧ್ಯಮ ರೈತ ಮೂಲದಿಂದ 146 ಮತ್ತು ಮಧ್ಯಮ ವರ್ಗಗಳಿಂದ 262. ಇಂತಹ ವರ್ಗದ ಸಂಯೋಜನೆಯಿದ್ದಾಗ ಹೆಚ್ಚಿನ ಭಾಷಣಗಳು ಇಂಗ್ಲೀಷಿನಲ್ಲೇ ನಡೆದದ್ದು ಅಚ್ಚರಿಯೇನಲ್ಲ. ಭಾಷಾಂತರಕ್ಕೆ ಕೊಟ್ಟ ಸಮಯ ಅತೀ ಅಲ್ಪ. ಈ ನ್ಯೂನ್ಯತೆ, ದೌರ್ಬಲ್ಯಗಳನ್ನು ಗಂಭೀರವಾಗಿ ತಗೊಳ್ಳಬೇಕು. ಬಹುಶಃ ಈ ಸ್ಥಿತಿ ನೋಡಿಯೇ ಹಿರಿಯ ಮುಖಂಡ ಕಮಲ್ ಸರ್ಕಾರ್ ಪಕ್ಷದಲ್ಲಿ ಕಾರ್ಮಿಕ ವರ್ಗದ ಅಂಶವನ್ನು ಹೆಚ್ಚಿಸಬೇಕೆಂಬ ತಿದ್ದುಪಡಿಯನ್ನು ರಾಜಕೀಯ ನಿರ್ಣಯಕ್ಕೆ ಸೂಚಿಸಿರುವುದು.

-ಪಿ.ಡಿ.ಸಂಪಾದಕೀಯ.

ಮಹಾಧಿವೇಶನ ತಕ್ಷಣದ ಕೆಲಸಗಳ ಬಗ್ಗೆಯಷ್ಟೇ ಗಮನಹರಿಸಿದ್ದಲ್ಲ. ಇನ್ನೂ ಮುಂದಿನ ಕರ್ತವ್ಯಗಳ ಬಗ್ಗೆ ಚರ್ಚಿಸುತ್ತಾ ಈಗಾಗಲೇ ಚಲಿಸಲಾರಂಭಿಸಿರುವ ಮೂಲಭೂತ ಜನಸಮೂಹಗಳನ್ನು ಸಂಘಟಿಸಬೇಕೆಂದು ಪಕ್ಷಕ್ಕೆ ಮತ್ತು ಅದರ ಸಾಮೂಹಿಕ ಸಂಘಟನೆಗಳಿಗೆ ಕರೆ ನೀಡಿತು. ಯಾಕೆಂದರೆ ಈ ಜನಸಮೂಹಗಳ ಏಕೀಕರಣದ ಆಧಾರದ ಮೇಲಷ್ಟೇ ಜನತೆ ಕರ್ಷಕ ಕ್ರಾಂತಿಯತ್ತ, ಜನತಾ ಪ್ರಜಾಪ್ರಭುತ್ವ ರಂಗದತ್ತ ಜನತಾ ಪ್ರಜಾಪ್ರಭುತ್ವದತ್ತ ಮುಂದೆ ಸಾಗಲು ಸಾಧ್ಯ. ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳನ್ನು ಮತ್ತಷ್ಟು ಬಲಪಡಿಸುವುದರೊಂದಿಗೆ ಅತ್ಯಂತ ಶೋಷಿತ ಕರ್ಷಕ ವಿಭಾಗಗಳಾದ ಹರಿಜನರು ಮತ್ತು ಆದಿವಾಸಿಗಳಲ್ಲಿ ಕಂಡು ಬರುತ್ತಿರುವ ಹೊಸ ಮನೋಭಾವದತ್ತ ವಿಶೇಷ ಗಮನ ಹರಿಸಬೇಕೆಂದು, ಮುಸ್ಲಿಂ ಅಲ್ಪಸಂಖ್ಯಾತರ ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಗೆ ನಿರಂತರ ಹೋರಾಟ ನಡೆಸಬೇಕೆಂದು ಮಹಾಧಿವೇಶನ ಕರೆ ನೀಡಿತು. ಈ ಮೂಲಕ ಮೂಲಭೂತ ಜನ ಸಮೂಹಗಳ ಎಲ್ಲಾ ವಿಭಾಗಗಳೂ ಬಂಡವಾಳಶಾಹಿ-ಭೂಮಾಲೀಕ ಆಳ್ವಿಕೆಗೆ ಸವಾಲೆಸೆದಿರುವ ಪ್ರಜಾಪ್ರಭುತ್ವ ಉತ್ಥಾಂತಿಯಲ್ಲಿ ಹೆಚ್ಚೆಚ್ಚಾಗಿ ಒಂದುಗೂಡುವಂತಾಗಬೇಕೆಂದು ಮಹಾಧಿವೇಶನ ಹೇಳಿತು.

-ಪಿ.ಡಿ.ಸಂಪಾದಕೀಯ

ವಿಜಯನಗರ ಉಕ್ಕು ಕಾರ್ಖಾನೆಯ ಕುರಿತು ಜಾಫರ್ ಷರೀಫ್ ಹೇಳಿಕೆಯ ಖಂಡನೆ

ಸಿ.ಪಿ.ಐ(ಎಂ) ಸೆಕ್ರೆಟಾರಿಯೇಟ್ ಸದಸ್ಯರಾದ ಕಾ|| ಎನ್.ಕೆ.ಉಪಾಧ್ಯಾಯರು ಬಿಜಾಪುರದಲ್ಲಿ ನೀಡಿದ ಪತ್ರಿಕಾ ಹೇಳಿಕೆಯಲ್ಲಿ ಕೇಂದ್ರ ಕಲ್ಲಿದ್ದಲು ರಾಜ್ಯ ಸಚಿವರಾದ ಜಾಫರ್ ಷರೀಫರು ವಿಜಯನಗರ ಉಕ್ಕಿನ ಕಾರ್ಖಾನೆಯ ಬದಲಾಗಿ ಹೊಸಪೇಟೆಯಲ್ಲಿ ಥರ್ಮಲ್ ವಿದ್ಯುತ್ ಕೇಂದ್ರ ಸ್ಥಾಪಿಸಲಾಗುವುದು ಎಂದು ಹೇಳಿರುವುದನ್ನು ಬಲವಾಗಿ ಖಂಡಿಸಿದ್ದಾರೆ. ಬಳ್ಳಾರಿ ಜಿಲ್ಲೆಯ ಹೊಸಪೇಟೆಯಲ್ಲಿ ಅತಿಹೆಚ್ಚು ಕಬ್ಬಿಣದ ಅಂಶ ಹೊಂದಿರುವ ಅದಿರು ಲಭ್ಯವಿರುವುದರಿಂದಲೇ 1970ರಲ್ಲಿ ಇಂದಿರಾಗಾಂಧಿಯವರು ಉಕ್ಕಿನ ಕಾರ್ಖಾನೆಗಾಗಿ ಅಡಿಗಲ್ಲು ಹಾಕಿದ್ದರೆಂದೂ, ಅದರದು ಬರೇ ಮತಗಳಿಕೆಯ ಚುನಾವಣಾ ಸ್ಟಂಟ್ ಆಗಿಯೇ ಉಳಿದಿರುವಾಗ, ಕರ್ನಾಟಕ ರಾಜ್ಯದ ಕೈಗಾರಿಕಾ ಬೆಳವಣಿಗೆಗೆ ಉಕ್ಕು ಅಗತ್ಯವಾಗಿರುವಾಗ ಜಾಫರ್ ಷರೀಫರ ಹೇಳಿಕೆ ಅಪಮಾನಕರವಾಗಿದೆಂದು ಎನ್.ಕೆ.ಉಪಾಧ್ಯಾಯರು ಹೇಳಿದ್ದಾರೆ. ಹೊಸಪೇಟೆಯಲ್ಲಿ ಉಕ್ಕು ಕಾರ್ಖಾನೆ ಸ್ಥಾಪನೆಯಿಂದ ನೂರಾರು ಸಣ್ಣ ಕೈಗಾರಿಕೆಗಳ ಉದಯಕ್ಕೆ ಅವಕಾಶ ಮಾಡಿಕೊಡುತ್ತದೆ. ನಿರುದ್ಯೋಗ ಸಮಸ್ಯೆ ಪರಿಹಾರಕ್ಕೆ ಅದು ಸ್ವಲ್ಪ ಮಟ್ಟಿಗಾದರೂ ಸಹಾಯವಾಗುತ್ತದೆ. ಸೇಲಂ, ವಿಶಾಖಪಟ್ಟಣ, ಪಂಜಾಬ್‌ಗಳಲ್ಲಿ ಉಕ್ಕು ಕಾರ್ಖಾನೆ ಪ್ರಾರಂಭವಾಗಿರುವಾಗ, ಕೇಂದ್ರ ಮಂತ್ರಿಯಾಗಿರುವ ಜಾಫರ್‌ಷರೀಫ್ ಅವರು ಉಕ್ಕು ಕಾರ್ಖಾನೆಯ ಬದಲಾಗಿ ಶಾಖ ವಿದ್ಯುತ್ ಕೇಂದ್ರ ಸ್ಥಾಪನೆಯ ಮಾತಾಡುತ್ತಿರುವುದು ಸರಿಯಲ್ಲ.

ರಾಜ್ಯಕ್ಕೆ ಥರ್ಮಲ್ ವಿದ್ಯುತ್ ಕೇಂದ್ರ ಬೇಕು. ಆದರೆ ಅದರ ಹೆಸರಿನಲ್ಲಿ ಉಕ್ಕಿನ ಕಾರ್ಖಾನೆ ಕೈಬಿಡುವುದು ಸರಿಯಲ್ಲ. ರಾಜ್ಯದ ಹಿತದೃಷ್ಟಿಯಿಂದ ಹೊಸಪೇಟೆ ಉಕ್ಕಿನ ಕಾರ್ಖಾನೆಯನ್ನು ಕೂಡಲೇ ಪ್ರಾರಂಭಿಸಬೇಕೆಂದು ತೀವ್ರ ಚಳುವಳಿ ನಡೆಸಿ, ಜಾಫರ್ ಷರೀಫರ ಹೇಳಿಕೆಯನ್ನು ಖಂಡಿಸಬೇಕೆಂದು ಎಲ್ಲ ರಾಜಕೀಯ ಪಕ್ಷ ಹಾಗೂ ಸಂಘ-ಸಂಸ್ಥೆಗಳಿಗೆ ಎನ್.ಕೆ.ಉಪಾಧ್ಯಾಯರು ಕರೆ ನೀಡಿದ್ದಾರೆ.

(ವಿಜಯನಗರ ಉಕ್ಕು ಕಾರ್ಖಾನೆ ಬರುವುದಕ್ಕೆ ತನ್ನ ವಿರೋಧವೇನೂ ಇಲ್ಲ, ನಾನು ವಿಜಯನಗರ ಉಕ್ಕಿನ ಕಾರ್ಖಾನೆ ಜೊತೆಗೆ ಹೊಸಪೇಟೆಯಲ್ಲಿ ಥರ್ಮಲ್ ವಿದ್ಯುತ್ ಕೇಂದ್ರವನ್ನು ಸ್ಥಾಪಿಸಬಹುದು ಎಂದು ಹೇಳಿದ್ದೇನೆ" ಎಂಬ ತಿದ್ದುಪಡಿಯನ್ನು ಮಂತ್ರಿಗಳು ತಾ|| 13ರಂದು ಪತ್ರಿಕೆಗಳಿಗೆ ನೀಡಿದ್ದಾರೆ. ಮಂತ್ರಿಗಳ ಹೇಳಿಕೆಗಳ ವೈಖರಿಯೇ ಹೀಗೆ. ತಮ್ಮ ಹೇಳಿಕೆಗಳಿಗೆ ಪ್ರತಿರೋಧ ಬಂದಾಗ ತಮ್ಮ ಹೇಳಿಕೆಗಳನ್ನು ಬದಲಾಯಿಸುವುದು ಅಥವಾ ಪತ್ರಿಕೆಗಳನ್ನು ಬೈಯ್ಯುವುದು)

ಭೂಸುಧಾರಣಾ ಸಮಾವೇಶ ಮುಂದೂಡಿಕೆ

ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಕೃಷಿ ಕೂಲಿಕಾರರ ಸಂಘದ ಜಂಟೀ ಆಶ್ರಯದಲ್ಲಿ ಫೆಬ್ರವರಿ 24-25 ರಂದು ಬೆಂಗಳೂರಿನಲ್ಲಿ ಸಂಘಟಸಲಾಗಿದ್ದ ರಾಜ್ಯ ಮಟ್ಟದ "ರಾಜ್ಯ ಭೂಸುಧಾರಣಾ ಸಮಾವೇಶ"ವನ್ನು ಅನಿವಾರ್ಯ ಕಾರಣದಿಂದ ಮುಂದೂಡಲಾಗಿದೆ. ಸಮಾವೇಶ ನಡೆಸುವ ದಿನಾಂಕವನ್ನು ಶೀಘ್ರದಲ್ಲೇ ಪ್ರಕಟಿಸಲಾಗುವುದೆಂದು ಈ ಕುರಿತು ಎಲ್ಲಾ ಶಾಖೆಗಳು ಗಮನ ಹರಿಸಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯದರ್ಶಿ ಕಾ॥ ಚಂದ್ರಶೇಖರ ಬಾಳೆಯವರು ತಿಳಿಸಿದ್ದಾರೆ.

ಕೇಂದ್ರ ಶಾಸನಕ್ಕೆ ಕೃಷಿ ಕಾರ್ಮಿಕರ ಒತ್ತಾಯ

ಉಡುಪಿತಾಲ್ಲೂಕು ಸಮ್ಮೇಳನದ ಪೂರ್ವಭಾವಿಯಾಗಿ ತಾಲ್ಲೂಕಿನ ಕೊರಂಗ್ರಪಾಡಿ ಕೆಳರ್ಕಳಬೆಟ್ಟು, ತೆಂಕನಿಟಯೂರು, ಕೊಡವೂರುಗಳಲ್ಲಿ ರೈತ ಕೃಷಿ ಕೂಲಿಕಾರರ ಸಭೆ ನಡೆಸಲಾಯಿತು. ಹಾಗೂ ತಾಲ್ಲೂಕು ಸಮ್ಮೇಳನಕ್ಕೆ ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಯಿತು. ಈ ಸಭೆಗಳಲ್ಲಿ ರೈತ ನಾಯಕರಾದ ಕಾ॥ ಡೇವಿಡ್ ಎ. ಕರ್ಕಡ ಹಾಗೂ ಸಾಧು ಅಮೀನ್, ದೊಗು ಸುವರ್ಣ, ಫ್ರೆಡಿಕ್ ಅಲ್ಬರ್ಟ್ ಸೊನ್ಸು, ಕೆ. ಸಂಜೀವ ಮುಂತಾದವರು ಮಾತನಾಡಿದರು.

ಉದ್ಯೋಗಕ್ಕಾಗಿ ಕಾಲ್ನಡೆ ಜಾಥ

ರಾಯಚೂರಿನ ಹಟ್ಟಿ ಚಿನ್ನದ ಗಣಿ ಕೈಗಾರಿಕೆಯಲ್ಲಿ 10 ಸಾವಿರ ಮಂದಿ ದುಡಿಯುವಲ್ಲಿ ಕೇವಲ 5 ಸಾವಿರ ಮಂದಿಯನ್ನು ಕೆಲಸಕ್ಕೆ ನೇಮಿಸಿಕೊಂಡು ದುಡಿಸುತ್ತಿರುವ ಆಡಳಿತ ವರ್ಗ ಹೊಸದಾಗಿ ಉದ್ಯೋಗ ಅವಕಾಶಗಳನ್ನು ಒದಗಿಸುವುದಕ್ಕೆ ಕಡಿವಾಣ ಹಾಕಿದೆ. ಉದ್ಯೋಗ ಕಳೆದು ಕೊಂಡವರ ಮಕ್ಕಳಿಗೆ ಉದ್ಯೋಗ ನೀಡಬೇಕೆಂದು, ಬರಗಾಲ ಕಾಮಗಾರಿ ಯೋಜನೆ ಅನ್ವಯ ನಿರುದ್ಯೋಗಿ ಯುವಕರಿಗೆ ಉದ್ಯೋಗ ಕಲ್ಪಿಸಬೇಕೆಂದು, ಸೈನಾಯಿಡ್ ವಿಷ ಅನಿಲದಿಂದ ಭೂಮಿ ಕಳೆದುಕೊಂಡವರಿಗೆ ಪರಿಹಾರ ಹಾಗೂ ನಾಗರೀಕ ಸೌಲಭ್ಯ ಒದಗಿಸಬೇಕೆಂದು ಒತ್ತಾಯಿಸಿ ಸುಮಾರು 600ಕ್ಕೂ ಹೆಚ್ಚು ರೈತ-ಕಾರ್ಮಿಕ ವಿದ್ಯಾರ್ಥಿ ಯುವಜನ ಮಹಿಳೆಯರು ಹಟ್ಟಿ ಮತ್ತು ಕೋಠಾದಿಂದ ಲಿಂಗಸುಗೂರುವರೆಗೆ ಕಾಲ್ನಡೆ ಜಾಥ ನಡೆಸಿದರು.

ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ನಡೆದ ಜಾಥದ ನಾಯಕತ್ವವನ್ನು ರೈತ ನಾಯಕ ಕಾ॥ ಕಂಟೆಪ್ಪ ಮಟ್ಟೂರು, ಕಾ॥ ಶರಣಪ್ಪ ನಾಗಪುರ ಹಾಗೂ ಹಟ್ಟಿ ಮಂಡಲ ಪಂಚಾಯ್ತಿ ವಿರೋಧ ಪಕ್ಷದ ನಾಯಕರು, ಕಾರ್ಮಿಕ ಮುಖಂಡರು ವಹಿಸಿದ್ದರು.

ಮನೆ ನಿವೇಶನಕ್ಕಾಗಿ ಬೀಡಿ ಕಾರ್ಮಿಕರ ಜಾಥ

ಚಿತ್ರದುರ್ಗ ಜಿಲ್ಲೆ ರಾಣೆಬೆನ್ನೂರು ನಗರ ಸಭೆ ವ್ಯಾಪ್ತಿಯಲ್ಲಿರುವ ಎ.ಕೆ.ಜಿ. ಕಾಲೋನಿ ಮತ್ತು ಸಿದ್ದೇಶ್ವರ ನಗರ ಕೊಳಚೆ ಪ್ರದೇಶದಲ್ಲಿ ವಾಸವಾಗಿರುವ ದುರ್ಬಲ ವರ್ಗದ ಬೀಡಿ ಕಾರ್ಮಿಕರಿಗೆ ಅವರ ನಿವೇಶನವನ್ನು ಖಾಯಂಗೊಳಿಸಿ ಹಕ್ಕುಪತ್ರ ಬೀಡಿ ಮನೆ ಕಟ್ಟಿಕೊಳ್ಳಲು ಸೌಲಭ್ಯ ಒದಗಿಸಬೇಕೆಂದು ಒತ್ತಾಯಿಸಿ 300ಕ್ಕೂ ಹೆಚ್ಚು ಬೀಡಿ ಕಾರ್ಮಿಕರು ರಾಣೆಬೆನ್ನೂರಿನಿಂದ ಹಾವೇರಿಗೆ ಜಾಥ ನಡೆಸಿ ಉಪ ವಿಭಾಗಾಧಿಕಾರಿಗಳನ್ನು ಒತ್ತಾಯಿಸಿದರು.

ನಂತರ ಸಭೆಯನ್ನುದ್ದೇಶಿಸಿ ಮಾತನಾಡಿದ ಬೀಡಿ ಕಾರ್ಮಿಕ ಸಂಘದ ಕಾರ್ಯದರ್ಶಿ ಕಾ॥ ನಿತ್ಯಾನಂದಸ್ವಾಮಿಯವರು ಬೀಡಿ ಕಾರ್ಮಿಕರ ಕಲ್ಯಾಣ ನಿಧಿಯಲ್ಲಿ ಕೋಟಿಗಟ್ಟಲೆ ಹಣವಿದ್ದರೂ ಅದರ ಪ್ರಯೋಜನವನ್ನು ಬೀಡಿ ಕಾರ್ಮಿಕರಿಗೆ ಒದಗಿಸುವಲ್ಲಿ ರಾಜ್ಯ ಸರ್ಕಾರ ವಿಫಲಗೊಂಡಿದೆ ಎಂದು ಆರೋಪಿಸಿದರು. ಹಾನಗಲ್ಲ ಸಿ.ಪಿ.ಐ.(ಎಂ) ಮುಖಂಡ ಫಕೀರಪ್ಪ ಹೋತನಳ್ಳಿ ಮತ್ತು ಎಂ.ಜಿನ್ನಾ ಮಾತನಾಡಿದರು. ಹಿರಿಯ ಸ್ವಾತಂತ್ರ ಹೋರಾಟಗಾರ ರೈತ ನಾಯಕ ಕಾ॥ ಪಂಚಾಕ್ಷರಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕಾ॥ ನಜೀರ್‌ಸಾಬ ಮಲ್ಲಾರ್, ಬಾಬನ್‌ಸಾಬ ಕರ್ಜಗಿ, ಬೈರಪ್ಪ ಹಣಿಗಿ, ಬಸವರಾಜ ಅತಡಕರ ಮತ್ತು ನಿಂಗಪ್ಪ ವಿಭೂತಿ ಜಾಥ ನೇತೃತ್ವ ವಹಿಸಿದ್ದರು.

ತಿದ್ದುಪಡಿ

ಸಂಚಿಕೆ 5 (29 ಜನವರಿ 1989)ರಲ್ಲಿ "ಭೂಸಂಬಂಧಗಳು........."(ಪುಟ-2) ಈ ಲೇಖನದಲ್ಲಿ ಮುಂದುವರೆದ ಭಾಗದ (ಪುಟ 6) ಬಗ್ಗೆ ಅಸ್ಪಷ್ಟತೆಯಿದೆಯೆಂಬ ಅಂಶವನ್ನು ಕೆಲವು ಓದುಗರು ನಮ್ಮ ಗಮನಕ್ಕೆ ತಂದಿದ್ದಾರೆ. ಪುಟ 6ರಲ್ಲಿ ಮುಂದುವರೆದ ಭಾಗದ ಮೊದಲ ಎರಡು ಕಾಲಂಗಳು "ಕೋಲಾರ ಸಮಾವೇಶ"ದ ವರದಿಯ ಭಾಗವಾಗಿದ್ದು ಎರಡನೇ ಕಾಲಂ ಕೊನೆಯಲ್ಲಿ "ಬಾಳೆ ಸಮಾರೋಪ ಭಾಷಣ ಮಾಡಿದರು" ಎಂಬುದರೊಂದಿಗೆ ಮುಕ್ತಾಯವಾಗುತ್ತದೆ. "ಸ್ವಾತಂತ್ರ ಪೂರ್ವ ಹಾಗೂ... ಇದರೊಂದಿಗೆ ಆರಂಭವಾಗುವ ಭಾಗ "ಭೂಸಂಬಂಧಗಳು..." ಲೇಖನದ ಮುಂದುವರೆದ ಭಾಗವಾಗಿದೆ. ಇದು ನಂತರದ ಮೂರು ಕಾಲಂಗಳು ಮುಂದುವರೆದಿದೆ. ಈ ತಪ್ಪಿಗಾಗಿ ಕ್ಷಮೆ ಕೋರುತ್ತೇವೆ.

ವೆಸ್ಟ್‌ಕೋಸ್ಟ್ ಪೇಪರ್ ಮಿಲ್ ಚುನಾವಣೆ ಕಾ॥ ವಿ.ಜೆ.ಕೆ.ನಾಯರ್ ಅಧ್ಯಕ್ಷರಾಗಿ ಪುನರಾಯ್ಕೆ

ದಾಂಡೇಲಿಯ ವೆಸ್ಟ್‌ಕೋಸ್ಟ್ ಪೇಪರ್ ಮಿಲ್ ಎಂಪ್ಲಾಯಿಸ್ ಯೂನಿಯನ್ (ಸಿ.ಐ.ಟಿ.ಯು.) ಸಂಘಕ್ಕೆ ನಡೆದ ಚುನಾವಣೆಯಲ್ಲಿ ಸಂಘದ ಅಧ್ಯಕ್ಷರಾಗಿ ಸಿ.ಐ.ಟಿ.ಯು. ರಾಜ್ಯ ಕಾರ್ಯದರ್ಶಿಯವ ರಾದ ಕಾ॥ ವಿ.ಜೆ.ಕೆ.ನಾಯರ್‌ರವರು ಪುನರಾಯ್ಕೆಯಾಗಿದ್ದಾರೆ. ಉಪಾಧ್ಯಕ್ಷರುಗಳಾಗಿ ಶಿವರಾಮಸಾಮಂತ ಕಾ॥ ಗಜಾನನನಾಯ್ಕ ಪ್ರಧಾನ ಕಾರ್ಯದರ್ಶಿಯಾಗಿ ಕಾ॥ ಉಮೇಶ ನಾಯ್ಕ ಪುನರಾಯ್ಕೆಗೊಂಡಿದ್ದಾರೆ. ಸಹಕಾರ್ಯದರ್ಶಿಯಾಗಿ ಉಮೇಶಮಲ್ಯ, ಸಂಘಟನಾ ಕಾರ್ಯದರ್ಶಿಯಾಗಿ ಕಾ॥ ಕಾಶಿಂಖಾನ್ ಹಾಗೂ ಖಜಾಂಚಿಯಾಗಿ ಕಾ॥ ಮನೋಹರನಾಯ್ಕ ಆಯ್ಕೆಗೊಂಡಿದ್ದಾರೆ. ಕಾರ್ಯಕಾರಿ ಸಮಿತಿಗೆ ಮೂರು ಮಹಿಳೆಯರು ಸೇರಿ 18 ಮಂದಿ ಆಯ್ಕೆಯಾಗಿದ್ದಾರೆ.

ಮಾರ್ಚ್ 6ರಿಂದ 11ರವರೆಗೆ

ಬೀಡಿ ಕಾರ್ಮಿಕರ ರಾಜ್ಯ ವ್ಯಾಪೀ ಚಳುವಳಿ

ಜನವರಿ 19ರಂದು ಕರ್ನಾಟಕ ಬೀಡಿ ಕಾರ್ಮಿಕರ ಒಕ್ಕೂಟದ ಸಭೆ ಮಂಗಳೂರಿನಲ್ಲಿ ಸಿ.ಐ.ಟಿ.ಯು. ಮುಖಂಡ ಕಾ॥ ಕೆ.ಮೂಸಬ್ಬನವರ ಅಧ್ಯಕ್ಷತೆಯಲ್ಲಿ ಜರುಗಿತು.

ಕಂಟ್ರಾಕ್ಟ್ ಪದ್ಧತಿಯ ರದ್ಧತಿಯ ಬಗ್ಗೆ ನೇಮಿಸಿದ ಕಾ॥ ವಿ.ಜೆ.ಕೆ.ನಾಯರ್‌ರವರ ಸಮಿತಿಯ ರಾಜ್ಯದ ಬೇರೆ ಬೇರೆ ಪ್ರದೇಶಕ್ಕೆ ಸಂದರ್ಶನ ಮಾಡಿದ ಸಂದರ್ಭದಲ್ಲಿ ಆ ಸಮಿತಿಯ ಮುಂದೆ ಕಾರ್ಮಿಕರ ಪರವಾಗಿ ಕಾಂಟ್ರಾಕ್ಟ್ ಪದ್ಧತಿಯ ವಿರುದ್ಧ ಸಲ್ಲಿಸಿದ ವರದಿ ಹಾಗೂ ಮನವಿಗಳ ಬಗ್ಗೆ ಸಭೆಗೆ ಕಾ॥ ವಿ.ಜೆ.ಕೆ.ನಾಯರ್‌ರವರು ವಿವರಣೆ ನೀಡಿದರು.

ಸರ್ಕಾರಕ್ಕೆ ಸಮಿತಿಯು ವರದಿ ಸಲ್ಲಿಸಿದ ಬಳಿಕ ಸರ್ಕಾರ ಅದನ್ನು ಅಂಗೀಕರಿಸಿ ಜಾರಿಗೊಳಿಸಲು ಒತ್ತಾಯಿಸಿ ಚಳುವಳಿ ನಡೆಸಬೇಕೆಂದು ನಿರ್ಧರಿಸಲಾಯಿತು.

ರಾಜ್ಯಾದ್ಯಂತ 3ವರ್ಷದಿಂದ ಮೂಲ ಕೂಲಿ ಹೆಚ್ಚಳವಿಲ್ಲದೆ ಕನಿಷ್ಠ ಕೂಲಿ ನಿರ್ಣಯಿಸುವಾಗಲೂ ಕಡಿಮೆ ಕೂಲಿ ನಿಗದಿ ಮಾಡಿ ಕಾರ್ಮಿಕರಿಗೆ ತೀರಾ ಅನ್ಯಾಯವೆಸಗಿರುವುದನ್ನು ಖಂಡಿಸಿ ಸಾವಿರ ಬೀಡಿಗೆ 20 ರೂ. ಕೂಲಿ ನಿರ್ಣಯವಾಗಲು ಹಾಗೂ ಬೆಲೆ ಏರಿಕೆಗನುಗುಣವಾಗಿ 65 0 ಪಾಯಿಂಟುಗಳನ್ನು ಆಧಾರವಾಗಿಟ್ಟು ಪಾಯಿಂಟಿಗೆ 5 ಪೈಸೆಯಂತೆ ತುಟ್ಟಿ ಭತ್ಯೆ ನಿಗದಿ ಮಾಡಲು ಒತ್ತಾಯಿಸಿ ಮಾರ್ಚ್ 6ರಿಂದ 11ರವರೆಗೆ ರಾಜ್ಯದೆಲ್ಲೆಡೆ ಎಲ್ಲಾ ತಾಲ್ಲೂಕು ಹಾಗೂ ಜಿಲ್ಲಾ ಕೇಂದ್ರದಲ್ಲಿ ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಿ ಅಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಬೇಕೆಂದು ಕರೆ ನೀಡಿದೆ.

ಬೀದರ್‌ನಲ್ಲಿ ಕೋಮು ಸೌಹಾರ್ದ ರಂಗಮೇಳ-89

ಬೀದರ್ ಸಮುದಾಯ ನಾಟಕ ತಂಡ ಹಾಗೂ ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೀದರ್ ಇವರ ಸಂಯುಕ್ತ ಆಶ್ರಯದಲ್ಲಿ 10 ದಿನಗಳ ಕೋಮು ಸೌಹಾರ್ದ ರಂಗಮೇಳ-89ನ್ನು ಸಂಘಟಿಸಲಾಗಿದೆ. ಬೀದರ್‌ನಲ್ಲಿ ಸಿಖ್ಖ್ ವಿದ್ಯಾರ್ಥಿಗಳ ಮೇಲೆ ನಡೆದ ಹಿಂಸಾಚಾರದ ಹಿನ್ನೆಲೆಯಲ್ಲಿ ಇಲ್ಲಿಯ ಜನ ಸಮುದಾಯದ ನಡುವೆ ಉಂಟಾಗಿರುವ ದುಗುಡ ದುಮಾನಗಳಿಗೆ ಅಂತ್ಯ ಹೇಳಲು ಎಲ್ಲಾ ಕೋಮಿನ ನಡುವೆ ಸಾಮರಸ್ಯ ಸೌಹಾರ್ದತೆ ಕಾಪಾಡಲು ಹಮ್ಮಿಕೊಂಡಿರುವ ಈ ರಂಗ ಮೇಳದಲ್ಲಿ ವಿವಿಧ ನಾಟಕ ತಂಡಗಳು ಪಾಲ್ಗೊಂಡು ಮನೋರಂಜನಾ ಕಾರ್ಯಕ್ರಮ ನೀಡುತ್ತಿವೆ. ಸಮುದಾಯ ಗುಲ್ಬರ್ಗಾ ತಂಡ ಮಹಿಮಾಪುರ ನಾಟಕವನ್ನು ಫೆಬ್ರವರಿ 10ರಂದು ಪ್ರದರ್ಶಿಸಿತು. ಈ ನಾಟಕದ ನಿರ್ದೇಶಕ ಶಂಕರಯ್ಯ ಆರ್. ಘಂಟಿ, ಬೀದರ್ ಸಮುದಾಯ ತೇಜಸ್ವಿಯವರ ತಬರನಕತೆ ನಾಟಕವನ್ನು 12ರಂದು ಪ್ರದರ್ಶಿಸಿತು. ಫೆಬ್ರವರಿ 15 ರಂದು ರಾಯಚೂರು ಸಮುದಾಯ ಚಾರ್ವಾಕ ನಾಟಕ ಪ್ರದರ್ಶಿಸಿತು. 16ರಂದು ರಾಯಚೂರು ಸಮುದಾಯ ಜೋಗತಿ ಎಂಬ ನಾಟಕ ಪ್ರದರ್ಶಿಸಿತು. ಈ ನಾಟಕಗಳ ನಿರ್ದೇಶಕ ಜನಾರ್ಧನ. ಫೆಬ್ರವರಿ 19ರಂದು ಸಿಂಧನೂರು ಸಮುದಾಯ ಶಂಕರಶೇಷರ ಪೋಸ್ಟರ ನಾಟಕ ಪ್ರದರ್ಶಿಸುತ್ತಿದೆ. ಸಮಸ್ತ ಜನರನ್ನು ಒಂದು ಗೂಡಿಸಲು ಮಾಧ್ಯಮವಾಗಿ ಈ ಸೌಹಾರ್ದರಂಗ ಮೇಳ ಯಶಸ್ವಿಯಾಗಲೆಂದು ಹಾರೈಸೋಣ.

ಸಮುದಾಯ ಹೂವಿನಹಡಗಲಿ ಘಟಕ ಸಭೆ

ಫೆಬ್ರವರಿ 5 ರಂದು ಸಮುದಾಯ ಸರ್ವ ಸದಸ್ಯರ ಸಭೆ ಜರುಗಿತು. ಎಂ. ಎನ್.ಕೊಟ್ರೇಶ್ ಅಧ್ಯಕ್ಷತೆ ವಹಿಸಿದ್ದರು. ಕಾ॥ ಸಫ್ದರ್‌ಹಶ್ಮಿಯವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಕಾರ್ಯದರ್ಶಿ ಚಂದ್ರಶೇಖರ ಬೆನ್ನೂರ ವರದಿ ಮಂಡಿಸಿದರು. ನೂತನ ಸಮಿತಿಗೆ ಎನ್.ಎಂ.ಕೋಟ್ರೇಶ್ (ಅಧ್ಯಕ್ಷ) ಹೆಚ್. ಶೇಷಗಿರಿರಾವ್ (ಕಾರ್ಯದರ್ಶಿ) ಶಾಂತಮ್ಮ (ಸಹಕಾರ್ಯದರ್ಶಿ) ವಿಶ್ವನಾಥಯ್ಯ (ಖಜಾಂಚಿ) ಚಂದ್ರಶೇಖರ ಬೆನ್ನೂರ, ಎಸ್.ವಿ.ಮಟ್ಟಿ ಸಂಘಟನಾ ಕಾರ್ಯದರ್ಶಿಗಳಾಗಿ ಆಯ್ಕೆಯಾಗಿದ್ದಾರೆ. ವಿವಿಧ ಸಂಘಟನೆಗಳ ಮುಖಂಡರು ಭಾಗವಹಿಸಿ ಶುಭಾಶಯ ಕೋರಿದರು.

ಭೂಮಿ ಸಕ್ರಮಕ್ಕೆ ಒತ್ತಾಯಿಸಿ ಸಭೆ

ಬಂಟ್ವಾಳ ತಾಲೋಕಿನ ಕಲ್ಕುರಿ ಗ್ರಾಮದಲ್ಲಿ ಕೃಷಿ ಕೂಲಿಗಾರರ ಸಾರ್ವಜನಿಕ ಸಭೆ ಕಾ॥ ಬಿ. ಮಂಜುನಾಥರವರ ಅಧ್ಯಕ್ಷತೆಯಲ್ಲಿ ಜರುಗಿತು. ಸಭೆಯನ್ನುದ್ದೇಶಿಸಿ ರೈತಸಂಘದ ದ.ಕ.ಜಿಲ್ಲಾ ಉಪಾಧ್ಯಕ್ಷ ಕಾ॥ ಯು. ಜನಾರ್ಧನನ್ನಾಕರವರು ಮಾತನಾಡಿ ಸಂಘಟನೆ ಬಲಪಡಿಸಿ ಹಕ್ಕುಗಳಿಗಾಗಿ ಹೋರಾಡಲು ಕರೆ ನೀಡಿದರು. ಕೃಷಿಕೂಲಿಗಾರರು ಸಾಗುವಳಿ ಮಾಡುತ್ತಿರುವ ಸರ್ಕಾರಿ ಜಮೀನಿಗೆ ಯಾವುದೇ ದಂಡನೆ, ಬೆಲೆ ವಸೂಲಿ ಮಾಡದೆ ಸಕ್ರಮಗೊಳಿಸಿ ಹಕ್ಕು ಪತ್ರ ನೀಡಬೇಕೆಂದು ತಾಲೋಕು ಸಿ.ಪಿ.ಐ.(ಎಂ) ಮುಖಂಡ ಕಾ॥ ಬಿ. ವಾಸುಗಟ್ಟಿ ಒತ್ತಾಯಿಸಿದರು. ತಾಲೋಕು ರೈತ ಸಂಘದ ಕಾ॥ ಬಿ. ನಾರಾಯಣ ಉಪಾಧ್ಯಕ್ಷ ಬಿ. ಹೂವಯ್ಯ ಮಾತನಾಡಿದರು. ಕೊನೆಯಲ್ಲಿ ದೇಜಪ್ಪ ವಂದಿಸಿದರು.

ಹೋಟೆಲ್ ಕಾರ್ಮಿಕ ಸಂಘದ 11ನೇ ವಾರ್ಷಿಕ ಸಮ್ಮೇಳನ

ಕನಿಷ್ಠ ವೇತನ, ಸೌಲತ್ತಿಗಾಗಿ ಉಗ್ರ ಚಳುವಳಿಗೆ ಕರೆ

ಹೋಟೇಲ್ ಕಾರ್ಮಿಕರು ತಮ್ಮ ಅಮಾನವೀಯ ಬದುಕಿಗೆ ಕೊನೆ ಕಾಣಲು ಉದ್ಯೋಗ ಭದ್ರತೆ ಕಾನೂನು ಬದ್ಧ ಸೌಲಭ್ಯ ಹಾಗೂ ಕನಿಷ್ಠ ವೇತನ ಸಾವಿರ ರೂಪಾಯಿ ಅನುಷ್ಠಾನಕ್ಕೆ ಉಗ್ರ ರೀತಿಯ ಚಳುವಳಿಗೆ ಇಳಿಯಬೇಕೆಂದು ಸಿ.ಐ.ಟಿ.ಯು. ರಾಜ್ಯ ಅಧ್ಯಕ್ಷ ಕಾ॥ ಎಸ್.ಸೂರ್ಯನಾರಾಯಣರಾವ್‌ರವರು ಕರೆ ನೀಡಿದರು. ಅವರು ಬೆಂಗಳೂರು ಜಿಲ್ಲಾ ಹೋಟೆಲ್ ಕಾರ್ಮಿಕರ 11ನೇ ವಾರ್ಷಿಕ ಸಮ್ಮೇಳನವನ್ನು ಫೆಬ್ರವರಿ 14ರಂದು ಉದ್ಘಾಟಿಸಿ ಮಾತನಾಡುತ್ತಿದ್ದರು.

ಬೆಂಗಳೂರು ನಗರದಲ್ಲಿರುವ ಹೋಟೆಲ್‌ಗಳಲ್ಲಿ 1ಲಕ್ಷದ 5 0ಸಾವಿರ ಜನ ಕಾರ್ಮಿಕರಿದ್ದು ಈ ಅಸಂಘಟಿತ ಕಾರ್ಮಿಕರನ್ನು ಪಶುಗಳಂತೆ ಕಾಣುವ ಮಾಲೀಕರು, ಕಾಯ್ದೆ ಕಾನೂನುಗಳನ್ನು ಜಾರಿ ಮಾಡದ ಕಾರ್ಮಿಕ ಇಲಾಖೆ, ಇವರೊಡನೆ ಕೈಜೋಡಿಸುವ ಪೊಲೀಸರ ದಾಳಿಗಳಲ್ಲಿ ಸಿಕ್ಕಿ ಕಾರ್ಮಿಕರು ನುಜ್ಜುಗುಜ್ಜಾಗಿದ್ದಾರೆ.

ರಾಜೀವ್‌ಗಾಂಧಿಯವರ ಕಾಂಗ್ರೆಸ್ ಸರ್ಕಾರವಿರಲಿ, ಬೊಮ್ಮಾಯಿ ಸರ್ಕಾರವಿರಲಿ ಹೋಟೆಲ್ ಕಾರ್ಮಿಕರಿಗೆ ನ್ಯಾಯ ದೊರಕಿಸುವಲ್ಲಿ ವಿಫಲವಾಗಿವೆ. ಚುನಾವಣೆಗಳಲ್ಲಿ ಹೋಟಲ್ ಮಾಲೀಕರಿಂದ ಎತ್ತೆಚ್ಚವಾಗಿ ಹಣ ಪಡೆದು ಕಾನೂನುಗಳನ್ನು ಗಾಳಿಗೆ ತೂರಿ ಹೋಟಲ್ ಕಾರ್ಮಿಕರನ್ನು ಶೋಷಣೆ ಮಾಡಲು ಬೇಕಾದ ಎಲ್ಲಾ ಅನುಕೂಲವನ್ನು ಸರ್ಕಾರ ಮಾಡಿದೆ ಎಂದು ಅವರು ಆರೋಪಿಸಿದರು.

ಮೊದಲಿಗೆ ಸಂಘದ ಪ್ರಧಾನ ಕಾರ್ಯದರ್ಶಿ ಕಾ॥ ಇ.ಕೆ.ಎನ್.ರಾಜನ್‌ರವರು ಕಳೆದ ಒಂದು ವರ್ಷದ ಚಟುವಟಿಕೆಗಳ ವರದಿಯನ್ನು ಮಂಡಿಸಿದರು. ಚರ್ಚೆ ನಂತರ ವರದಿಯನ್ನು ಸಭೆ ಅಂಗೀಕರಿಸಿತು. ಸಮ್ಮೇಳನಕ್ಕೆ ಸಿ.ಐ.ಟಿ.ಯು. ಮುಖಂಡರಾದ ಕಾ॥ ಪಿ.ಕೆ.ಸುಬ್ರಮಣಿ, ರೈತ ಸಂಘದ ಕಾ॥ ಲಕ್ಷ್ಮಣ ವಕೀಲರ ಸಂಘದ ಕಾ॥ ಗೋಪಾಲಗೌಡ, ಯುವಜನ ಫೆಡರೇಷನ್‌ನ ಕಾ॥ ಟಿ.ಶಿವಶಂಕರ್, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದಿಂದ ಕಾ॥ ಎಸ್.ಆರ್.ಆರಾಧ್ಯ ಶುಭಾಶಯ ಕೋರಿ ಮಾತನಾಡಿದರು.

ಕನಿಷ್ಠ ವೇತನ ಒಂದು ಸಾವಿರ ನಿಗಧಿಗೊಳಿಸಬೇಕೆಂದು, ಕನಿಷ್ಠ ವೇತನ ಜಾರಿಗೊಳಿಸದ ಹೋಟಲ್ ಮಾಲೀಕರ ಲೈಸನ್ಸ್ ರದ್ದುಗೊಳಿಸುವ ಅಧಿಕಾರ ಕಾರ್ಮಿಕ ಇಲಾಖೆಗೆ ವಹಿಸಬೇಕು, ಉದ್ಯೋಗ ಭದ್ರತೆ ಒದಗಿಸಿ ಪ್ರತಿಯೊಬ್ಬ ಕೆಲಸಗಾರನಿಗೂ ಗುರುತಿನ ಚೀಟಿ ಕಡ್ಡಾಯವಾಗಿ ನೀಡಬೇಕು. ಬೆಲೆ ಏರಿಕೆಗನುಗುಣವಾಗಿ ಪ್ರತಿ ಪಾಯಿಂಟಿಗೆ 2ರೂ. ತುಟ್ಟಿಭತ್ಯೆ ನೀಡಬೇಕು, ಸಾರ್ವಜನಿಕ ಆರೋಗ್ಯ ರಕ್ಷಣೆ ದೃಷ್ಟಿಯಿಂದ ಹೋಟೆಲ್‌ಗಳಲ್ಲಿ ಶುಚಿತ್ವ ಕಾಪಾಡುವಂತೆ ಮಾಲೀಕರ ಮೇಲೆ ಆರೋಗ್ಯ ಇಲಾಖೆ ಕ್ರಮ ಜರುಗಿಸಬೇಕು, ಕೇಂದ್ರ ಸರ್ಕಾರ ಇತ್ತೀಚೆಗೆ ಏರಿಸಿರುವ ಅಕ್ಕಿ ಬೆಲೆ ಹಾಗೂ ರಾಜ್ಯ ಸರ್ಕಾರ ಹೆಚ್ಚಿಸಿರುವ ಹಾಲಿನ ಬೆಲೆ ಏರಿಕೆಯನ್ನು ಖಂಡಿಸುವ ಮುಂತಾದ ನಿರ್ಣಯಗಳನ್ನು ಸಮ್ಮೇಳನ ಕೈಗೊಂಡಿತು.

ನೂತನ ಸಾಲಿಗೆ ಸಂಘದ ಪದಾಧಿಕಾರಿಗಳನ್ನಾಗಿ ಈ ಕೆಳಕಂಡವರನ್ನು ಆರಿಸಲಾಯಿತು.

ಕಾ॥ ಗಣಪತಿ ಹೆಗಡೆ ವಕೀಲರು (ಅಧ್ಯಕ್ಷರು)

ಕಾ॥ ಎ.ಆರ್.ಅಡವೀಸ್

ಕಾ॥ ಸದಾಶಿವ (ಉಪಾಧ್ಯಕ್ಷರು)

ಕಾ॥ ಇ.ಕೆ.ಎನ್.ರಾಜನ್ (ಪ್ರಧಾನ ಕಾರ್ಯದರ್ಶಿ)

ಕಾ॥ ಸಿ. ರಾಮಯ್ಯ (ಸಹಕಾರ್ಯದರ್ಶಿ)

ಕಾ॥ ಅಯ್ಯಪ್ಪ (ಖಜಾಂಚಿ)

ಕಾರ್ಯಕಾರಿ ಸಮಿತಿಗೆ 25 ಜನರನ್ನು ಆರಿಸಲಾಯಿತು. ಸಿ.ಐ.ಟಿ.ಯು. ಬೆಂಗಳೂರು ಜಿಲ್ಲಾ ಸಮ್ಮೇಳನಕ್ಕೆ 37 ಜನ ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಯಿತು.

ಪಕ್ಷದ ಮಹಾಧಿವೇಶನಗಳು

-ಇ.ಎಂ.ಎಸ್. ನಂಬೂದರಿಪ್ಪಾಡ್

ಇತ್ತೀಚೆಗೆ ಮುಕ್ತಾಯವಾದ ಸಿ.ಪಿ.ಐ.(ಎಂ)ನ 13ನೇ ಮಹಾಧಿವೇಶನ ದೇಶದ ಕಮ್ಯೂನಿಸ್ಟ್ ಆಂದೋಲನದಲ್ಲಿ ಒಂದು ಮೈಲಿಗಲ್ಲು. ಇದಕ್ಕೆ ಮೊದಲು ಸಿ.ಪಿ.ಐ.(ಎಂ)ನ ಆರು ಮಹಾಧಿವೇಶನಗಳು, ಅವಿಭಜಿತ ಕಮ್ಯೂನಿಸ್ಟ್ ಪಕ್ಷದ ಆರು ಮಹಾಧಿವೇಶನಗಳು ಜರುಗಿವೆ. ಕಳೆದ ಸುಮಾರು ಏಳು ದಶಕಗಳಲ್ಲಿ ಭಾರತದಲ್ಲಿ ಕಮ್ಯೂನಿಸ್ಟ್ ಆಂದೋಲನದ ಬೆಳವಣಿಗೆಯನ್ನು ಪಕ್ಷದ ಮಹಾಧಿವೇಶನಗಳ ಅವಲೋಕನದ ಮೂಲಕ ಸಿ.ಪಿ.ಐ.(ಎಂ) ಪ್ರಧಾನಕಾರ್ಯದರ್ಶಿಯವರು ಈ ಲೇಖನದಲ್ಲಿ ವಿವರಿಸುತ್ತಾರೆ.

ಭಾರತದ ವಿವಿಧ ಭಾಗಗಳಲ್ಲಿ ಪ್ರಾರಂಭಗೊಂಡ ಕಮ್ಯೂನಿಸ್ಟ್ ಗುಂಪುಗಳು 25 ವರ್ಷಗಳ ನಂತರ 1943ರಲ್ಲಿ ಬೊಂಬಾಯಿಯಲ್ಲಿ ಪಕ್ಷದ ಮೊದಲನೆಯ ಮಹಾಧಿವೇಶನವನ್ನು ನಡೆಸಿದವು. ಈ ವಿಳಂಬಕ್ಕೆ ಕಾರಣವೇನು ?

ಕಮ್ಯೂನಿಸ್ಟರು ಸ್ವತಂತ್ರವಾಗಿ ಕೆಲಸ ಮಾಡಲು ಅನುಮತಿ ನೀಡುವುದಿಲ್ಲ ಎಂಬುದಾಗಿ ಬ್ರಿಟಿಷ್ ಆಡಳಿತಗಾರರು ದೃಢ ನಿಶ್ಚಯ ಮಾಡಿದ್ದರು. "ಕಮ್ಯೂನಿಸಂ ಒಂದು ವಿದೇಶೀ ಸಿದ್ಧಾಂತ, ಈಗಿರುವುದನ್ನೆಲ್ಲಾ ಬುಡಮೇಲು ಮಾಡಲು ಪ್ರಯತ್ನಿಸುವುದೇ ಅದರ ಗುರಿ, ಆದ್ದರಿಂದ ಅದನ್ನು ಬೆಳೆಯಲು ಬಿಡಬಾರದು" ಎಂಬುದು ಬ್ರಿಟಿಶ್ ಆಡಳಿತಳಿತಗಾರರ ನಿಲುವಾಗಿತ್ತು. 1922ರಿಂದ ಹತ್ತಾರು ವರ್ಷಗಳ ನಡುವೆ ಕಮ್ಯೂನಿಸ್ಟರ ವಿರುದ್ಧ ಅರ್ಧ ಡಜನ್ ಒಳಸಂಚು ಮೊಕದ್ದಮೆಗಳನ್ನು ಅವರು ಹೂಡಿದ್ದರು. ಕ್ರಿಮಿನಲ್ ಕಾನೂನಲ್ಲಿನ ಮಾಮೂಲು ವ್ಯವಸ್ಥೆಯನ್ನೇ ದುರುಪಯೋಗಪಡಿಸಿಕೊಂಡು ಕಮ್ಯೂನಿಸ್ಟರಿಗೆ ಕಿರುಕುಳ ನೀಡಿದ್ದಲ್ಲದೆ, ಕಮ್ಯೂನಿಸ್ಟ್‌ಪಕ್ಷ ಎಂಬ ಹೆಸರಿನಲ್ಲಾಗಲೀ, ಕಾರ್ಮಿಕ-ರೈತ ಪಕ್ಷಗಳೆಂಬ ಇತರ ಹೆಸರುಗಳಲ್ಲಾಗಲೀ ರೂಪುಗೊಳ್ಳುವ ಸಂಘಟನೆಗಳನ್ನು ಬೆಳೆಯಲು ಬ್ರಿಟಿಷರು ಅವಕಾಶ ನಿರಾಕರಿಸಿದ್ದರು.

ಇದಲ್ಲದೆ, ಭಾರತದ ಸ್ಥಿತಿಗತಿಗಳನ್ನು ಅರಿತು ಕಮ್ಯೂನಿಸ್ಟರು ಯಾವ ರೀತಿ ಕೆಲಸ ಮಾಡುವುದು ಎಂಬ ವಿಶಯದಲ್ಲಿ, ಭಾರತದ ಕಮ್ಯೂನಿಸ್ಟರಲ್ಲಿ ಒಮ್ಮತ ವಿರಲಿಲ್ಲ. ಸ್ವಾತಂತ್ರ ಚಳುವಳಿಯ ಸಮಯದಲ್ಲಿ ನೇತೃತ್ವ ನೀಡುತ್ತಾ ಬಂದ ಕಾಂಗ್ರೆಸ್‌ನ ವರ್ಗ ಸ್ವಭಾವ, ಅವರ ಧೋರಣೆ ಮತ್ತು ಕಾರ್ಯಕ್ರಮ ಇತ್ಯಾದಿಗಳನ್ನು ಅಂದಾಜು ಮಾಡುವ ವಿಷಯದಲ್ಲಿ, ವಿವಿಧ ಕಮ್ಯೂನಿಸ್ಟ್ ಗುಂಪುಗಳು ಮತ್ತು ಅವುಗಳ ಸದಸ್ಯರ ನಡುವೆ ಪರಸ್ಪರ ವಿರುದ್ಧ ಅಭಿಪ್ರಾಯಗಳು ಮೂಡಿ ಬಂದಿದ್ದವು.

ಅಂದಿನ ದಮನಕಾರೀ ಆಡಳಿತದ ಪರಿಸ್ಥಿತಿಯಲ್ಲಿ ಕಮ್ಯೂನಿಸ್ಟ್ ಅಂತರ್ರಾಷ್ಟ್ರೀಯದೊಂದಿಗೆ ಸಂಬಂಧ ಹೊಂದಲು ಸಾಧ್ಯವಾಗದೇ ಹೋದದ್ದೂ ಸಹ ವಿಷಮತೆಯನ್ನು ಇನ್ನೂ ಹೆಚ್ಚಿಸಲು ಕಾರಣವಾಯಿತು. ಆದ್ದರಿಂದ ಏಕೀಕೃತವಾದಂತಹ ಒಂದು ಕಮ್ಯೂನಿಸ್ಟ್ ಕೇಂದ್ರ ನೇತೃತ್ವವನ್ನು ರೂಪಿಸಲು ಸಾಧ್ಯವಾಗಲಿಲ್ಲ.

ಭಾರತದಲ್ಲಿ ವಿವಿಧ ಕಮ್ಯೂನಿಸ್ಟ್ ಗುಂಪುಗಳನ್ನು ಒಟ್ಟುಗೂಡಿಸುವುದಕ್ಕಾಗಿ 1920ರಲ್ಲಿ ಕಮ್ಯೂನಿಸ್ಟ್ ಇಂಟರ್‌ನ್ಯಾಷನಲ್‌ನ ಸಹಾಯದಿಂದ ಸೋವಿಯತ್ ಯೂನಿಯನ್ನಿನ ಸಹಾಯದಿಂದ ತಾಷ್ಕೆಂಟ್ ನಗರದಲ್ಲಿ ಒಂದು ಸಂಘಟನೆ ರಚನೆಯಾಯಿತು. ಇದಾದ ಒಂದು ವರ್ಷದ ನಂತರ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್‌ನ ಅಹಮದಾಬಾದ್ ಸಮ್ಮೇಳನ ನಡೆದ ಸಂದರ್ಭದಲ್ಲಿ ಅದರ ಪ್ರತಿನಿಧಿಗಳನ್ನು ಅಭಿನಂದಿಸುತ್ತಾ ಕಮ್ಯೂನಿಸ್ಟ್ ಸಂಘಟನೆ ಒಂದು ವಿಜ್ಞಾಪನೆಯನ್ನು ಪ್ರಕಟಗೊಳಿಸಿತು. ಇದಲ್ಲದೆ ಎಡ ಮನೋಭಾವದ ಕಾಂಗ್ರೆಸ್ಸಿಗರನ್ನು ಕಮ್ಯೂನಿಸಂನೆಡೆಗೆ ಆಕರ್ಷಿಸುವ ಅನೇಕ ಲೇಖನಗಳು, ಕಿರು ಹೊತ್ತಿಗೆಗಳು ಇತ್ಯಾದಿಗಳನ್ನು ಕಮ್ಯೂನಿಸ್ಟ್ ಸಂಘಟನೆ ಪ್ರಕಟಿಸಿತು. ತಾಷ್ಕೆಂಟ್‌ನಲ್ಲಿ ಸಂಘಟನೆ ಲೊ ಪತಾಳುವ ಮೊದಲೇ ಕೆಲಸ ಮಾಡಲಾರಂಭಿಸಿದ್ದ ವಿವಿಧ ಕಮ್ಯೂನಿಸ್ಟ್ ಗುಂಪುಗಳಿಗೆ ಒಂದು ಏಕೀಕೃತ ನಾಯಕತ್ವ ನೀಡಲು ಇದು ಸಹಾಯವಾಯಿತು. ಇದರ ಫಲವಾಗಿ 1925 ರಲ್ಲಿ ಭಾರತದ ಕಾನ್ಪುರದಲ್ಲಿ ಬಹಿರಂಗ ಕಮ್ಯೂನಿಸ್ಟ್ ಸಮ್ಮೇಳನ ನಡೆದು ಕಮ್ಯೂನಿಸ್ಟ್ ಪಕ್ಷ ರೂಪುಗೊಂಡಿತು.

ಜೀವಂತ ಶಕ್ತಿಯಾಗಿ

ಆದರೂ ಬ್ರಿಟಿಷ್ ಸರ್ಕಾರ ಹೇರಿದ ವಿವಿಧ ಒಳಸಂಚು ಮೊಕದ್ದಮೆಗಳಲ್ಲಿ ಕೊನೆಯ ಪ್ರಕರಣವಾದ ಮೀರತ್ ಕೇಸಿನ ಆಪಾದಿತರುಗಳು ಜೈಲಿನಿಂದ ಬಿಡುಗಡೆಯಾಗುವವರೆಗೆ (1933ರಿಂದ 1934ರವರೆಗೆ) ತಾಷ್ಕೆಂಟ್‌ನಲ್ಲಿ ರಚನೆಯಾದ ಸಮಿತಿಗಾಗಲೀ ಕಾನ್ಪುರದಲ್ಲಿ ರಚನೆಯಾದ ಸಮಿತಿಗಾಗಲೀ ಫಲಪ್ರದವಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಗಲಿಲ್ಲ. ದೇಶಾದ್ಯಂತ ಹರಡಿದ್ದ ಹಲವಾರು ಕಮ್ಯೂನಿಸ್ಟ್ ಗುಂಪುಗಳು ಮಾತ್ರವೇ ಅದುವರೆಗೆ ಅಸ್ತಿತ್ವದಲ್ಲಿದ್ದವು. ಕಮ್ಯೂನಿಸ್ಟ್ ಸಿದ್ಧಾಂತವನ್ನು ಪ್ರಚಾರ ಮಾಡುವಲ್ಲಿ ಈ ಗುಂಪುಗಳು ದೊಡ್ಡ ಪಾತ್ರ ನಿರ್ವಹಿಸಿದ್ದರೂ ಸಹ ಕೇಂದ್ರೀಕೃತವಾದಂತಹ ಒಂದು ಸಂಘಟನೆ ಬೆಳೆದು ಬಂದಿರಲಿಲ್ಲ. 1933-34ರ ಕಾಲ ಘಟ್ಟದಲ್ಲಿ ಕಮ್ಯೂನಿಸ್ಟ್ ಪಕ್ಷ ಕೇಂದ್ರ ಸಮಿತಿ ಪಾಲಿಟ್‌ಬ್ಯೂರೋ ಎಂಬ ಅಂಗಗಳೊಂದಿಗೆ ರಂಗ ಪ್ರವೇಶ ಮಾಡಿತು.

ಕಾಂಗ್ರೆಸ್‌ನ ಒಳಗೆ ಮತ್ತು ಹೊರಗೆ ಸಂಘಟಿತವಾಗಿ ಕಾರ್ಯ ನಿರ್ವಹಿಸಲು ಒಟ್ಟಾರೆಯಾಗಿ ಅನುಕೂಲವಾದಂತಹ ಪರಿಸ್ಥಿತಿ ಅಂದು ಉಂಟಾಗಿತ್ತು. ಹೊಸದಾಗಿ ರಚನೆಯಾದ ಕಮ್ಯೂನಿಸ್ಟ್ ಪಕ್ಷವಲ್ಲದೆ, ಎಡ ಪಂಥೀಯ ಕಾಂಗ್ರೆಸ್ ಪ್ರಾರಂಭಿಸಿದ ಕಾಂಗ್ರೆಸ್ ಸೋಷಲಿಸ್ಟ್ ಪಾರ್ಟಿ, ನೆಹರೂ ಮತ್ತು ಸುಭಾಷ್‌ಚಂದ್ರ ಬೋಸ್‌ರವರಂತಹ ಪ್ರಸಿದ್ಧ ವ್ಯಕ್ತಿಗಳಿದ್ದ ಎಡ ಪಕ್ಷಗಳ ರಂಗ ರೂಪುಗೊಂಡಿತು. ಆಗ ಇದ್ದ ಕಾರ್ಮಿಕ ಸಂಘಟನೆಯನ್ನು ಬಲಿಷ್ಠಗೊಳಿಸಲು ರೈತರ ಮತ್ತು ಕೂಲಿಕಾರರ ಸಂಘಟನೆಗೆ ರೂಪುಕೊಡಲು, ವಿದ್ಯಾರ್ಥಿಗಳು ಸಾಹಿತಿಗಳು ಮುಂತಾದವರನ್ನು ಸಂಘಟಿಸುವ ಕೆಲಸವನ್ನು ಸೋಷಲಿಸ್ಟರು ಮತ್ತು ಕಾಂಗ್ರೆಸ್ಸಿಗರುಗಳೊಂದಿಗೆ ಪೈಪೋಟಿ ನಡೆಸಿ ಕಮ್ಯೂನಿಸ್ಟರು ಮಾಡಬೇಕಾಯಿತು. ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿಯ ಒಂದು ಜೀವಂತ ಶಕ್ತಿಯಾಗಿ ಕಮ್ಯೂನಿಸ್ಟರು ಬೆಳೆದು ಬಂದರು.

ಇದು ಕಾಂಗ್ರೆಸ್‌ನೊಳಗಿನ ಎಡ ಮತ್ತು ಬಲಪಂಥೀಯರ ನಡುವಿನ ಘರ್ಷಣೆಗೆ ದಾರಿ ಮಾಡಿಕೊಟ್ಟಿತು. ಈ ನಡುವೆ ಪ್ರಾರಂಭವಾದ ಎರಡನೇ ವಿಶ್ವ ಮಹಾಯುದ್ಧದ ಸಂದರ್ಭವು ಸಾಮ್ರಾಜ್ಯಶಾಹಿಯ ವಿರುದ್ಧದ ಚಳುವಳಿಯಲ್ಲಿ ತೀವ್ರವಾದ ತಾತ್ವಿಕ ಹೋರಾಟಕ್ಕೆ ನಾಂದಿಯಾಯಿತು. ಮಹಾಯುದ್ಧದ ಎರಡನೇ ಹಂತದಲ್ಲಿ ಸೋವಿಯತ್ ಯೂನಿಯನ್ ನೇರವಾಗಿ ಯುದ್ಧದಲ್ಲಿ ಪಾಲ್ಗೊಂಡಿತು. ನಂತರ ಕಾಂಗ್ರೆಸ್‌ನೊಳಗಿನ ಭಿನ್ನಾಭಿಪ್ರಾಯ ತೀವ್ರಗೊಂಡಿತು. ಸೋಷಲಿಸ್ಟರೂ ಒಳಗೊಂಡಂತೆ ಸಾಮ್ರಾಜ್ಯಶಾಹೀ ವಿರೋಧಿ ಶಕ್ತಿಗಳಿಗೆ ವ್ಯತಿರಿಕ್ತವಾದಂತಹ ನಿಲುವನ್ನು ಕಮ್ಯೂನಿಸ್ಟರು ಅಂಗೀಕರಿಸಬೇಕಾಯಿತು.

ಪ್ರಥಮ ಮಹಾಧಿವೇಶನ

ಈ ಪರಿಸ್ಥಿತಿಯಲ್ಲೇ 1943ರ ಮೇ ತಿಂಗಳಲ್ಲಿ ಬೊಂಬಾಯಿಯಲ್ಲಿ ಪಕ್ಷದ ಪ್ರಥಮ ಮಹಾಧಿವೇಶನ ನಡೆಯಿತು. ಇದರಲ್ಲಿ ಪ್ರಮುಖವಾಗಿ ಚರ್ಚೆಗೆ ಬಂದ ವಿಷಯ ಕ್ವಿಟ್ ಇಂಡಿಯಾ ಹೋರಾಟದ ಕುರಿತಾಗಿತ್ತು. ಈ ಅಧಿವೇಶನದಲ್ಲೇ ಕಾಂಗ್ರೆಸ್ ಮತ್ತು ಸೋಷಲಿಸ್ಟ್ ಪಕ್ಷಗಳಿಗೆ ವಿರುದ್ಧವಾದ ನಿಲುವನ್ನು ಪಕ್ಷ ತೆಗೆದುಕೊಳ್ಳಬೇಕಾಗಿ ಬಂತು. ಅದೇ ರೀತಿ ಕ್ವಿಟ್ ಇಂಡಿಯಾ ಹೋರಾಟವನ್ನು ವಿರೋಧಿಸುವ ರಾಜಕೀಯ ನಿಲುವಿನ ಒಂದು ವೇದಿಕೆಯಾಗಿ ಸಮ್ಮೇಳನ ಮಾರ್ಪಟ್ಟಿತು.

ನಂತರ ನಡೆದ ಅಧಿವೇಶನಗಳಿಗಿಂತ ಭಿನ್ನವಾದ ರೀತಿಯಲ್ಲಿ, ಪೂರ್ಣವಾದ ಪಕ್ಷದ ಆಂತರಿಕ ಐಕ್ಯತೆಯಿಂದ ನಡೆದ ಒಂದು ಅಧಿವೇಶನ ಪ್ರಥಮ ಮಹಾಧಿವೇಶನವಾಗಿತ್ತು. ಮನುಷ್ಯ ಸಂಕಲ್ಪದ ಸಂಪೂರ್ಣ ಭವಿಷ್ಯವನ್ನೇ ಬಾಧಿಸುತ್ತಿದ್ದ ಆ ದಿನಗಳಲ್ಲಿ ಸೋವಿಯತ್ ಯೂನಿಯನ್ ನೇತೃತ್ವದಲ್ಲಿ ನಡೆದ ಫ್ಯಾಸಿಸ್ಟ್ ವಿರೋಧಿ ಯುದ್ಧದ ಬಗೆ ಪಾರ್ಟಿಯಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿರಲಿಲ್ಲ. ಭಾರತದ ಸ್ವಾತಂತ್ರದ ಭವಿಷ್ಯ ಸಹ ಸೋವಿಯತ್ ಯೂನಿಯನ್ನಿನ ವಿಜಯದ ಮೇಲೆ ಅವಲಂಬಿಸಿದೆ ಎಂದು ಪಕ್ಷದ ಮಹಾಧಿವೇಶನದ ಪ್ರತಿನಿಧಿಗಳಿಗೂ ಮತ್ತು ಉಳಿದೆಲ್ಲಾ ಕಮ್ಯೂನಿಸ್ಟರಿಗೂ ಚೆನ್ನಾಗಿ ಮನವರಿಕೆಯಾಗಿತ್ತು. ಈ ಆಧಾರದಲ್ಲೇ ಕಾಂಗ್ರೆಸ್ ಸಂಘಟಿಸಿದ್ದ ಕ್ವಿಟ್ ಇಂಡಿಯಾ ಹೋರಾಟವನ್ನು ಪಕ್ಷದ ಅಧಿವೇಶನ ವಿರೋಧಿಸಿದ್ದು. ಈ ವಿಷಯವನ್ನು ಕೇಂದ್ರವಾಗಿಟ್ಟುಕೊಂಡು ಪಾರ್ಟಿಯ ಒಟ್ಟಾರೆ ರಾಜಕೀಯ ಪ್ರಚಾರವನ್ನು ಕಾರ್ಮಿಕ-ರೈತ, ಮತ್ತು ಜನಸಾಮಾನ್ಯರ ನಡುವೆ ಕೆಲಸವನ್ನು ಮಾಡಬೇಕೆಂದು ಪಕ್ಷದ ಮಹಾಧಿವೇಶನ ಒಕ್ಕೊರಲಿನಿಂದ ತೀರ್ಮಾನಿಸಿತು.

ಈ ತೀರ್ಮಾನದ ನೆಲೆಯಲ್ಲೇ ಅಂತರ್ರಾಷ್ಟ್ರೀಯ ವಿದ್ಯಮಾನ ಎರಡೇ ವರ್ಷಗಳಲ್ಲಿ ಬದಲಾಯಿತು. ಫ್ಯಾಸಿಸ್ಟರ ವಿರುದ್ಧದ ಹೋರಾಟ ಯಶಸ್ವಿಯಾಗಿ ಮುಕ್ತಾಯಗೊಂಡಿತು. ಸೋವಿಯತ್ ಯೂನಿಯನ್‌ನ ವಿಜಯದ ನಂತರ ಯುರೋಪ್ ಮತ್ತು ಏಷಿಯಾದ ವಿವಿಧ ದೇಶಗಳಲ್ಲಿ ಕ್ರಾಂತಿಕಾರೀ ಮಾರ್ಪಾಟುಗಳು ಉಂಟಾದವು. ಇದರ ಪ್ರಭಾವ ಭಾರತದ ಮೇಲೂ ಉಂಟಾಯಿತು: ಪುನ್ನಪ್ರ ವಯಲಾರ್‌ನಿಂದ ತೆಲಂಗಾಣವರೆಗೆ ಒಂದು ದೊಡ್ಡ ಕ್ರಾಂತೀಕಾರಿ ಪ್ರವಾಹ ದೇಶಾದ್ಯಂತ ಹರಿಯಿತು. ಇದನ್ನು ಸಂಘಟಿತ ರೀತಿಯಲ್ಲಿ ಕೊಂಡೊಯ್ದು ಒಂದು ರಾಜಕೀಯ ಸ್ವರೂಪ ಕೊಡುವ ಪ್ರಶ್ನೆ ಎದುರಾಯಿತು. ಇದಕ್ಕೆ ಪರಿಹಾರ ಹುಡುಕುವ ಸಂದರ್ಭದಲ್ಲಿ ಹೊಸತೊಂದು ರಾಜಕೀಯ ಧೋರಣೆ ರೂಪುಗೊಳ್ಳಲಾರಂಭಿಸಿತು. ಇದುವೇ 1948ರಲ್ಲಿ ಕಲ್ಕತ್ತಾದಲ್ಲಿ ಸೇರಿದ 2ನೇ ಮಹಾಧಿವೇಶನದ ಸಮಯದ ರಾಜಕೀಯ ಸ್ಥಿತಿಯಾಗಿತ್ತು.

ಎರಡನೇ ಮಹಾಧಿವೇಶನ ಮತ್ತು ನಂತರ:

ಪಕ್ಷದ ಆಂತರಿಕ ಹೋರಾಟದ ಒಂದು ಸಂಘಟಿತ ಪ್ರಯತ್ನದ ವೇದಿಕೆಯಾಗಿ 1948ರಲ್ಲಿ ಕಲ್ಕತ್ತಾದಲ್ಲಿ 2ನೇ ಮಹಾಧಿವೇಶನ ನಡೆಯಿತು. ಅದರಲ್ಲಿ ಪಕ್ಷದ ಧೋರಣೆ ಮಾತ್ರವಲ್ಲದೆ ನಾಯಕತ್ವದಲ್ಲೂ ಬದಲಾವಣೆಯಾಯಿತು. ಹೊಸ ಧೋರಣೆಯನ್ನು ಮುಂದಿಡುವ ಒಂದು ರಾಜಕೀಯ ಸಂವಿಧಾನವೂ ಹಳೆಯ ಧೋರಣೆಯನ್ನು ವಿಮರ್ಶಿಸುವ ಒಂದು ವರದಿಯೂ ಅಂಗೀಕರಿಸಲ್ಪಟ್ಟು ಪಕ್ಷದ ಕೇಂದ್ರ ಮುಖಂಡತ್ವದಲ್ಲೂ ಬದಲಾವಣೆಗಳಾದವು.

ಕಾರ್ಮಿಕ ವರ್ಗದ ಪಕ್ಷದ ಸ್ವತಂತ್ರ ನಿಲುವನ್ನು ತ್ಯಜಿಸಿ ಬೂರ್ಜ್ವಾ ನೇತೃತ್ವದ ಬಾಲಬಡುಕ ಸ್ವಭಾವವನ್ನು ಹಳೆಯ ಮುಖಂಡತ್ವ ಅನುಸರಿಸಿತ್ತು ಎಂಬುದಾಗಿ ಕಲ್ಕತ್ತಾ ಅಧಿವೇಶನ ಬಹಿರಂಗವಾಗಿ ಘೋಷಿಸಿ ಕಾರ್ಮಿಕ ವರ್ಗದ ಕ್ರಾಂತೀಕಾರಿ ದೃಷ್ಟಿಕೋನವನ್ನು ಮೈಗೂಡಿಸಿಕೊಂಡು ಒಂದು ಹೊಸ ನಿಲುವನ್ನು ಮಹಾಧಿವೇಶನ ಅಂಗೀಕರಿಸಿತು. ಅಲ್ಲದೆ ಕೆಳಕಂಡ ಎರಡು ಪ್ರಮುಖವಾದ ಟೀಕೆಗಳು ಹಿಂದಿನ ಮುಖಂಡತ್ವದ ಮೇಲೆ ಎರಗಿದವು.

1. ಕಾಂಗ್ರೆಸ್ ನೇತೃತ್ವದಲ್ಲಿರುವುದು ಬೂರ್ಜ್ವಾಗಳೇ ಎಂಬ ಸತ್ಯವನ್ನು ಮರೆತು ಕಾಂಗ್ರೆಸ್‌ನ ನಾಯಕರನ್ನು ರಾಷ್ಟ್ರೀಯ ನಾಯಕರೆಂದು ಪಕ್ಷದ ಹಿಂದಿನ ಮುಖಂಡತ್ವ ಪ್ರತಿಪಾದಿಸಿತು.

2. ಮುಸ್ಲಿಂ ಲೀಗಿನ ನಾಯಕತ್ವ ಎತ್ತಿ ಹಿಡಿದ ಪಾಕೀಸ್ತಾನದ ವಾದವು ಬ್ರಿಟಿಷರ ಕುತಂತ್ರವೆಂಬ ಸತ್ಯವನ್ನು ಮನಗಾಣದೆ ಮುಸ್ಲಿಂ ಲೀಗ್ ಅನ್ನು ರಾಷ್ಟ್ರೀಯ ವಾದಿಗಳೆಂದು ಪಕ್ಷದ ಹಿಂದಿನ ಮುಖಂಡತ್ವ ಅಂಗೀಕರಿಸಿತು. ಈ ಆಧಾರದ ಮೇಲೆಯೇ ಕಮ್ಯೂನಿಸ್ಟ್ ಪಕ್ಷವು ಕಾಂಗ್ರೆಸ್-ಮುಸ್ಲಿಂಲೀಗ್ ಐಕ್ಯತೆಗೋಸ್ಕರ ಹೋರಾಟ ನಡೆಸಿತು.

ಈ ಸ್ವಯಂ ವಿಮರ್ಶೆಯ ಬೆಳಕಿನಲ್ಲಿ ಅಂಗೀಕರಿಸಲಾದ ರಾಜಕೀಯ ನಿಲುವನ್ನು ಸ್ವತಂತ್ರ ಭಾರತದ ಆಡಳಿತ ಪಕ್ಷವಾಗಿ ಬೆಳೆದ ಕಾಂಗ್ರೆಸ್ ಪಕ್ಷವನ್ನು ಅಧಿಕಾರದಿಂದ ಕಿತ್ತೊಗೆಯಲು ಕ್ರಾಂತಿಕಾರೀ ಸಮರ ತಂತ್ರವನ್ನು ಆವಿಷ್ಕರಿಸಲು ಅಧಿವೇಶನ ತೀರ್ಮಾನಿಸಿತು. ಅಂದು ತೆಲಂಗಾಣಾದಲ್ಲಿ ನಡೆಯುತ್ತಿದ್ದ ಸಶಸ್ತ್ರ ಹೋರಾಟದ ಮಾದರಿಯಲ್ಲೇ ಇಡೀ ಭಾರತದಾದ್ಯಂತ ಸಶಸ್ತ್ರ ಹೋರಾಟಗಳನ್ನು ಸಂಘಟಿಸಿ ಕಾಂಗ್ರೆಸ್ ಸರ್ಕಾರವನ್ನು ಅಧಿಕಾರದಿಂದ ಕಿತ್ತೊಗೆಯಬೇಕೆಂಬ ನಿಲುವನ್ನು ಪಕ್ಷದ ಎರಡನೇ ಮಹಾಧಿವೇಶನ ಅಂಗೀಕರಿಸಿತು. ಅದನ್ನು ಪ್ರಾಯೋಗಿಕವಾಗಿ ಜಾರಿಗೆ ತರಲು ಹೊಸ ಕೇಂದ್ರ ನಾಯಕತ್ವವನ್ನು ಅಧಿವೇಶನ [illegible] ಮಾಡಿತು. ಪಕ್ಷದ ಹಿಂದಿನ ಪ್ರಧಾನ ಕಾರ್ಯದರ್ಶಿ ಪಿ.ಸಿ.ಜೋಷಿ ಹೊಸ ಕೇಂದ್ರ ಸಮಿತಿಯಲ್ಲೂ ಕೂಡ ಸ್ಥಾನ ಪಡೆದುಕೊಳ್ಳಲು ಸಾಧ್ಯವಾಗಲಿಲ್ಲ.

ಈ ಹೊಸ ಧೋರಣೆಯನ್ನು ಕಾರ್ಯಗತಗೊಳಿಸುವುದಕ್ಕೆ ಸಂಬಂಧಿಸಿದಂತೆ ಪಾರ್ಟಿಯ ಒಳಗೆ ಕಠಿಣವಾದ ವಿರೋಧ - ಅಭಿಪ್ರಾಯಗಳು ವ್ಯಕ್ತಗೊಳ್ಳಲು ಆರಂಭಿಸಿತು. ಇದನ್ನು ಸಶಕ್ತವಾಗಿ ಎದುರಿಸುವುದೇ ಹೊಸ ನಾಯಕತ್ವದ ಪ್ರಥಮ ಸವಾಲಾಯಿತು. ಆದರೆ ಶೀಘ್ರದಲ್ಲಿಯೇ ಈ ಧೋರಣೆ ವಿಫಲಗೊಳ್ಳಲಾರಂಭಿಸಿತು. ಆದ್ದರಿಂದ ಕೇಂದ್ರ ಸಮಿತಿಯ ಒಂದು ತುರ್ತು ಸಭೆ ಸಮಾವೇಶಗೊಂಡು ಕೇಂದ್ರ ಸಮಿತಿ ಸದಸ್ಯರ ಒಂದು ವಿಭಾಗವನ್ನು ಹೊರತುಪಡಿಸಿ ಕೇಂದ್ರ ಸಮಿತಿಯನ್ನು ಪುನರ್‌ರಚನೆ ಮಾಡಲಾಯಿತು. ಧೋರಣೆಗೆ ಸಂಬಂಧಿಸಿದ ಭಿನ್ನಾಭಿಪ್ರಾಯವನ್ನು ಪರಿಹರಿಸಲು ಹೊಸ ನಾಯಕತ್ವ ಸೋವಿಯತ್ ಯೂನಿಯನ್‌ನ ಸಹಾಯವನ್ನು ಕೋರಿತು. ಸೋವಿಯತ್ ಮುಖಂಡರೊಡನೆ ನಡೆದ ಚರ್ಚೆಯ ನಂತರ ಪಕ್ಷದ ನೂತನ ಕಾರ್ಯಕ್ರಮ ಎಂಬ ಹೊಸ ಕಾರ್ಯಕ್ರಮ ಪ್ರಕಟಿಸಲ್ಪಟ್ಟಿತು.

ಈ ಕಾರ್ಯಕ್ರಮವನ್ನು ಅಂಗೀಕರಿಸಲು ಕಮ್ಯೂನಿಸ್ಟ್ ಪಕ್ಷದ ವಿಶೇಷ ಸಮ್ಮೇಳನ 195 1ರ ಅಕ್ಟೋಬರ್‌ನಲ್ಲಿ ಗುಪ್ತವಾಗಿ ಕಲ್ಕತ್ತದಲ್ಲಿ ನಡೆಯಿತು. ಮಾಸ್ಕೋದಲ್ಲಿ ತಯಾರಾದ ಈ ಕಾರ್ಯಕ್ರಮವನ್ನು ಕೆಲವು ಸಣ್ಣಪುಟ್ಟ ಬದಲಾವಣೆಗಳೊಂದಿಗೆ ಅಂಗೀಕರಿಸಲ್ಪಟ್ಟ ತರುವಾಯ ಹೊಸದಾದ ಕೇಂದ್ರ ಮುಖಂಡತ್ವವೊಂದನ್ನು ಸಮ್ಮೇಳನ ಚುನಾಯಿಸಿತು. ಭಾರತದ ಕ್ರಾಂತಿಯ ಒಂದು ಕಣ್ನೋಟ, ಇಲ್ಲಿನ ಆಳುವ ವರ್ಗಗಳ ಜೊತೆಯಲ್ಲಿ ಕಾರ್ಮಿಕ ವರ್ಗದ ಕಣ್ನೋಟ, ಮೂಲಭೂತ ಸಮಸ್ಯೆಗಳು, ಕಾರ್ಮಿಕ ಸಂಘಗಳ ಐಕ್ಯತೆ, ಸಂಸದೀಯ ಕಾರ್ಯಗಳು, ಜಗತ್ತಿನ ಶಾಂತಿಯ ಕುರಿತಾದ ಚಳುವಳಿ ಮುಂತಾದ ಹಲವು ಪ್ರಾಯೋಗಿಕ ಅಂಶಗಳಿಗೆ ಸಂಬಂಧಿಸಿದಂತೆ ಏಕೀಕೃತವಾದ ಅಭಿಪ್ರಾಯಗಳು ಈ ವಿಶೇಷ ಸಮ್ಮೇಳನದಿಂದ ನಂತರದ ಕಾಲಘಟ್ಟದ ಪ್ರಧಾನ ಭಿನ್ನಾಭಿಪ್ರಾಯಗಳಿಗೆ ತಾತ್ಕಾಲಿಕವಾದ ಪರಿಹಾರ ದೊರೆಯಿತು. ಇದರಿಂದಾಗಿ ಎರಡನೇ ಸಮ್ಮೇಳನದಲ್ಲಿ ಉಂಟಾಗಬಹುದಾಗಿದ್ದ ಒಡಕು ಇಲ್ಲವಾಗಿ ಪಕ್ಷದ ಒಗ್ಗಟ್ಟು ಪುನರ್‌ಸ್ಥಾಪನೆಯಾಯಿತು.

ಒಡಕಿನತ್ತ

ಆದರೆ ಈ ಐಕ್ಯತೆಯ ಪುನರ್‌ಸ್ಥಾಪನೆ ಕೇವಲ ತಾತ್ಕಾಲಿಕವಾದುದಾಗಿತ್ತು. 195 1ರಲ್ಲಿ ವಿಶೇಷ ಸಮ್ಮೇಳನ ಅಂಗೀಕರಿಸಿದ ಕಾರ್ಯಕ್ರಮವನ್ನು ಅನುಸರಿಸಿ ಕಾರ್ಯಾರಂಭ ಮಾಡಿದ ತರುವಾಯ 195 2ರ ಸಾರ್ವತ್ರಿಕ ಚುನಾವಣೆಯ ನಂತರ ಪಕ್ಷ ಒಂದು ಸಂಸದೀಯ ಪಕ್ಷವಾಗಿ ಕೆಲಸ ಮಾಡಲಾರಂಭಿಸಿದ ಮೇಲೆ ಹಲವು ಹೊಸ ವಿಷಯ ಸಮಸ್ಯೆಗಳು ತಲೆದೋರಿದವು. 3ನೇ ಮಹಾಧಿವೇಶನವು ಈ ಸಮಸ್ಯೆಗಳನ್ನು ಚರ್ಚಾ ವಿಷಯಗಳನ್ನಾಗಿ ಮಾಡಿಕೊಂಡು ಪಾರ್ಟಿಯ ಒಳಗೆ ಎರಡು ಪರಸ್ಪರ ವಿರುದ್ಧವಾದ ಚಿಂತನಾ ಮಾರ್ಗಗಳ ಹೋರಾಟ ವೇದಿಕೆಯಾಗಿ ಮಾರ್ಪಟ್ಟಿತು.

ನಂತರ 4ನೇ ಮಹಾಧಿವೇಶನ

ಹಿರಿದು ಅವಲೋಕನ

ಪ್ರಾಯಗಳು ತೀವ್ರಗೊಂಡವು. ಮಹಾಧಿವೇಶನವು ಭಿನ್ನಾಭಿಪ್ರಾಯಗಳ ನಡುವಿನ ಗುದ್ದಾಟದ ರಣರಂಗವಾಗಿ ಮಾರ್ಪಟ್ಟು ಭಾಗವಹಿಸಿದ ಪ್ರತಿನಿಧಿಗಳಲ್ಲಿ ಮೂರನೇ ಒಂದು ಭಾಗದ ಅಲ್ಪ ಸಂಖ್ಯಾತರ ಪ್ರತಿನಿಧಿಗಳು ಬಹು ಸಂಖ್ಯಾತ ಪ್ರತಿನಿಧಿಗಳು ಮುಂದಿಟ್ಟ ನಿಲುವುಗಳನ್ನು ಉಗ್ರವಾಗಿ ವಿರೋಧಿಸಿದರು.

ನಂತರ ನಡೆದ 5 ನೇ ಮಹಾಧಿವೇಶನದಲ್ಲಿ ಇದು ಪುನರಾವರ್ತನೆಯಾಗದಿದ್ದರೂ ಕೂಡ 6ನೇ ಸಮ್ಮೇಳನದಲ್ಲಿ ಭಿನ್ನಾಭಿಪ್ರಾಯಗಳು ಮತ್ತಷ್ಟು ತೀವ್ರ ಸ್ವರೂಪ ತಾಳಿದವು. ಕೇಂದ್ರ ಸಮಿತಿ ಮಂಡಿಸಿದ ರಾಜಕೀಯ ವರದಿ ಅದೇ ರೂಪದಲ್ಲಿ ಅಂಗೀಕೃತಗೊಳ್ಳಲು ಸಾಧ್ಯವಾಗಲಿಲ್ಲ. ಎರಡು ಪ್ರಬಲ ಗುಂಪುಗಳೂ ತಮ್ಮಲ್ಲಿ ರಾಜಿ ನಡೆಸಿಕೊಂಡು ರಾಜಕೀಯ ವರದಿ ಅಂಗೀಕರಿಸಿ ಹೊಸ ಕೇಂದ್ರ ಸಮಿತಿಯನ್ನು ಚುನಾಯಿಸಿದವು. ಈ ಕೇಂದ್ರ ಸಮಿತಿಯಲ್ಲಿ ಮತ್ತೆ ಭಿನ್ನಾಭಿಪ್ರಾಯಗಳು ತಲೆದೋರಿದವು. ಇದರ ಪರಿಣಾಮವಾಗಿಯೇ 1964 ರಲ್ಲಿ ಕಮ್ಯೂನಿಸ್ಟ್ ಪಕ್ಷ ಇಬ್ಭಾಗವಾಯಿತು.

ಪ್ರಮುಖವಾಗಿ ಮೂರು ಪ್ರಶ್ನೆಗಳ ಆಧಾರದ ಮೇಲೆ ಪಕ್ಷದ ಒಡಕು ಸಂಭವಿಸಿತು.

1. ಕಾಂಗ್ರೆಸ್ ಪಕ್ಷದ ವರ್ಗ ಸ್ವಭಾವ, ರಾಜಕೀಯ ನಿಲುವು ಎಂಥದು?

ಅದು ಪ್ರಗತಿಪರವಾದ ಬಂಡವಾಳಶಾಹಿ ಎಂಬುದಾಗಿ ಒಂದು ವಿಭಾಗ, ಪ್ರತಿಗಾಮಿ ಶಕ್ತಿಗಳ, ಗುತ್ತೇದಾರಿ ಬಂಡವಾಳ ಶಾಹಿಗಳ, ಭೂಮಾಲೀಕರ ಪಕ್ಷ ಎಂಬುದಾಗಿ ಮತ್ತೊಂದು ವಿಭಾಗ. ಮೊದಲನೇ ವಿಭಾಗವು ಕಾಂಗ್ರೆಸ್-ಕಮ್ಯೂನಿಸ್ಟ್ ಐಕ್ಯತೆಯನ್ನು ಕಟ್ಟಿ ಬೆಳೆಸಿ ಒಂದು ಸಂಯುಕ್ತರಂಗ ಸರ್ಕಾರವನ್ನು ಸ್ಥಾಪಿಸಬೇಕೆಂಬುದಾಗಿ ವಾದಿಸಿತು. ಎರಡನೇ ವಿಭಾಗವು ಕಾಂಗ್ರೆಸ್ ಆಡಳಿತಕ್ಕೆದುರಾಗಿ ವಿರೋಧ ಪಕ್ಷಗಳ ಶಕ್ತಿಯನ್ನು ಒಗ್ಗೂಡಿಸಿ ಜೀವಂತ ರಾಜಕೀಯ ಶಕ್ತಿಯಾಗಿ ಕಮ್ಯೂನಿಸ್ಟ್ ಪಕ್ಷ ಬೆಳೆಯಬೇಕೆಂದು ವಾದಿಸಿತು.

2. 195 9-60ರ ಕಾಲದಲ್ಲಿ ಉದ್ಭವಿಸಿದ ಭಾರತ-ಚೀನಾ ಗಡಿ ವಿವಾದದ ವಿಷಯದಲ್ಲಿ ಚೀನಾ ವಿರುದ್ಧವಾಗಿ ಕಾಂಗ್ರೆಸ್ ಸರ್ಕಾರಕ್ಕೆ ಬೆಂಬಲವಾಗಿ ನಿಂತು ಜನಸಂಘದಂತಹ ಪ್ರತಿಗಾಮಿ ಪಕ್ಷಗಳ ಜೊತೆಯಲ್ಲಿ ಸಹಕರಿಸಬೇಕೆಂಬ ಅಭಿಪ್ರಾಯ ಮಾಡಿ ಬಂದಿತು. ಇದಕ್ಕೆ ಎದುರಾಗಿ ಭಾರತ-ಚೀನಾ ಗಡಿ ಪ್ರಶ್ನೆ ಸೌಹಾರ್ದಯುತವಾಗಿ ಬಗೆಹರಿಸುವಂತೆ ಸರ್ಕಾರವನ್ನು ಪಕ್ಷವು ಒತ್ತಾಯಿಸಬೇಕೆಂದು ಪಕ್ಷದ ಮತ್ತೊಂದು ವಿಭಾಗ ಅಭಿಪ್ರಾಯಪಟ್ಟಿತು. ಈ ವಿಭಾಗವನ್ನು ಬಲಪಂಥೀಯ ಪಕ್ಷಗಳು ಮತ್ತು ಕಾಂಗ್ರೆಸ್‌ನ ಜೊತೆಯಲ್ಲಿ ಕಮ್ಯೂನಿಸ್ಟ್ ಪಕ್ಷದ ಮೊದಲನೆಯ ವಿಭಾಗ ಸೇರಿಕೊಂಡಿತು.

3. ಇದರ ನಡುವೆ ವಿಶ್ವ ಕಮ್ಯೂನಿಸ್ಟ್ ಚಳುವಳಿಯ ಒಳಗೆ ಗಂಭೀರವಾದ ಭಿನ್ನಾಭಿಪ್ರಾಯಗಳು ತಲೆದೋರಿದವು. 1960ರ ಮಾಸ್ಕೋ ಅಧಿವೇಶನದ ನಂತರ ವಿಶ್ವ ಕಮ್ಯೂನಿಸ್ಟ್ ಚಳುವಳಿ ಇಬ್ಭಾಗಗೊಂಡಿತು. ಸೋವಿಯತ್ ಯೂನಿಯನ್ ಮತ್ತು ಚೀನಾದ ಕಮ್ಯೂನಿಸ್ಟ್ ಪಕ್ಷಗಳ ನೇತೃತ್ವದಲ್ಲಿ ಎರಡು ವಿಭಿನ್ನ ಗುಂಪುಗಳು ಪ್ರಾರಂಭಗೊಂಡವು. ನಮ್ಮ ಪಕ್ಷದಲ್ಲಿ ಒಂದು ವಿಭಾಗ ಸೋವಿಯತ್ ಗುಂಪಿನೊಡನೆ ನಿಂತಾಗ, ಮತ್ತೊಂದು ವಿಭಾಗ ಸೋವಿಯತ್ ಪಕ್ಷದ ಪರಿಷ್ಕರಣವಾದೀ ನಿಲುವನ್ನು ವಿರೋಧಿಸಿದ ಚೀನಾದ ಪಕ್ಷಕ್ಕೆ ಬೆಂಬಲ ಸೂಚಿಸಿತು. ಇದು ಮೊದಲನೇ ವಿಭಾಗಕ್ಕೆ ಎರಡನೇ ವಿಭಾಗವನ್ನು ಚೀನಾದ ಏಜೆಂಟರೆಂದು ಕರೆಯಲು ಮತ್ತಷ್ಟು ಗ್ರಾಸ ಒದಗಿಸಿತು.

ಏಳನೇ ಮಹಾಧಿವೇಶನ

ಮೇಲಿನ ಘಟನೆಗಳ ಕಾರಣದಿಂದ ಕಮ್ಯೂನಿಸ್ಟ್ ಪಕ್ಷದ ಏಕೀಕೃತವಾದ 7ನೇ ಮಹಾಧಿವೇಶನ ನಡೆಯಲಿಲ್ಲ.

1964ರ ಅಕ್ಟೋಬರ್-ನವೆಂಬರ್‌ನಲ್ಲಿ ಕಮ್ಯೂನಿಸ್ಟ್ ಪಕ್ಷದ ಒಂದು ವಿಭಾಗ ಕಲ್ಕತ್ತಾದಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಎಂಬ ಒಂದು ಹೊಸ ಪಕ್ಷವನ್ನು ರೂಪಿಸಿತು. ಅಲ್ಲಿಯವರೆಗೆ ಏಕೀಕೃತವಾಗಿದ್ದ ನಿಜವಾದ ಪಕ್ಷ ತಮ್ಮದೆಂದು ಅವರು ಘೋಷಿಸಿದರು. ಈ ಸಮ್ಮೇಳನವು ಪಾರ್ಟಿ ಕಾರ್ಯಕ್ರಮ, ಧೋರಣೆಗಳಿಗೆ ಸಂಬಂಧಿಸಿದ ರಾಜಕೀಯ ನಿರ್ಣಯವನ್ನು ಅಂಗೀಕರಿಸಿತು.

ಇದಾದ ಎರಡು ತಿಂಗಳಲ್ಲಿ ಕಮ್ಯೂನಿಸ್ಟ್ ಪಕ್ಷದ ಮತ್ತೊಂದು ವಿಭಾಗ ಬೊಂಬಾಯಿಯಲ್ಲಿ ಸಮ್ಮೇಳನ ನಡೆಸಿ ಅವರ ಕಾರ್ಯಕ್ರಮ ಮತ್ತು ರಾಜಕೀಯ ಧೋರಣೆಯನ್ನು ರೂಪಿಸಿತು. ಅಂದಿನಿಂದ ಇಂದಿನವರೆಗೆ ಸಿ.ಪಿ.ಐ.(ಎಂ)ನ ಮಹಾಧಿವೇಶನಗಳು ನಡೆದಿವೆ. ಮತ್ತು ಸಿ.ಪಿ.ಐ.ನ ಏಳು ಮಹಾಧಿವೇಶನಗಳು ಜರುಗಿವೆ. ಕಳೆದ ಡಿಸೆಂಬರ್‌ನಲ್ಲಿ (1988ರ ಡಿಸೆಂಬರ್) ಸಿ.ಪಿ.ಐ.(ಎಂ)ನ 13ನೇ ಮಹಾಧಿವೇಶನ ನಡೆದಿದೆ. 1989ರ ಮಾರ್ಚ್‌ನಲ್ಲಿ ಸಿ.ಪಿ.ಐ.ನ 14ನೇ ಅಧಿವೇಶನ ನಡೆಯಲಿದೆ.

ಈ 24 ವರ್ಷಗಳಲ್ಲಿ ಎರಡೂ ಕಮ್ಯೂನಿಸ್ ಪಕ್ಷಗಳ ಒಳಗೆ ಹಲವು ಬದಲಾವಣೆಗಳು ಉಂಟಾಗಿವೆ. 7ನೇ ಅಧಿವೇಶನ ನಡೆದ 3 ವರ್ಷಗಳ ಒಳಗಾಗಿ ಸಿ.ಪಿ.ಐ.(ಎಂ)ನಲ್ಲಿ ನಕ್ಸಲ್ ವಾದಿಗಳ ವಿಭಾಗ ಉದ್ಭವಿಸಿ ತು. ಒಂದು ವರ್ಷದ ನಂತರ ಅವರುಗಳು ಸಿ.ಪಿ.ಐ.(ಎಂ) ತ್ಯಜಿಸಿ ಹೊಸ ಸಂಘಟನೆಯನ್ನು ರೂಪಿಸಿಕೊಂಡರು. 1978ರಲ್ಲಿ ನಡೆದ ಸಿ.ಪಿ.ಐ.ನ ಭಟಿಂಡಾ ಸಮ್ಮೇಳನ ಅಂಗೀಕರಿಸಿದ ಕಾಂಗ್ರೆಸ್ ವಿರೋಧಿ ನಿಲುವನ್ನು ಪ್ರತಿಭಟಿಸಿ ಎಸ್.ಎ.ಡಾಂಗೆ ನೇತೃತ್ವದಲ್ಲಿ ಸಿ.ಪಿ.ಐ.ನ ಒಂದು ವಿಭಾಗ ಪಕ್ಷದ ಹೊರ ಬಂದು ಹೊಸ ಪಕ್ಷವನ್ನು ...ಂಡಿತು. ಆದರೆ ಸಿ.ಪಿ.ಐ.ನ ದೊಡ್ಡ ವಿಭಾಗ ಸಿ.ಪಿ.ಐ.(ಎಂ)ನೊಂದಿಗೆ ಸಹಕರಿಸಲು ಪ್ರಾರಂಭಿಸಿದ ಎರಡು ವರ್ಷಗಳ ಒಳಗೆ ಎರಡೂ ಪಕ್ಷಗಳು ಕೂಡಿ ಎಡ ಪಕ್ಷಗಳ ಪ್ರಜಾಪ್ರಭುತ್ವ ರಂಗವನ್ನು ರೂಪಿಸಿದವು.

ಇದರ ನಡುವೆ ಭಾರತ-ಚೀನಾ ಗಡಿ ವಿವಾದದಲ್ಲಿ ಹೊಸ ಬೆಳವಣಿಗೆಗಳು ಗೋಚರಿಸಿದವು. ಶಾಂತ ರೀತಿಯಲ್ಲಿ ವಿವಾದವನ್ನು ಸಂಧಾನದ ಮೂಲಕ ಪರಿಹರಿಸಬೇಕೆಂಬ ಸಿ.ಪಿ.ಐ.(ಎಂ)ನ ಸಲಹೆಯನ್ನು ಕಾಂಗ್ರೆಸ್, ಸಿ.ಪಿ.ಐ. ಒಳಗೊಂಡಂತೆ ಉಳಿದ ರಾಜಕೀಯ ಪಕ್ಷಗಳೂ ಅಂಗೀಕರಿಸಿದವು. ಜನತಾ ಪಕ್ಷದ ಸರ್ಕಾರದ ಕಾಲದಿಂದಲೂ ಭಾರತದ ವಿದೇಶಾಂಗ ಸಚಿವರುಗಳು ಚೀನಾಕ್ಕೂ, ಚೀನಾದ ವಿದೇಶಾಂಗ ಸಚಿವರು ಭಾರತಕ್ಕೂ ಭೇಟಿ ನೀಡಿ ಚರ್ಚೆ ನಡೆಸಿಕೊಂಡು ಬರುತ್ತಿದ್ದು, ಇದರ ಪರಿಣಾಮವಾಗಿ ಭಾರತದ ಪ್ರಧಾನ ಮಂತ್ರಿ ಕಳೆದ ಡಿಸೆಂಬರ್‌ನಲ್ಲಿ ಚೀನಾಗೆ ಭೇಟಿ ನೀಡಿದರು. ಆರ್ಥಿಕ ಮತ್ತ ಸಾಂಸ್ಕೃತಿಕ ರಂಗಗಳಲ್ಲೂ ಕೂಡ ಎರಡೂ ದೇಶಗಳ ನಡುವೆ ಉತ್ತಮ ಬಾಂಧವ್ಯಗಳು ಬೆಳೆದು ಬರುತ್ತಿದೆ.

ವಿಶ್ವ ಕಮ್ಯೂನಿಸ್ಟ್ ಚಳುವಳಿಯಲ್ಲಿ 1960ರಲ್ಲಿ ಪ್ರಾರಂಭಗೊಂಡ ಏಕತೆಯ ಪ್ರಯತ್ನ ಹಂತ ಹಂತವಾಗಿ ಸಫಲಗೊಳ್ಳುತ್ತಿದೆ. 1964ರಿಂದ ಮೊದಲುಗೊಂಡು ಒಂದೂ ದಶಕಗಳ ಕಾಲ ಜಾಗತಿಕ ಕಮ್ಯೂನಿಸ್ಟ್ ಚಳುವಳಿಯೊಳಗೆ ಬೇರೆಯಾಗಿ ನಿಂತಿದ್ದ ಸಿ.ಪಿ.ಐ.(ಎಂ)ನ ಅಂತರಾಷ್ಟ್ರೀಯ ಸಂಬಂಧ ಹೆಚ್ಚೆಚ್ಚು ಬಲಗೊಳ್ಳುತ್ತಿದೆ. ಅದರ ಪ್ರತ್ಯಕ್ಷ ಸಾಕ್ಷಿಯಾಗಿ ಕಳೆದ ಡಿಸೆಂಬರ್‌ನಲ್ಲಿ ನಡೆದ ಸಿ.ಪಿ.ಐ.(ಎಂ)ನ 13ನೇ ಅಧಿವೇಶನ ನಡೆಯಿತು.

ಸಿ.ಪಿ.ಐ(ಎಂ)ನೊಳಗೆ ತಾತ್ವಿಕ ಸಂಘರ್ಷ:

ಇದೇ ಸಂದರ್ಭದಲ್ಲೆ ಸಿ.ಪಿ.ಐ. ಮತ್ತು ಚೀನಾ ಕಮ್ಯೂನಿಸ್ಟ್ ಪಕ್ಷವೂ ತಮ್ಮಲ್ಲಿ ಔಪಚಾರಿಕ ಸಂಬಂಧಗಳನ್ನು ಪುನರ್ ಸ್ಥಾಪನೆ ಮಾಡಿಕೊಂಡವು. ಸೋವಿಯತ್-ಚೀನಾ ಪಕ್ಷಗಳೂ ಒಳಗೊಂಡಂತೆ ಇತರ ಸೋದರ ಪಕ್ಷಗಳು ತಮ್ಮ ತಮ್ಮಲ್ಲಿ ಸಂಬಂಧಗಳನ್ನು ಪುನರ್‌ಸ್ಥಾಪನೆಗೊಳಿಸಿಕೊಂಡವು. ಇಂತಹ ಅಮೋಘ ಸೌಹಾರ್ದತೆ ವಿಶ್ವ ಕಮ್ಯೂನಿಸ್ಟ್ ಚಳುವಳಿಯಲ್ಲಿ ಕಳೆದ ಕಾಲು ಶತಮಾನಗಳಿಂದ ಏರ್ಪಟ್ಟಿರಲಿಲ್ಲ.

ಇಲ್ಲಿ ನಾನು ವಿವರಿಸಿರುವ ಘಟನೆಗಳು ಇತರ ಪಕ್ಷಗಳ ಒಳಗೆ ಪರಿಣಾಮ ಬೀರಿರುವ ಹಾಗೆ ಸಿ.ಪಿ.ಐ.(ಎಂ)ನ ಒಳಗೂ ಒಂದು ಹೊಸ ಚಲನೆಯನ್ನು ಉಂಟು ಮಾಡಿದೆ. ಸಿ.ಪಿ.ಐ.(ಎಂ)ನ ಏಳರಿಂದ 12ರವರೆಗಿನ ಅಧಿವೇಶನಗಳೇ ಇದಕ್ಕೆ ಉತ್ತಮ ನಿದರ್ಶನಗಳಾಗಿವೆ.

1964ರಲ್ಲಿ 7ನೇ ಪಾರ್ಟಿ ಅಧಿವೇಶನ ನಡೆದಾಗ ಪಕ್ಷದ ಹೊಸ ಕಾರ್ಯಕ್ರಮ ಅಂಗೀಕರಿಸಲ್ಪಟ್ಟರೂ ಸಹ ತೀವ್ರವಾದ ಭಿನ್ನಾಭಿಪ್ರಾಯದಿಂದಾಗಿ ಎರಡು ವಿಷಯಗಳ ಕುರಿತಾದ ಚರ್ಚೆಯನ್ನು ಮುಂದೂಡಲಾಗಿತ್ತು.

1. ಅಂತರ್ರಾಷ್ಟ್ರೀಯ ತಾತ್ವಿಕ ಪ್ರಶ್ನೆಗಳಿಗೆ ಸಂಬಂಧಿಸಿದ ಚರ್ಚೆ.

2. ಆಂತರಿಕ ವಿಷಯಗಳಿಗೆ, ಪ್ರಮುಖ ರಾಷ್ಟ್ರೀಯ ಪ್ರಶ್ನೆಗಳಿಗೆ ಸಂಬಂಧಿಸಿದ ಚರ್ಚೆ.

ಮೇಲಿನ ಎರಡು ವಿಷಯಗಳನ್ನು ಹೊರತುಪಡಿಸಿ 7ನೇ ಮಹಾಧಿವೇಶನವು ಹೊಸ ಕಾರ್ಯಕ್ರಮವನ್ನು ಅಂಗೀಕರಿಸಿತು.

ಅಂತರ್ರಾಷ್ಟ್ರೀಯ ತಾತ್ವಿಕ ಪ್ರಶ್ನೆಗಳ ಕುರಿತಾದ ಚರ್ಚೆಯನ್ನು ಸಿ.ಪಿ.ಐ.(ಎಂ) 1968ರಲ್ಲಿ ಬರ್ದ್ವಾನ್‌ನಲ್ಲಿ ನಡೆದ ಪ್ಲೀನಂನಲ್ಲಿ ಪೂರ್ಣಗೊಳಿಸಿತು. ಆದರೆ ಅಂದು ತೆಗೆದುಕೊಂಡು ತೀರ್ಮಾನಗಳನ್ನು ನಂತರ ಅದೇ ರೀತಿಯಲ್ಲಿ ಮುಂದುವರೆಸಲಾಗಲಿಲ್ಲ. 8ರಿಂದ 12 ರವರೆಗೆಗಿನ ಪ್ರತಿಯೊಂದು ಮಹಾಧಿವೇಶನದಲ್ಲೂ ಅಂದಂದಿನ ಸ್ಥಿತಿಗತಿಗಳಿಗೆ ಅನುಗುಣವಾಗಿ ಅಂತರ್ರಾಷ್ಟ್ರೀಯ ಪ್ರಶ್ನೆಗಳಿಗೆ ತೀರ್ಮಾನಗಳನ್ನು ಕೈಗೊಳ್ಳಲಾಗುತ್ತಿತ್ತು. ಈ ರೀತಿಯಾಗಿ ಅಂತರ್ರಾಷ್ಟ್ರೀಯ ಪ್ರಶ್ನೆಗಳು, ವಿಶ್ವಶಾಂತಿ ಚಳುವಳಿಯಲ್ಲಿ ನಮ್ಮ ಪಕ್ಷದ ಭಾಗವಹಿಸುವಿಕೆ ಕುರಿತಾದ ಪಕ್ಷದ ಧೋರಣೆಗಳು ರೂಪೀಕರಿಸಲ್ಪಟ್ಟವು.

ರಾಷ್ಟ್ರೀಯ ಪ್ರಶ್ನೆಗಳ ಬಗ್ಗೆ ಸರಿಯಾದ ನಿಲುವನ್ನು ಸಿ.ಪಿ.ಐ(ಎಂ) ತೆಗೆದುಕೊಂಡದ್ದು ಪಾರ್ಟಿಯ 9ನೇ ಅಧಿವೇಶನದಲ್ಲೇ. 1940ರಿಂದ ಮೊದಲ್ಗೊಂಡು ರಾಷ್ಟ್ರೀಯ ಪ್ರಶ್ನೆಗಳ ಬಗ್ಗೆ ಅಂಗೀಕರಿಸಲ್ಪಟ್ಟ ನಿಲುವುಗಳಲ್ಲಿನ ತಪ್ಪುಗಳನ್ನು ತಿದ್ದಿಕೊಂಡು ವಾಸ್ತವ ಪ್ರಜ್ಞೆಯಿಂದ ಕೂಡಿದ ಒಂದು ದೃಷ್ಟಿಕೋನವನ್ನು 1972ರಲ್ಲಿ ನಡೆದ ಪಾರ್ಟಿಯ 9ನೇ ಅಧಿವೇಶನ ಅಳವಡಿಸಿಕೊಂಡಿತು. ಅದರ ಆಧಾರದಲ್ಲೇ ಜಾತ್ಯಾತೀತ ಪ್ರತಿಪಕ್ಷಗಳಿಗೂ ಒಪ್ಪಿಗೆಯಾಗುವಂತಹ ಒಂದು ಧೋರಣೆಯನ್ನು ಪಕ್ಷ ಅಂಗೀಕರಿಸಲು ಸಾಧ್ಯವಾಯಿತು.



ಇದರ ಮಧ್ಯೆ ರಾಜಕೀಯ ದೃಷ್ಟಿಕೋನಕ್ಕೆ ಸಂಬಂಧಿಸಿದಂತೆ ಪ್ರಮುಖವಾದ ಭಿನ್ನಾಭಿಪ್ರಾಯವೊಂದು ಪಾರ್ಟಿಯ ಒಳಗೆ ತಲೆಯೆತ್ತಿತ್ತು. 1970ರಲ್ಲಿ ಪ್ರಾರಂಭವಾದ ತಾತ್ವಿಕ ಹೋರಾಟದ ಮೂಲಕ 9ನೇ ಮಹಾಧಿವೇಶನದ ನಂತರದ ಕಾಲಘಟ್ಟದಲ್ಲಿ ಪಾರ್ಟಿಯ ಚಟುವಟಿಕೆಗಳಿಗೆ ಅಡ್ಡಿಯೊಂದು ಎದುರಾಯಿತು. ಈ ಸಮಸ್ಯೆಗಳಿಗೆ ದೊಡ್ಡ ಪ್ರಮಾಣದಲ್ಲಿ ಪರಿಹಾರ ದೊರೆತದ್ದು ಪಕ್ಷದ 10ನೇ ಮಹಾಧಿವೇಶನದಲ್ಲಿ. ಆ ಸಮಯದಲ್ಲೇ ಎಡ ಮತ್ತು ಪ್ರಜಾಪ್ರಭುತ್ವ ರಂಗವು ವಿಶಾಲಗೊಂಡು ಸರ್ವಾಧಿಕಾರೀ ವಿರೋಧಿ ವೇದಿಕೆಯ ನೀತಿ ನಿಲುವುಗಳು ರೂಪುಗೊಂಡವು.

ಇದನ್ನು ಪ್ರಾಯೋಗಿಕವಾಗಿ ಜ್ಯಾರಿ ಮಾಡುವ ಸಂದರ್ಭದಲ್ಲಿ, ಜನತಾ ಪಕ್ಷದ ಕುರಿತಾದ ನಿಲುವಿನಲ್ಲಿ ಭಿನ್ನಾಭಿಪ್ರಾಯಗಳು ಉಂಟಾದವು. ಇದು ಪರಿಹಾರ ಕಂಡಿದ್ದು 1982ರ ವಿಜಯವಾಡ ಮಹಾಧಿವೇಶನದಲ್ಲಿ. ಇಂತಹದೇ ಒಂದು ಸಮಸ್ಯೆ 12ನೇ ಮಹಾಧಿವೇಶನಕ್ಕೆ ಮೊದಲು ನಡೆದ ಕೇರಳ ರಾಜ್ಯ ಸಮ್ಮೇಳನದಲ್ಲಿ ತೀವ್ರವಾಗಿ ಚರ್ಚೆಯಾಯಿತು.

ಇದರಿಂದಾಗಿ ಸಿ.ಪಿ.ಐ.(ಎಂ) ರಚನೆಯಾದ ನಂತರ ಪಕ್ಷದೊಳಗೆ ತಾತ್ವಿಕ ಸಮರ ಗಂಭೀರ ಸ್ವರೂಪದಲ್ಲಿ ನಡೆಯುತ್ತಾ ಬಂದಿದೆ ಎಂಬುದನ್ನು ಕಾಣಬಹುದು.

13ನೇ ಮಹಾಧಿವೇಶನ-ಒಂದು ಹೊಸ ಮಜಲಿನ ಆರಂಭ

ಪಾರ್ಟಿಯ 11-12ನೇ ಮಹಾಧಿವೇಶನವು ಚರ್ಚೆಗೆ ಬಂದಿದ್ದ ಪ್ರಧಾನ ರಾಜಕೀಯ ಪ್ರಶ್ನೆಗಳನ್ನು ಪರಿಹರಿಸಿದ ಸಮಯದಲ್ಲೇ 13ನೇ ಮಹಾಧಿವೇಶನ ಸೇರಿತು. 10ನೇ ಮಹಾಧಿವೇಶನದಲ್ಲಿ ಆವಿಷ್ಕರಿಸಲಾದ ಎಡ ಪ್ರಜಾಪ್ರಭುತ್ವ ರಂಗವು ಹೆಚ್ಚು ವ್ಯಾಪಕವಾದ ಸರ್ವಾಧಿಕಾರ ವಿರೋಧಿ ದೃಷ್ಟಿಕೋನ ಯಥಾರ್ಥಗೊಳ ಲು ಆರಂಭಿಸಿದೆ. ಅಖಿಲಭಾರತ ಮಟ್ಟದಲ್ಲಿ ನಾಲ್ಕು ಎಡ ಪಕ್ಷಗಳ ರಂಗ ಮತ್ತು ಜಾತ್ಯಾತೀತ ಪಕ್ಷಗಳು ಒಳಗೊಂಡಂತಹ ವಿಶಾಲ ವೇದಿಕೆ (ಜನತಾ ದಳ ಮತ್ತು ರಾಷ್ಟ್ರೀಯ ರಂಗ) ಕಾರ್ಯರೂಪಕ್ಕೆ ಬಂದಿದೆ ಇದು ಸಂತಸದ ವಿಷಯ.

ಆದರೆ, ಇದು ಕಾರ್ಯರೂಪಕ್ಕೆ ಬಂದಿತೆಂಬ ಸಂತೋಷದಲ್ಲಿ, ಕಷ್ಟಗಳೆಲ್ಲಾ ಪರಿಹಾರವಾಗುವುದೆಂಬ ಭ್ರಮೆಯಲ್ಲಿ ಸಿಕ್ಕಿಕೊಳ್ಳಬಾರದು. ಜನತಾದಳದ, ರಾಷ್ಟ್ರೀಯರಂಗದ ಮುನ್ನಡೆಗೆ ಹಲ ವಾರು ಕಠಿ ಣ ಸಮಸ್ಯೆಗಳನ್ನು ಬಗೆಹರಿಸ ಬೇಕಾಗುತ್ತದೆ ಎಡ ಪಕ್ಷಗಳ ನಡುವೆ ಅಭಿಪ್ರಾಯ ಭೇದಗಳಿವೆ. ಎರಡೂ ಕಮ್ಯೂನಿಸ್ಟ್ ಪಕ್ಷಗಳಿಗೂ ತಮ್ಮ ನಡುವೆ ಯೋಜಿತ ರೀತಿಯಲ್ಲಿ ಕೆಲಸ ಮಾಡಲು ಸಾಧ್ಯವಾಗಿಲ್ಲ. ಆದ್ದರಿಂದ ಕಠಿ ಣ ಪ್ರಶ್ನೆಗಳು ಉದ್ಭವಿಸುತ್ತವೆಂಬುದರಲ್ಲಿ ಅನುಮಾನವಿಲ್ಲ.

ಆದರೆ, ಸಮಸ್ಯೆಗಳು ಉದ್ಭವಿಸುವ ಸಮಯದಲ್ಲಿ ಪರಿಹಾರ ಕಂಡು ಹಿಡಿಯುವೆವೆಂಬ ಆತ್ಮವಿಶ್ವಾಸ ಇದುವರೆಗಿನ ಕೆಲಸದ ಅನುಭವದಿಂದ ನಮಗೆ ದಕ್ಕಿದೆ. ಅದಕ್ಕೆ ಅಗತ್ಯವಾದ ಧೈರ್ಯೋತ್ಸಾಹಗಳು ನಮಗೆ ಸಿಗುವುದು ಮಾರ್ಕ್ಸ್‌ವಾದ-ಲೆನಿನ್‌ವಾದದ ಮೇಲೆ ನಮಗಿರುವ ಅಚಲವಾದ ನಂಬಿಕೆಯಿಂದ ಮಾತ್ರ ಸಾಧ್ಯ.

ಅನು: ಇ.ಕೆ.ಎನ್.ರಾಜನ್
'ಉದಯ'

ಭೂಮಿಗಾಗಿ ರಾಷ್ಟ್ರ ವ್ಯಾಪಿ ಚಳುವಳಿ

ನಾಲ್ಕು ಎಡ ಪಕ್ಷಗಳ ನೇತೃತ್ವದ ರೈತ ಮತ್ತು ಕೃಷಿ ಕೂಲಿಕಾರ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಏಪ್ರಿಲ್ ತಿಂಗಳಲ್ಲಿ ದೆಹಲಿಯಲ್ಲಿ ಅಖಿಲ ಭಾರತ ಭೂಸುಧಾರಣಾ ಸಮಾವೇಶ ನಡೆಸಲಿದೆ ಅದಕ್ಕೆ ಪೂರ್ವಭಾವಿಯಾಗಿ ನಮ್ಮ ರಾಜ್ಯದ ಭೂ ಸುಧಾರಣಾ ಸಮಾವೇಶ ಬೆಂಗಳೂರಿನಲ್ಲಿ ನಡೆಯುತ್ತದೆ. ಏಪ್ರಿಲ್ ನಲ್ಲಿ ಈ ಸಮಾವೇಶದ ಹಿನ್ನೆಲೆ, ಅದರ ಮುಂದಿರುವ ಪ್ರಶ್ನೆಗಳನ್ನು ಕುರಿತು ಕಾಂ॥ ಚಂದ್ರಶೇಖರ ಬಾಳಿ ಇಲ್ಲಿ ವಿಶ್ಲೇಷಿಸುತ್ತಾರೆ.

(1ನೇ ಪುಟದಿಂದ)

ನಡೆಸಲಾಯಿತು. ಬ್ರಿಟಿಷ್ ವಿಶೇಷ, ಭೂಮಿ ಹಿಡಿಯುವುದು, ನೀಲಗಿರಿ ಸಸಿ ಕೀಳುವುದು ಈ ರೀತಿಯ ನೇರ ಘರ್ಷಣೆಗೆ 20 ಲಕ್ಷ ರೈತರು ಇಳಿದಿದ್ದಾರೆ.

ಆದರೆ ಗಮನಿಸಬೇಕಾದ ಪ್ರಮುಖ ಅಂಶವೆಂದರೆ ಚಳುವಳಿಯಲ್ಲಿ ಪಾಲುಗೊಂಡವರಲ್ಲಿ ಬಹು ಸಂಖ್ಯಾತರು ಕೃಷಿ ಕೂಲಿಕಾರ, ಬಡರೈತರು. ಹಾಗೆಯೇ ಭೂಮಿಯ ಪ್ರಶ್ನೆ, ಕನಿಷ್ಠ ಕೂಲಿಯ ಪ್ರಶ್ನೆ ಪ್ರಾಥಮಿಕ ಬೇಡಿಕೆಗಳಾಗಿವೆ. ಬೆಲೆ, ಸಾಲ, ನೀರಾವರಿ, ತೆರಿಗೆ ಗಳು, ಬರಗಾಲ, ನೆರೆ ಹಾವಳಿ ಸೇರಿದಂತೆ ಇತರೆ ಬೇಡಿಕೆಗಳಾಗಿವೆ. ಒಂದೆಡೆ ಕೃಷಿ ಕೂಲಿಕಾರ ಬಡರೈತರು ತಮ್ಮದೇ ಆದ ಪ್ರತ್ಯೇಕ ಬೇಡಿಕೆಗಳಾದ ಭೂಮಿ, ಕನಿಷ್ಠ ಕೂಲಿಗಾಗಿ ಹೋರಾಟ ನಡೆಸುವಾಗಲೇ ಇತರ ರೈತಾಪಿ ಬೇಡಿಕೆಗಳಿಗೆ ನಾಯಕತ್ವವನ್ನು ಕೊಡಲು ಮುಂದೆ ಬಂದಿದ್ದಾರೆಯೆಂಬುದು ಗಮನಾರ್ಹವಾಗಿದೆ. 12 ಬೇಡಿಕೆಗಳಲ್ಲಿ ಪ್ರಾಥಮಿಕ ಬೇಡಿಕೆಗಳು ಭೂಮಿ, ಕನಿಷ್ಠ ಕೂಲಿಯಾದರೆ, ಕಿಸಾನ ಚಳುವಳಿಯೂ ಕೂಡ ಗ್ರಾಮೀಣ ದುಡಿಯುವ ಜನರಲ್ಲಿ ಬಹುಸಂಖ್ಯಾತರಾದ ಕೃಷಿ ಕೂಲಿಕಾರ-ಬಡರೈತರ ನಾಯಕತ್ವದಲ್ಲಿ ಉಳಿದ ರೈತರು ಸಂಘಟಿತರಾಗಬೇಕಾಗಿದೆ ಎಂಬ ಪಾಠವನ್ನು ಸೆಪ್ಟೆಂಬರ್ ಚಳುವಳಿಯಲ್ಲಿ ಕಲಿಯಬೇಕಾಗಿದೆ.

195 0 ಕಾಲಘಟ್ಟ ಪಶ್ಚಿಮ ಬಂಗಾಳದಲ್ಲಿ ರೈತ ಚಳುವಳಿ

1936 ಭಾರತದ ಸ್ವಾತಂತ್ರ ಚಳುವಳಿಯ ಹಾದಿಯಲ್ಲಿ ಗ್ರಾಮೀಣ ದುಡಿಯುವ ರೈತಾಪಿ ವರ್ಗ ಸಂಘಟನೆ ಅಖಿಲ ಭಾರತ ಕಿಸಾನ್ ಕಾಂಗ್ರೆಸ್ ಹುಟ್ಟಿದ ವರ್ಷವಾಗಿದೆ. ಈ ಚಳುವಳಿಯ ಭಾಗವಾಗಿಯೇ ಬೆಂಗಾಲದಲ್ಲಿ ಕಿಸಾನ್ ಸಭಾ ಉದಯವಾಯಿತು. 1936 ರಿಂದಲೇ ಭೂಮಾಲೀಕರ ಶೋಷಣೆ, ದಬ್ಬಾಳಿಕೆಯ ವಿರುದ್ಧ ತೀವ್ರ ಚಳುವಳಿಯನ್ನು ನಡೆಸಲಾಯಿತು. ಅದು 1946ರಲ್ಲಿ ತೇಭಾಗ ಚಳುವಳಿಯಾಗಿ ಮಾರ್ಪಟ್ಟಿತು. ರೈತರಿಗೆ ಬೆಳೆದ ಮಾಲಿನಲ್ಲಿ ಎರಡು ಮೂರು ಭಾಗದ ಪಾಲಿಗಾಗಿ ಇಡೀ ಬೆಂಗಾಲದಲ್ಲಿ ಪ್ರಾಂತ ನಡೆದ ವ್ಯಾಪಕ ಚಳುವಳಿ ವರ್ಗ ಐಕ್ಯತೆಯ ಕುರುಹಾಗಿತ್ತು.

ಸ್ವಾತಂತ್ರ್ಯಾನಂತರ ಅಧಿಕಾರಕ್ಕೆ ಬಂದ ಬಂಡವಾಳಶಾಹಿ ಭೂಮಾಲೀಕ ವರ್ಗ ಪ್ರಭುತ್ವ ಅದೇ ದಬ್ಬಾಳಿಕೆಗೆ ಎಡೆ ಮಾಡಿಕೊಟ್ಟಿತು. ದಶಕಗಳ ಅನುಭವ ಪಡೆದ ಕಿಸಾನ್ ಸಭಾ ರಾಜ್ಯ ವ್ಯಾಪಿ ಸಂಘಟಿತ ಚಳುವಳಿಗೆ ಕರೆ ಕೊಟ್ಟಿತು. ಸಾವಿರಾರು ಜನ ರೈತರು ಪ್ರಾಣ ಕೊಡಬೇಕಾಯಿತು. ಆದರೆ ಚಳುವಳಿಯನ್ನು ಕೈಬಿಡಲಿಲ್ಲ. ಅದರ ಪ್ರತಿಫಲವಾಗಿ 1967ರಲ್ಲಿ ಹೋರಾಟದ ಮುಖವಾಣಿಯಾಗಿ ಸಂಯುಕ್ತ ರಂಗ ಸರ್ಕಾರ ಅಧಿಕಾರಕ್ಕೆ ಬಂದು ಭೂ ಸುಧಾರಣೆ ಕಾಯ್ದೆಗಳಲ್ಲಿ ಮೂಲಭೂತ ಬದಲಾವಣೆಗಳನ್ನು ತರುವ ಮುಖಾಂತರ ಲಕ್ಷಾಂತರ ಹೆಚ್ಚುವರಿ ಭೂಮಿಯನ್ನು ರೈತರಿಗೆ ಹಿಡಿಯಲು ಮಿಲಿಯಾಂತರ ಬರ್ಗಾದಾರರ (ಗೇಣಿದಾರರ) ಸಾಗುವಳಿ ಹಕ್ಕನ್ನು ಖಾಯಂ ಮಾಡಲು ಪ್ರಯತ್ನ ನಡೆದು, ಅದೇಹೋರಾಟ ಮುಂದುವರೆದು ಇಂದು ಎಡರಂಗ ಸರ್ಕಾರ 11 ವರ್ಷಗಳಿಂದ ಅಧಿಕಾರದಲ್ಲಿದೆ. 30 ಲಕ್ಷ ಬರ್ಗಾ ಹಕ್ಕನ್ನು ಖಾಯಂಗೊಳಿಸಲಾಗಿದೆ 8,27,346 ಎಕರೆ ಜಮೀನನ್ನು ಭೂರಹಿತರಿಗೆ ಹಂಚಲು ಸಾಧ್ಯವಾಗಿದೆ. 80%ರಷ್ಟು ಮಂಡಲ ಪಂಚಾಯಿತಿ ಜಿಲ್ಲಾ ಪರಿಷತ್‌ಗಳನ್ನು ಭೂರಹಿತ ಕೃಷಿ ಕೂಲಿಕಾರ, ಬಡರೈತರು ಹಿಡಿಯಲು ಸಾಧ್ಯವಾಗಿದೆ. ಗ್ರಾಮೀಣ ದುಡಿಯುವ ವರ್ಗವನ್ನು ಇಡೀಯಾಗಿ ಭೂಮಾಲೀಕ, ಶ್ರೀಮಂತ ರೈತರ ದಾಸ್ಯದಿಂದ ಹಿಡಿತದಿಂದ ವಿಮೋಚನೆ ಮಾಡಲು ಸಾಧ್ಯವಾಗಿದೆ.


ಸಂಘಟಿತ ಚಳುವಳಿ, ಸಂಘಟಿತ ನಾಯಕತ್ವ, ಕೇಂದ್ರದ ಧೋರಣೆಯನ್ನು ಅಳವಡಿಸಿಕೊಂಡ ಬಲಿಷ್ಠ ರಾಜ್ಯ ಕೇಂದ್ರವನ್ನು ಕಟ್ಟುವ ಮುಖಾಂತರ ಪಶ್ಚಿಮ ಬಂಗಾಳ ದಿಟ್ಟ ಹೆಜ್ಜೆಯ ದಾಪುಗಾಲು ಹಾಕುತ್ತಿದೆ.

195 0-ರ ಕಾಲಘಟ್ಟ ಕರ್ನಾಟಕ ರೈತ ಚಳುವಳಿ

ಪಶ್ಚಿಮ ಬಂಗಾಳದಲ್ಲಿ ಎಡರಂಗ ಸರ್ಕಾರ ಅಧಿಕಾರಕ್ಕೆ ಬಂದಿರುವ ಹಿನ್ನೆಲೆಯಲ್ಲಿ ಅಲ್ಲಿಯ ನಿರಂತರ ಚಳುವಳಿ, ಹೋರಾಟಗಳ ಪ್ರತಿಫಲವಾಗಿದೆ ಎಂಬುದು ಹೆಚ್ಚಿನವರಿಗೆ ತಿಳಿದಿದೆ. ಆದರೆ ಕರ್ನಾಟಕದಲ್ಲಿಯೂ ಧೀರೋದಾತ್ತ ಹೋರಾಟ ಚಳುವಳಿ ಮಾಡಿದ ಅನುಭವವಿದೆಯೆಂದು ಹೆಚ್ಚಿನವರಿಗೆ ತಿಳಿದಿರಲಾರದು. ಬಂಗಾಳದಲ್ಲಿ 1936ರಿಂದಲೇ ಹೋರಾಟಗಳು ಬೆಳೆದು ಬಂದು 195 0ರ ಕಾಲಘಟ್ಟದಲ್ಲಿ ವ್ಯಾಪಕಗೊಂಡಿತು. ಆದರೆ ಕರ್ನಾಟಕದಲ್ಲಿ 195 0ರ ಸುಮಾರಿಗೆ ಚಳುವಳಿಗಳು ತೀವ್ರ ರೀತಿಯಲ್ಲಿ ಬೆಳೆದು ಬಂದವು. ಈ ಚಳುವಳಿಗಳು ಅಕ್ಕಪಕ್ಕದ ರಾಜ್ಯಗಳ ಹೋರಾಟದ ಪ್ರಭಾವದಿಂದ ಕೂಡಿದ್ದವು. ಮಹಾರಾಷ್ಟ್ರದ ವಾರಲೀ ಆದಿವಾಸಿಗಳ ಹೋರಾಟದ ಪ್ರಭಾವ ಬಾಂಬೇ ಕರ್ನಾಟಕದ ಮೇಲಾಯಿತು. ಆಂಧ್ರದ ತೆಲಂಗಾಣ ಹೋರಾಟದ ಪ್ರಭಾವ ಹಳೇ ಮೈಸೂರು ಪ್ರದೇಶದ ಮೇಲಾಯಿತು. ಕೇರಳದ ಪುನ್ನಪ್ರವಯಲಾರ್ ಹಾಗೂ ಇತರೇ ಹೋರಾಟಗಳ ಪ್ರಭಾವ ದಕ್ಷಿಣ ಕನ್ನಡ ಜಿಲ್ಲೆಗಳ ಮೇಲಾಯಿತು.

ಬಿಟ್ಟಿ ದುಡಿಮೆ, ಗೇಣಿ ಭಾಗದಷ್ಟು ಕಡಿತಗೊಳಿಸಲು, ಜೋಡಿ ಇನಾಮ್ ರದ್ದತಿ, ಜಮೀನ್ದಾರರ ದೌರ್ಜನ್ಯದ ವಿರುದ್ಧ ಸಾವಿರಾರು ಹಳ್ಳಿಗಳಲ್ಲಿ ನಿರಂತರ ಹೋರಾಟ ನಡೆಸಲಾಯ್ತು. ಇಂದು ರಾಜ್ಯದಲ್ಲಿರುವ ಉತ್ತರ ಕನ್ನಡ, ಧಾರವಾಡ, ಬೆಳಗಾಂ, ಬಿಜಾಪುರ, ಕೋಲಾರ, ಶಿವಮೊಗ್ಗ, ಅನಂತರದಲ್ಲಿ ಬೆಂಗಳೂರು, ತುಮಕೂರು, ಕೊಡಗು, ಮೈಸೂರು, ಹೀಗೆ ಏಳೆಂಟು ಜಿಲ್ಲೆಗಳಲ್ಲಿ ಚಳುವಳಿಯ ತೀವ್ರತೆಯುಕ್ಕಿತ್ತೆಂದರೆ ಭೂಮಾಲೀಕರು ದೊಡ್ಡ ರೀತಿಯ ದಬ್ಬಾಳಿಕೆಯನ್ನು ನಡೆಸಿದರು. ಗೂಂಡಾಗಳು ಪೋಲೀಸರು, ಸೇರಿದಂತೆ ಕೆಲವರನ್ನು ಕೊಲೆ ಮಾಡಿಸಿದರು. ಸಾವಿರಾರು ಜನರನ್ನು ಗಡೀಪಾರು ಮಾಡಲಾಯಿತು. ನೂರಾರು ಜನರನ್ನು ಜೇಲಿಗೆ ಹಾಕಲಾಯಿತು. ಗೇಣಿದಾರರ ಮನೆಗಳನ್ನು ಧ್ವಂಸ ಮಾಡಿ ಮಹಿಳೆಯನ್ನು ಮಾನಭಂಗ ಮಾಡಲಾಯಿತು. ಆದಾಗ್ಯೂ ಚಳುವಳಿಯನ್ನು ತಡೆಯಲಾಗಲಿಲ್ಲ. 195 0ರ ದಶಕದ ಗೇಣಿದಾರರ ಹೋರಾಟಗಳು ಕೇಳುವವರಿಗೆ ರೋಮಾಂಚನವಾಗುವಂತಹ ಶೌರ್ಯದಿಂದ, ದೃಢತೆಯಿಂದ ನಡೆದಿತು ಎಂಬುದಕ್ಕೆ ಸಾಕ್ಷಿಯಾಗಿ ಮೈಸೂರು ಸರ್ಕಾರ ಜೋಡಿ ಇನಾಮ್ ರದ್ದತಿ ಕಾಯ್ದೆಯನ್ನು ತರಲೇಬೇಕಾಯಿತು ಎಂಬುದು ಗಮನಾರ್ಹ.

ಇಷ್ಟು ವ್ಯಾಪಕ ಹಾಗೂ ಬಲಿಷ್ಠ ಚಳುವಳಿಗಳು ನಡೆದರೂ ಇದು ರಾಜ್ಯ ವ್ಯಾಪಿಯಾಗಿ ಸುಸಂಘಟಿತ ರೂಪದಲ್ಲಿರಲಿಲ್ಲವೆಂಬ ಅಂಶವನ್ನು ಬಹಳ ಮುಖ್ಯವಾಗಿ ಪಶ್ಚಿಮಬಂಗಾಳದ ಅಂದಿನ ಚಳುವಳಿಗೆ ತುಲನೆ ಮಾಡಿದರೆ ತಿಳಿಯುತ್ತದೆ ಬಂಗಾಳದಲ್ಲಿ 1936ರಿಂದ ನಡೆದು ಬಂದ ಚಳುವಳಿಗೆ ಸಂಘಟಿತ ರೂಪವಿದ್ದು ರಾಜ್ಯ ಸಮಿತಿ ಹಾಗೂ ನಾಯಕತ್ವವಿತ್ತು. ಬದಲಿಗೆ ಕರ್ನಾಟಕದಲ್ಲಿ ಅಕ್ಕಪಕ್ಕದ ರಾಜ್ಯಗಳ ಪ್ರಭಾವದಿಂದ ಬಿಡಿಬಿಡಿಯಾದ ಚಳುವಳಿ 8-10 ಜಿಲ್ಲೆಗಳಲ್ಲಿ ನಡೆದು ಅದರ ಪರಿಣಾಮವಾಗಿ 195 7ರ ಸಮಯಕ್ಕೆ ಒಂದು ಸಂಘಟಿತ ನಾಯಕತ್ವ ಬೇಕೆಂಬ ತಿಳುವಳಿಕೆಯನ್ನು ಪಡೆದು ಬೆಂಗಳೂರಲ್ಲಿ ಮೊದಲನೇ ಸಮ್ಮೇಳನವನ್ನು ನಡೆಸಲಾಯಿತು. ಅಖಿಲ ಭಾರತ ಕಿಸಾನ ಸಭಾದಿಂದ ಕಾ॥ ನಂದೂರಿಪ್ರಸಾದ್‌ರಾವ್ ಮುಖ್ಯ ಅತಿಥಿಯಾಗಿ ಸಮ್ಮೇಳನಕ್ಕೆ ಬಂದಿದ್ದರು. ಅದೇ ಕರ್ನಾಟಕ ಪ್ರಾಂತ ರೈತ ಸಂಘವಾಗಿತ್ತು ಇದು ಕಿಸಾನ ಸಭಾದ ಒಂದು ಭಾಗವಾಯಿತು. ಆದರೆ ಗಮನಿಸಲೇ ಬೇಕಾದ ಒಂದಂಶವೆಂದರೆ ಇದೇ ಸಮಯದಲ್ಲಿ ಕಮ್ಯೂನಿಸ್ಟ್ ಪಕ್ಷದಲ್ಲಿ ಆಳುವ ವರ್ಗ ಪ್ರಭುತ್ವದ ಬಗ್ಗೆ ಆಳುವ ಕಾಂಗ್ರೆಸ್ಸಿನ ವರ್ಗ ಧೋರಣೆಯ ಬಗ್ಗೆ ತೀವ್ರ ಭಿನ್ನಾಭಿಪ್ರಾಯಗಳು ತಲೆದೋರಿದ್ದವು. ಬಹು ಸಂಖ್ಯಾತ ಕಮ್ಯೂನಿಸ್ಟ್ ಮುಖಂಡರು ಕಿಸಾನ ಚಳುವಳಿಯ ಮುಖಂಡರಾಗಿದ್ದು, ಅದರ ಪರಿಣಾಮ ಕರ್ನಾಟಕ ಪ್ರಾಂತ ರೈತ ಸಂಘದ ಮೇಲೆ ಬಿದ್ದಿತು. ಧೋರಣೆಯ ಸ್ಪಷ್ಟತೆಯಿಲ್ಲದ ರಾಜ್ಯ ಸಮಿತಿ ಸಂಘಟನಾತ್ಮಕವಾಗಿ ಬಲಿಷ್ಠವಾಗಿರಲಾರದು ಚಳುವಳಿಯನ್ನು ಮಾತ್ರ ಮುಂದುವರಿಸಲಾಯಿತು. ಅದಕ್ಕೆ ಪಕ್ವವಾದ ನಾಯಕತ್ವದ ಕೊರತೆಯಿತ್ತು. ಆದರೆ ಚಳುವಳಿಯ ಬಿಸಿ ಮಾತ್ರ ತೀವ್ರತೆಯಿಂದ ಕೂಡಿತ್ತು ಎಂಬುದು ಸ್ಪಷ್ಟ. ಚಳುವಳಿಯ ಮುಂದುವರಿಕೆಯಿಂದಾಗಿ ಮೈಸೂರು ಸರ್ಕಾರ ಬಿ.ಡಿ.ಜತ್ತಿ ಸಮಿತಿಯನ್ನು ನೇಮಕ ಮಾಡಿ ಭೂಸುಧಾರಣೆ ಕುರಿತು ಒಂದು ವರದಿಯನ್ನು ಮಂಡಿಸಿತು. ಆ ವರದಿಯನ್ನು ವಿಧಾನ ಸಭೆಯ ಮುಂದೆ ತುರ್ತಾಗಿ ತರುವಂತೆ ಒತ್ತಾಯಿಸಿಯೂ ಕರ್ನಾಟಕ ಪ್ರಾಂತ ರೈತ ಸಂಘ ಚಳುವಳಿ ನಡೆಸಿತು. ಅದು 1961ರಲ್ಲಿ ಭೂ ಸುಧಾರಣೆ



ಚಂದ್ರಶೇಖರ ಬಾಳಿ

ಕಾಯ್ದೆಯಾಗಿ ಬಂದ ಮೇಲೆ ಅದರ ಜಾರಿಗಾಗಿಯೂ ಚಳುವಳಿಯನ್ನು ನಡೆಸಿತು. ಆದರೆ 1964ರ ಕಮ್ಯೂನಿಸ್ಟ್ ಪಕ್ಷದಲ್ಲಿ ಬಂದ ಬಿರುಕು, ಕೆ.ಪಿ.ಆರ್.ಎಸ್. ನಾಯಕತ್ವವನ್ನು ಇನ್ನಷ್ಟು ಬಲಹೀನಗೊಳಿಸಿತು. 1967ರಲ್ಲಿ ಭೂಸುಧಾರಣೆ ಕಾಯ್ದೆಯನ್ನು ಜಾರಿಗೆ ತರಲು ಸರ್ಕಾರ ಪ್ರಯತ್ನಿಸುವಾಗ ಪ್ರಾಂತ ರೈತ ಸಂಘದ ಅಂದಿನ ನಾಯಕತ್ವದ ತಪ್ಪು ಧೋರಣೆಯಿಂದಾಗಿ, ಭೂಸುಧಾರಣಾ ಕಾಯ್ದೆ ರೈತ ವಿರೋಧಿಯಾಗಿಯೆಂದು ಹೇಳಿಕೆ ನೀಡಿ ತಟಸ್ಥವಾಯಿತು. ಹತ್ತಾರು ವರ್ಷ ನಿರಂತರ ಹೋರಾಟ ಮಾಡಿದ್ದರ ಪ್ರತಿಫಲವನ್ನು ಕಾಂಗ್ರೆಸ್ ಪಕ್ಷ ಪಡೆಯಲು ಸಾಧ್ಯವಾಯಿತು.

ಪಶ್ಚಿಮ ಬಂಗಾಳದಲ್ಲಿ ಕಿಸಾನ್ ಸಭಾ ಹೋರಾಟದ ಪ್ರತಿಫಲವಾಗಿ ಎಡಶಕ್ತಿ ಬೆಳೆದು ಬರುವಂತಾದರೆ, ಕರ್ನಾಟಕದಲ್ಲಿ ಕಾಂಗ್ರೆಸ್ ಇನ್ನಷ್ಟು ಬಲಿಷ್ಠಗೊಳ್ಳಲು ಸಾಧ್ಯವಾಯಿತು. ಅದರ ಪರಿಣಾಮವಾಗಿಯೇ ತನಗೆ ಮೇಲುವರ್ಗದವರ ಮತ ಬೇಕಿಲ್ಲ. ತನ್ನ ಮತದಾರರು ಅದೃಶ್ಯರು ಎಂದು ಹೇಳಿಕೊಂಡು, ಮುಂದುವರಿದವರ ವಿರೋಧಿ ಹಿಂದುಳಿದವರ ನಾಯಕನೆಂದು ಪ್ರಚಾರಗಿಟ್ಟಿಸಿದ ಕಾಂಗ್ರೆಸ್ ಮುಖಂಡ ದಿವಂಗತ ದೇವರಾಜಅರಸು ಅಧಿಕಾರಕ್ಕೆ ಬಂದಿದು ಹೇಗೆ ಎಂಬುದನ್ನು ಈ ಹೋರಾಟದಿಂದ ತಿಳಿಯುತ್ತದೆ. ಚರಿತ್ರೆಯ ಪುಟಗಳಿಂದ ಇದನ್ನು ಹೊಸ ಕಾರ್ಯಕರ್ತರು ಕಲಿಯಬೇಕಾಗಿದೆ.

ಧೋರಣೆಯ ಗೊಂದಲ, ಬಲಹೀನ ಕೇಂದ್ರದ ಪರಿಣಾಮವಾಗಿ ಚರಿತ್ರಾರ್ಹ ರೈತಾಪಿ ವರ್ಗದ ಚಳುವಳಿ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಬೆಳೆಸಲು ರಾಜ್ಯದಲ್ಲಿ ಸಾಧ್ಯವಾಯಿತೆಂಬುದನ್ನು ಮನಗಾಣಬೇಕಾಗಿದೆ.

ಮತ್ತೊಮ್ಮೆ ಭೂಮಿಗಾಗಿ ಹೋರಾಟ

ಇಂದು ಕರ್ನಾಟಕದಲ್ಲಿ, ಅಖಿಲ ಭಾರತ ಕಿಸಾನ ಸಭಾ ಕರೆಯ ಮೇರೆಗೆ ಭೂಸುಧಾರಣಾ ಸಮಾವೇಶವನ್ನು ನಡೆಸಲು ಕರೆ ಕೊಡಲಾಗಿದೆ. ಈ ಸಮಾವೇಶ ಮಾಡುವಾಗ ಪರಿಸ್ಥಿತಿ ಹಿಂದಿನಂತಿಲ್ಲವೆಂಬುದು ಸ್ಪಷ್ಟ. ಸ್ಪಷ್ಟ ಧೋರಣೆಯಿಂದ ಕೂಡಿದ ಕಿಸಾನ ಸಭಾ ಕೇಂದ್ರ ಸಮಿತಿ ನಾಯಕತ್ವದಲ್ಲಿದೆ. ಆದರೆ ರಾಜ್ಯದಲ್ಲಿ ಆ ಧೋರಣೆಯನ್ನು ಕರ್ನಾಟಕ ಪ್ರಾಂತ ರೈತ ಸಂಘ ಸಂಪೂರ್ಣವಾಗಿ ಮೈಗೂಡಿಸಿಕೊಂಡಿದೆಯೇ? ಎಂಬ ಪ್ರಶ್ನೆಗೆ ನಿಖರವಾದ ಉತ್ತರ ಕಷ್ಟ ಸಾಧ್ಯವಾಗಿದೆ.

ಯಾಕೆಂದರೆ ಕಿಸಾನ ಸಭಾ ಧೋರಣೆಯ ಪ್ರಕಾರ ಕೃಷಿ ಕೂಲಿಕಾರ ಬಡರೈತರ ನೇತೃತ್ವದಲ್ಲಿ ಉಳಿದ ರೈತರನ್ನು ಸಂಘಟಿಸಬೇಕಾಗಿದೆ, ಕೃಷಿ ಕೂಲಿಕಾರರ ಬಡ ರೈತರ ಪ್ರತ್ಯೇಕ ಬೇಡಿಕೆಗಳಾದ ಭೂಮಿ, ಕೂಲಿ, ಕಾಮಗಾರಿಯಂತಹ ಬೇಡಿಕೆಗಳಿಗೆ ಹೋರಾಟ ಮಾಡುವ ಮುಖಾಂತರ ಉಳಿದ ರೈತಾಪಿ ವಿಭಾಗದ ಬೇಡಿಕೆಗಳನ್ನು ಒಳಗೊಳಿಸಬೇಕು, ಕೃಷಿ ಕೂಲಿಕಾರ, ಬಡರೈತರ ವರ್ಗ ತಳಹದಿ ರಚನೆಯಾದಲ್ಲಿ ಮಾತ್ರ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಯನ್ನು ಬೆಳೆಸಲು ಸಾಧ್ಯವಾಗಿದೆಯೆಂಬುದು ಅನುಭವದ ಮಾತಾಗಿದೆ. ಈ ಹಿನ್ನೆಲೆಯಲ್ಲಿಯೇ ಕೃಷಿ ಕೂಲಿಕಾರರನ್ನು ಪ್ರತ್ಯೇಕ ಸಂಘಟಿಸಬೇಕೆಂದು 1981ರಲ್ಲಿ ಮಿಡ್ನಾಪುರ ಅಖಿಲಭಾರತ ಕಿಸಾನ್ ಸಭಾ ಸಮ್ಮೇಳನದಲ್ಲಿ ಪ್ರತ್ಯೇಕ ಅಖಿಲಭಾರತ ಕೃಷಿ ಕೂಲಿಕಾರರ ಸಂಘಟನೆಯನ್ನು ಹುಟ್ಟು ಹಾಕಲಾಯಿತು. ಆ ಹಿನ್ನೆಲೆಯಲ್ಲಿಯೇ ಕರ್ನಾಟಕ ಪ್ರಾಂತ ರೈತ ಸಂಘದ 8ನೇ ರಾಜ್ಯ ಸಮ್ಮೇಳನ ರಾಯಚೂರಲ್ಲಿ ನಡೆದು, ಪ್ರತ್ಯೇಕ ಕೃಷಿಕೂಲಿಕಾರ ಸಂಘಟನೆಯನ್ನು ಘೋಷಿಸಲಾಯಿತು. ಅನಂತರದ ಮೂರು ವರ್ಷಗಳು ಕಳೆದರೂ ಅಂತಹ ಗಣನೀಯ ಬೆಳವಣಿಗೆ ಕೃಷಿ ಕೂಲಿಕಾರ ಸಂಘಟನೆಯಲ್ಲಿ ಕಂಡಿಲ್ಲ. ಈ ಅಂಶವನ್ನು ಗಂಭೀರವಾಗಿ ತೆಗೆದುಕೊಂಡರೆ, ಭೂ ಸುಧಾರಣಾ ಸಮಾವೇಶವನ್ನು ಯಶಸ್ವಿ ಮಾಡಲು ಸಾಧ್ಯವಾಗುತ್ತದೆ.

ರಾಜ್ಯದಲ್ಲಿ ಕೆಲವೆಡೆ ಕೃಷಿ ಕೂಲಿಕಾರ ಬಡ ರೈತರ ಪ್ರಶ್ನೆಯನ್ನು ಇಂದಿಗೂ ದಿಟ್ಟವಾಗಿ ತೆಗೆದುಕೊಳ್ಳಲಾಗುತ್ತದೆ, ಅದರ ನಾಯಕತ್ವದಲ್ಲಿ ವಿಶಾಲ ಚಳುವಳಿಯನ್ನು ಬೆಳೆಸಲಾಗಿಲ್ಲ, ಇನ್ನೂ ಕೆಲವೆಡೆ ತಾತ್ಕಾಲಿಕವಾಗಿ ಅವಿಭಾಜ್ಯ ಹೋರಾಟಗಳನ್ನು ನಡೆಸಿ ಮುಂದುವರೆಸದೆ ಕೈಬಿಡಲಾಗಿದೆ. ಇನ್ನೂ ಕೆಲವೆಡೆ ರೈತಾಪಿ ಬೇಡಿಕೆಗಳಿಗೆ ಮಾತ್ರ ಸೀಮಿತವಾಗಿದ್ದು, ಆ ಪ್ರದೇಶದಲ್ಲಿ ಕೃಷಿ ಕೂಲಿಕಾರ ಬಡ ರೈತರನ್ನು ಒಳಗೊಳಿಸದೆಯಿರುವುದರಿಂದ, ಆ ರೈತರು ಸಂಘಟನೆಯಲ್ಲಿ ಉಳಿಯದೆಯಿರುವದು ಕಾಣುತ್ತದೆ. ಇದು ಒಂದೆಡೆಯಾದರೆ ಇನ್ನೊಂದೆಡೆ ಭೂಮಿಯ ಪ್ರಶ್ನೆ ಜಿಲ್ಲೆಗಳಲ್ಲಿ ಹಲವಾರು ರೀತಿಯಲ್ಲಿದೆ. ಕೋಲಾರದಲ್ಲಿ 5 ಲಕ್ಷ ಎಕರೆ ಸರ್ಕಾರಿ ಭೂಮಿಯನ್ನು ಹಿಡಿದು ಸಾಗುವಳಿ ಮಾಡುತ್ತಿದ್ದು, ಅವರಿಗೆ ಖಾಯಂಗೊಳಿಸುವ ಪ್ರಶ್ನೆಯಾಗಿದೆ, ಬಳ್ಳಾರಿಯಲ್ಲಿ 5 ಲಕ್ಷ ಎಕರೆ ಸಾಮಾಜಿಕ ಅರಣ್ಯ ಇಲಾಖೆಯ ಭೂಮಿಯಿದ್ದು ಅದನ್ನು ಹಿಡಿಯುವ ಕೆಲಸ ನಡೆದಿದೆ. ಈ ರೀತಿ ವೈವಿಧ್ಯತೆಯಿಂದ ಕೂಡಿದ ಪರಿಸ್ಥಿತಿಯಿರುವಾಗ ಭೂಸುಧಾರಣಾ ಸಮಾವೇಶವನ್ನು ನಡೆಸುವ ತಯಾರಿ ನಡೆದಿದೆ. 1975 ರ ನಂತರ ಬಂದ ಸಂಗಾತಿಗಳಿಗೆ ಇದು ಹೊಸದೆಂದು ಕಾಣಬಹುದು, ಹಿಂದೆ ಹೋರಾಟ ನಡೆಸಿದ ಸಂಗಾತಿಗಳಿಗೆ ಅಂದಿನ ಹೋರಾಟವಾಗಿಯೇ ಕಾಣಬಹುದು ಇದು ಅಂದು ನಡೆಸಿದ ಧೀಮಂತ ಹೋರಾಟದ ಮುಂದುವರಿಕೆಯೇ ಆಗಿದೆಯೆಂಬುದರಲ್ಲಿ ಯಾವ ಅನುಮಾನವಿಲ್ಲ, ಆದರೆ ಬದಲಾದ ಪರಿಸ್ಥಿತಿಯಲ್ಲಿ ಭೂ ಸಂಬಂಧಗಳನ್ನು ಅಭ್ಯಾಸಿಸಿ ಸ್ಪಷ್ಟ ಹೆಜ್ಜೆಯನ್ನಿಡಬೇಕಾಗಿದೆ. ಅದಕ್ಕೆ ಹಿಂದಿನ ಕಹಿ ಅನುಭವದ ಪಾಠವನ್ನು ಸೂಕ್ಷ್ಮವಾಗಿ ಗ್ರಹಿಸಿಕೊಳ್ಳಬೇಕಾಗಿದೆ.

ಆಗ ಮಾತ್ರ ಭೂ ಸಮಾವೇಶ ಕರ್ನಾಟಕ ರಾಜ್ಯದ ಕೃಷಿ ಕೂಲಿಕಾರ ಬಡ ರೈತರನ್ನು ಭೂಮಿಗಾಗಿ ವ್ಯಾಪಕ ಹಾಗೂ ನಿರ್ದಿಷ್ಟ ಗುರಿಯೊಂದಿಗೆ ಚಳುವಳಿಗೆ ಇಳಿಸುವ ಮುಖಾಂತರ ಗ್ರಾಮೀಣ ವರ್ಗ ತಳಹದಿಯನ್ನು ನಿರ್ಮಿಸಲು ಬಲಿಷ್ಠ ಕಿಸಾನ್ ಚಳುವಳಿಯನ್ನು ಬೆಳೆಸಲು ನಾಂದಿಯಾಯಿತು.

ಸಮಾವೇಶದಲ್ಲಿ ನಮ್ಮ ಹಾದಿ ಬಂಗಾಳದ ಹಾದಿಯಾಗಬೇಕಾಗಿದೆ

ಈ ಭೂ ಸಮಾವೇಶ ಪ್ರಾಂತ ರೈತ ಸಂಘ, ಪ್ರಾಂತ ಕೃಷಿ ಕೂಲಿಕಾರರ ನೇತೃತ್ವದಲ್ಲಿ ನಡೆಯುತ್ತದೆ. ಇವೆರಡರ ಗುರಿ ಒಂದೇ ಆಗಿದೆ. ಭೂ ಕ್ರಾಂತಿ, ಕೃಷಿ ಕೂಲಿಕಾರ, ಬಡ ರೈತರ ನಾಯಕತ್ವದಲ್ಲಿ ಉಳಿದೆಲ್ಲಾ ರೈತರ ಐಕ್ಯತೆಯನ್ನು ಭೂಮಾಲೀಕರ ವಿರುದ್ಧ ಅಣಿನೆರೆಸುವ ಮುಖಾಂತರ ಕಾರ್ಮಿಕ ವರ್ಗದ ನಾಯಕತ್ವದಲ್ಲಿ ಬಂಡವಾಳಶಾಹಿ-ಭೂಮಾಲೀಕ ವರ್ಗ ಪ್ರಭುತ್ವವನ್ನು ಕಿತ್ತೊಗೆಯಲು ಬೇಕಾದ ಪ್ರಜ್ಞೆಯನ್ನು ರೈತರಲ್ಲಿ ತರುವದಾಗಿದೆ. ಕಾರಣ ಸಮಾವೇಶವನ್ನು ಯಶಸ್ವಿಗೊಳಿಸಲು ಎಲ್ಲಾ ಸಂಗಾತಿಗಳು ಈ ಅಂಶಗಳನ್ನು ಗಮನದಲ್ಲಿರಿಸಬೇಕಾಗಿದೆ.

೧) ಕೃಷಿ ಕೂಲಿಕಾರ, ಬಡ ರೈತರನ್ನು ಅವರದೇ ಆದ ಪ್ರತ್ಯೇಕ ಬೇಡಿಕೆಗಳಿಗಾಗಿ, ಹಾಗೆಯೇ ಇತರ ರೈತಾಪಿ, ವಿಭಾಗದ ಬೇಡಿಕೆಯನ್ನೊಳಗೊಂಡು ಹೋರಾಟ ನಡೆಸುವ ರಾಜಕೀಯ ದೃಢತೆ ಬೇಕು, ಉಳಿದ, ರೈತರು ನಮ್ಮಿಂದ ದೂರ ಹೋಗುತ್ತಾರೆಂಬ ಭ್ರಮೆ ಹಾಗೂ ಚಂಚಲತೆಯ ವಿರುದ್ಧ ಸಮರ ಸಾರಬೇಕು, ಕೃಷಿ ಕೂಲಿಕಾರ, ಬಡರೈತರ ವರ್ಗ ತಳಹದಿಯಿಲ್ಲದೆ ಉಳಿದ ರೈತರು ಸಂಘಟನೆಯೊಳಗೆ ಬರುವುದು ಬಿಸಿಲು ಕುದುರೆಯನ್ನು ನೈಜ ಕುದುರೆಯೆಂದು ತಿಳಿಯುವ ಮೂರ್ಖತನವಾಗಿರುತ್ತದೆ.

2) ಸ್ಥಳೀಯವಾಗಿ, ಸಂಕುಚಿತವಾಗಿ, ತಿಳಿದ ಮಟ್ಟಕ್ಕೆ ಸ್ಥಳೀಯವಾಗಿ ಚಳುವಳಿ ಮಾಡುವುದನ್ನು ಮೀರಿ ಅಖಿಲಭಾರತ ಧೋರಣೆಯನ್ನು ಮೈಗೂಡಿಸಿಕೊಂಡು ಬಲಿಷ್ಠ ಕೇಂದ್ರವನ್ನು ರಾಜ್ಯ ಘಟಕವನ್ನು ಕಟ್ಟಲು ಕೆಳಗಡೆ ಪಡೆದಿರುವ ಎಲ್ಲಾ ಅನುಭವಗಳನ್ನು, ಅಸ್ತಿತ್ವದಲ್ಲಿರುವ ಭೂಸಂಬಂಧಗಳನ್ನು ಮೇಲೆ ವರದಿ ಮಾಡುವಂತಾಗಬೇಕು. ಎಲ್ಲಾ ಕೆಳಗಿನ ಪರಿಸ್ಥಿತಿ ಅನುಭವ, ಮೇಲಿನ ಧೋರಣೆ, ಮತ್ತು ಅನುಭವನ್ನು ಸಮ್ಮಿಲನಗೊಳಿಸಿ ರಾಜ್ಯದಲ್ಲಿ ಭೂಮಿಯ ಚಳುವಳಿಯ ದಿಕ್ಕೇನು? ಯಾವ ಯಾವ ಜಿಲ್ಲೆಯಲ್ಲಿ ಯಾವ ರೀತಿಯ ಹೋರಾಟವನ್ನು ರೂಪಿಸಬೇಕೆಂಬುದನ್ನು ರಾಜ್ಯ ನಾಯಕತ್ವ ರೂಪಿಸುವಂತಾಗಬೇಕು. ಆಗ ಮಾತ್ರ ರಾಜ್ಯದಲ್ಲಿ ಗ್ರಾಮೀಣ ಭೂಸಂಬಂಧಗಳನ್ನು ಹೇಗೆ ಬದಲಾವಣೆ ಮಾಡಬೇಕು, ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಬೆಳೆಸಬೇಕೆಂಬ ತಿಳುವಳಿಕೆ ಪಡೆಯಲು ಸಾಧ್ಯವಾದೀತು.

3) ಭೂ ಸಂಬಂಧಗಳ ಬಗ್ಗೆ ನಮಗೆಲ್ಲಾ ತಿಳಿದಿದೆಯೆಂಬ ಅಹಮ್ಮನ್ನು ತೊರೆದು, ಇರುವ ಭೂಮಿಯೆಷ್ಟು ಅದರಲ್ಲಿ ಭೂಮಾಲೀಕ, ಶ್ರೀಮಂತ ರೈತರ ಪಾಲೆಷ್ಟು, ಉಳಿದ ರೈತ, ಭೂರಹಿತರ ಪಾತ್ರವೇನು, ಗುತ್ತಿಗೆ, ಪಾಲಿಗೆ, ಗೇಣಿಗೆ ಕೊಡುವುದು ಯಾವ ರೀತಿಯಲ್ಲಿ ಮುಂದುವರೆದಿದೆ, ದೇವರಾಜಅರಸರ ಭೂಸುಧಾರಣಾ ತಿದ್ದುಪಡಿ ಕಾಯ್ದೆಯ ಪರಿಣಾಮಗಳೇನು, ಭೂಮಾಲೀಕ, ಕೂಲಿಕಾರ ಸಂಬಂಧಗಳು ಹೇಗಿವೆಯೆಂಬುದನ್ನು ಸೂಕ್ಷ್ಮವಾಗಿ ಅಧ್ಯಯನ ನಡೆಸಿ ಸಮಾವೇಶಕ್ಕೆ ಸಾಧ್ಯವಾದಷ್ಟು ಬರಹದಲ್ಲಿ ಇನ್ನುಳಿದದ್ದು ಸಮಾವೇಶದಲ್ಲಿ ಹೇಳುವ ಮುಖಾಂತರ ಸಮಾವೇಶವನ್ನು ಯಶಸ್ವಿಗೊಳಿಸಬೇಕಾಗಿದೆ.

ಚಂದ್ರಶೇಖರಬಾಳಿ

ವಿಶ್ವಸಂಸ್ಥೆ ಉಸ್ತುವಾರಿ ಪಡೆಗಳಲ್ಲಿ ಕಡಿತ ಒಪ್ಪಲು ಸ್ವಾಪೋ ನಿರಾಕರಣೆ

11 ವರ್ಷಗಳ ಹಿಂದೆ 1978ರಲ್ಲಿ ವಿಶ್ವ ಸಂಸ್ಥೆಯ ಭದ್ರತಾ ಸಮಿತಿಯ ನಿರ್ಣಯ ಸಂಖ್ಯೆ 435 ನಮೀಬಿಯಾದ ಸ್ವಾತಂತ್ರ್ಯದ ವಿಧಾನಗಳನ್ನು ರೂಪಿಸಿತ್ತು. ಇತ್ತೀಚೆಗೆ ವಿಶ್ವಸಂಸ್ಥೆಯ ಆಶ್ರಯದಲ್ಲಿ ನಡೆದ ಮಾತುಕತೆಗಳಲ್ಲಿ ಈ ನಿರ್ಣಯವನ್ನು ಜ್ಯಾರಿಗೊಳಿಸಲು ಒಪ್ಪಂದ ಏರ್ಪಟ್ಟಿತು. ಆದರೆ ಇದರಲ್ಲಿ ಅಡ್ಡಿ-ಆತಂಕ ಒಡ್ಡಲು ವಿಶ್ವಸಂಸ್ಥೆಯ ಖಾಯಂ ಸದಸ್ಯ ದೇಶಗಳು ಮುಖ್ಯವಾಗಿ ಅಮೆರಿಕಾ ಪ್ರಯತ್ನಿಸುತಿರುವಂತಿದೆ.

ನಿರ್ಣಯ ಸಂಖ್ಯೆ 435 ನಮೀಬಿಯಾ ಸ್ವಾತಂತ್ರ್ಯದ ಮೊದಲು 'ವಿಶ್ವಸಂಸ್ಥೆ ಸಂಕ್ರಮಣ ಕಾಲದ ನೆರವು ಗುಂಪು' . ರಚಿಸಬೇಕೆಂದು ವಿಧಿಸಿತ್ತು. ಆದರೆ ಈಗ ಬೆಲೆಯೇರಿಕೆ ಹಾಗೂ ವಿಶ್ವಸಂಸ್ಥೆಯ ಆರ್ಥಿಕ ದುಸ್ಥಿತಿಯಿಂದಾಗಿ ಈ ನೆರವು ಪಡೆಗಳ ಸಂಖ್ಯೆಯನ್ನು 75 00ರಿಂದ 465 0ಕ್ಕೆ ಇಳಿಸಬೇಕೆಂದು ಭದ್ರತಾ ಸಮಿತಿಯ ಐದು ಖಾಯಂ ಸದಸ್ಯ ದೇಶಗಳು ಒತ್ತಾಯಿಸುತ್ತಿವೆ. ಅಂಗೋಲಾ ಮತ್ತು ದಕ್ಷಿಣಆಫ್ರಿಕಾ ನಡುವೆ ಸಂಬಂಧ ಸುಧಾರಿಸಿರುವುದರಿಂದಲೂ ಇದು ಅಪೇಕ್ಷಣೀಯ ಎಂದು ಅವು ಹೇಳುತ್ತಿವೆ.

ಆದರೆ ಇದನ್ನು ಅಲಿಪ್ತ ರಾಷ್ಟ್ರಗಳು ಹಾಗೂ ನಮೀಬಿಯಾದ ವಿಮೋಚನಾ ಸಂಘಟನೆ ಸ್ವಾಪೋ ನಮೀಬಿಯಾ ಸ್ವಾತಂತ್ರ್ಯ ಪ್ರಕ್ರಿಯೆಯನ್ನು ಅಪಾಯಕ್ಕೆ ತಳ್ಳುವ ಕ್ರಮ ಎಂದು ವರ್ಣಿಸಿವೆ. ಜನವರಿ 24ರಂದು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯವರು ಈ ಬಗ್ಗೆ ಮಂಡಿಸಿದ ವರದಿ ತನಗೆ ಒಪ್ಪಿಗೆಯಿಲ್ಲ, ಅದು ಅಮೆರಿಕಾದ ಬಲವಾದ ಪ್ರಭಾವಕ್ಕೆ ಬಾಗಿದ ವರದಿಯೆಂದು ಸ್ವಾಪೋ ಹೇಳಿದೆ.

ವಿಶ್ವಸಂಸ್ಥೆ ಉಸ್ತುವಾರಿ ತಂಡದಲ್ಲಿ ಈ ಕಡಿತದಿಂದ ದಕ್ಷಿಣ ಆಫ್ರಿಕಾ ಮತ್ತು ಅದರ ಕೈಗೊಂಬೆಗಳಿಗೆ ಬಹಳ ಅನುಕೂಲವಾಗುತ್ತದೆ. ನಮೀಬಿಯಾದಲ್ಲಿ 1ಲಕ್ಷ 5 0 ಸಾವಿರ ದಕ್ಷಿಣ ಆಫ್ರಿಕಾ ಪಡೆಗಳಿರುವಾಗ ಅಲ್ಲಿ ಒಪ್ಪಂದದ ಪ್ರಕಾರ ಮುಕ್ತ ಚುನಾವಣೆ ನಡೆಯುವುದು ಉಸ್ತುವಾರಿ ಪಡೆಗಳು ಸಾಕಷ್ಟು ಸಂಖ್ಯೆಯಲ್ಲಿದ್ದರೆ ಮಾತ್ರವೇ ಸಾಧ್ಯ.

ವಾಸ್ತವವಾಗಿ ಇದು ರಾಜಕೀಯ ಪ್ರಶ್ನೆ. ಆರ್ಥಿಕ ಪ್ರಶ್ನೆ ಕೇವಲ ಒಂದು ನೆವವಾಗಿದೆಯಷ್ಟೇ. ಚುನಾವಣೆಗಳನ್ನು ಬುಡಮೇಲು ಮಾಡಲು ಅಮೆರಿಕಾ ಮತ್ತು ದಕ್ಷಿಣ ಆಫ್ರಿಕಾ ಇದನ್ನು ಬಳಸುತ್ತಿದೆ ಎಂದು ಸ್ವಾಪೋ ಹೇಳಿದೆ.

ಈ ಕಡಿತದ ವಿರುದ್ಧ ವಿಶ್ವ ಜನಾಭಿಪ್ರಾಯ ಮೂಡಿಸಬೇಕೆಂದೂ ಸ್ವಾಪೋ ಹೇಳಿದೆ.

ಈ ಹಿನ್ನೆಲೆಯಲ್ಲಿಯೇ ಕ್ಯೂಬಾದ ಅಧ್ಯಕ್ಷ ಫಿಡೆಲ್ ಕ್ಯಾಸ್ಟ್ರೋ ವಿಶ್ವಸಂಸ್ಥೆಯ ಪ್ರಜಾಪ್ರಭುತ್ವೀಕರಣದ ಪ್ರಶ್ನೆ ಎತ್ತಿದ್ದಾರೆ.

ಹಳೆಯ ಬ್ರಿಟಿಷ್ ಸಾಮ್ರಾಜ್ಯದ ಅಳಿದುಳಿದ ಭಾಗ 5 ಕೋಟಿ ಜನಸಂಖ್ಯೆಯ ಬ್ರಿಟನ್‌ಗೆ ಭದ್ರತಾ ಸಮಿತಿಯ ನಿರ್ಣಯಗಳನ್ನು ವಿಟೋ ಮಾಡುವ ಅಧಿಕಾರವಿದೆ. ಆದರೆ 75 ಕೋಟಿ ಜನಸಂಖ್ಯೆಯ, ಒಂದೊಮ್ಮೆ ಆ ಸಾಮ್ರಾಜ್ಯದ ವಸಾಹತುವಾಗಿದ್ದ ಭಾರತಕ್ಕೆ ಆ ಅಧಿಕಾರವಿಲ್ಲ. ವಿಶ್ವಸಂಸ್ಥೆಯ ಇದೆಂತಹ ಪ್ರಜಾಪ್ರಭುತ್ವ ಎಂದು ಅವರು ಪ್ರಶ್ನಿಸಿದ್ದಾರೆ.

ಪಾಕಿಸ್ತಾನದಲ್ಲಿ 30 ಅಮೆರಿಕನ್ ನೆಲೆಗಳು

ಅಮೆರಿಕಾ ಸಂಯುಕ್ತ ಸಂಸ್ಥಾನ ಏಷ್ಯಾ ಪ್ರದೇಶದಲ್ಲಿ ಪಾಕಿಸ್ತಾನಕ್ಕೆ ತನ್ನ ಪೊಲೀಸ್ ಪೇದೆಯ ಪಾತ್ರ ವಹಿಸುವಂತೆ ಮಾಡುತ್ತಿದೆ. ಅಮೆರಿಕಾದ 30 ನಾವಿಕ ಮತ್ತು ವೈಮಾನಿಕ ನೆಲೆಗಳನ್ನು ಪಾಕಿಸ್ತಾನದಲ್ಲಿ ಸ್ಥಾಪಿಸಲಾಗುತ್ತಿದೆ ಎಂದು ಭಾರತದಲ್ಲಿ ಆಫ್ಘಾನಿಸ್ತಾನದ ರಾಯಭಾರಿ ಅಬ್ದುಲ್ ಸಮದ್ ಅಝೂರ್ ಆಪಾದಿಸಿದ್ದಾರೆ. ಈ ಕಾರಣಕ್ಕಾಗಿಯೇ ಆಫ್ಘಾನಿಸ್ತಾನ್ ಗಡಿಯಲ್ಲಿ ತಿಕ್ಕಾಟವನ್ನು ಮುಂದುವರೆಸಲು ಪಾಕಿಸ್ತಾನ ಪ್ರಯತ್ನಿಸುತ್ತಿದೆ ಯಾಕೆಂದರೆ ಪರಿಸ್ಥಿತಿ ಸಾಮಾನ್ಯವಾಗಿದ್ದರೆ ಪಾಕಿಸ್ತಾನದ ಪ್ರಜಾಪ್ರಭುತ್ವ ಶಕ್ತಿಗಳು ಅಮೆರಿಕಾಕ್ಕೆ ನೆಲೆಕೊಡುವುದನ್ನು ತೀವ್ರವಾಗಿ ವಿರೋಧಿಸುತ್ತವೆ.

ಸೋವಿಯತ್ ಸೇನೆಗಳ ಸಂಪೂರ್ಣವಾಗಿ ವಾಪಸಾಗುತ್ತಿದ್ದಂತೆ ಆಫ್ಘಾನಿಸ್ತಾನದಲ್ಲಿ ವಿದೇಶೀ ಹಸ್ತಕ್ಷೇಪ ತೀವ್ರಗೊಳ್ಳುತ್ತಿದೆ ಎಂದ ರಾಯಭಾರಿಗಳು ಇತ್ತೀಚೆಗೆ ಕಾಬೂಲ್ ಹಾಗೂ ಇತರ ಆಫ್ಘಾನಿಸ್ತಾನೀ ನಗರಗಳಲ್ಲಿನ ಜನತೆಯ ಬೃಹತ್‌ಮತ ಪ್ರದರ್ಶನಗಳು ಮಿಲಿಟರಿ ಪರಿಹಾರ ಬಯಸುವ ದಂಗೆಕೋರರಿಗೆ ಸೋಲು ಖಂಡಿತ ಎಂಬುದನ್ನು ಸೂಚಿಸಿವೆ ಎಂದರು.

ಫೆಬ್ರವರಿ 15 ರಂದು ಸೋವಿಯತ್ ಪಡೆಗಳ ಸಂಪೂರ್ಣ ವಾಪಸಾತಿಯ ನಂತರ ದೇಶವನ್ನು ರಕ್ಷಿಸುವಲ್ಲಿ ಆಫ್ಘಾನಿಸ್ತಾನ್ ಸೇನೆ ಸಮರ್ಥವಾಗಿದೆ ಎಂದು ಆಫ್ಘಾನ್ ಸೇನಾಧ್ಯಕ್ಷ ಲೆಫ್ಟಿನೆಂಟ್ ಜನರಲ್ ಆಲಿ ಆಸಫ್ ದೆಲಾವರ್ ಹೇಳಿದ್ದಾರೆ.

ಜಪಾನೀ ಸಮ್ರಾಟನ ಸಾವು

ಜಪಾನಿನ 124ನೇ ಸಮ್ರಾಟ ಮರಣ ಹೊಂದಿದ್ದಾನೆ. 125 ನೇ ಸಮ್ರಾಟ 5 5 ವರ್ಷದ ಅಖಿಡೊ ಈ ವರ್ಷ ಗದ್ದುಗೆ ಏರಲಿದ್ದಾನೆ. ಆಧುನಿಕ ಜಪಾನಿನಲ್ಲಿ ಸಮ್ರಾ ಟನ ಪಾತ್ರದ ಬಗ್ಗೆ ಮತ್ತೆ ಚರ್ಚೆ ಆರಂಭವಾಗಿದೆ. ಎರಡನೇ ಮಹಾಯುದ್ಧದ ನಂತರ ಜಪಾನ್ ಅಂಗೀಕರಿಸಿದ ಪ್ರಜಾಪ್ರಭುತ್ವ ಸಂವಿಧಾನವನ್ನು ರದ್ದುಪಡಿಸುವ ಜಪಾನಿನ ಬಲಪಂಥೀಯ ಕನಸುಗಳೂ ಗರಿಗೆದರಿಕೊಳ್ಳುತ್ತಿವೆ.

ಸಮ್ರಾಟನನ್ನು ಜಪಾನೀಯರು ಹೆಸರು ಹಿಡಿದು ಕರೆಯುವುದಿಲ್ಲ. ಟೆನ್ನೊ ಎನ್ನುತ್ತಾರೆ. ಅಂದರೆ ಸ್ವರ್ಗದ ಪುತ್ರ. ಆತನನ್ನು ಟೀಕಿಸುವುದು ಹಾಗಿರಲಿ, ಆತನ ಬಗ್ಗೆ ಚರ್ಚಿಸುವುದೂ ಪಾಪ. ಜಪಾನಿನಲ್ಲಿ ಆತನ ಹೆಸರು ಚರ್ಚಿಸುತ್ತಿರುವವರು ಕಮ್ಯೂನಿಸ್ಟರು ಮಾತ್ರ.

ಸಮ್ರಾಟ ಹಿರೋಹಿಟೋ ರಕ್ತಕಾರಿ ಹಾಸಿಗೆ ಹಿಡಿದುದರಿಂದ ಆತನ ಆರೋಗ್ಯದ ಬಗ್ಗೆ ವರದಿಗಳೇ ವರದಿಗಳು. ಸಮ್ರಾಟ ಗುಣ ಮುಖವಾಗಲೆಂದು ಹಾರೈಸುವ ಸಂದರ್ಶಕರ ಹೆಸರು ದಾಖಲು ಮಾಡಿಕೊಳ್ಳಲು ಸ್ವಾಗತ ಮೇಜುಗಳನ್ನು ಇಡಲಾಗಿತ್ತು. ಜಪಾನಿನ ರಾಜಕೀಯದಲ್ಲಿ, ಪತ್ರಿಕಾ ರಂಗದಲ್ಲಿ ಇತಿಹಾಸದ ಸಾಮ್ರಾಜ್ಯಶಾಹೀ ದೃಷ್ಟಿಕೋನ ಎಷ್ಟು ಬೇರೂರಿದೆ ಎಂಬುದನ್ನು ಇದು ತೋರಿಸುತ್ತದೆ ಎಂದು ಜಪಾನೀ ಕಮ್ಯೂನಿಸ್ಟ್ ಪಕ್ಷ ಹೇಳಿದೆ.

ಇದು ಅತ್ಯಾಧುನಿಕ ತಂತ್ರಜ್ಞಾನ ಅದ್ಭುತಗಳ ಜಪಾನಿನ ಇನ್ನೊಂದು ಮುಖ.

ಸಮ್ರಾಟ ಹಿರೋಹಿಟೋನ ಆರು ದಶಕಗಳಿಗೂ ಮೀರಿದ ಅವಧಿಯ ಅತ್ಯಂತ ಗಂಭೀರ ಘಟನೆಯೆಂದರೆ ಜಪಾನೀ ಮಿಲಿಟರಿ ಶಾಹಿ. ಏಶ್ಯಾದ ನೆರೆಕರೆಯ ದೇಶಗಳ ಮೇಲೆ ಅತ್ಯಂತ ಅಮಾನುಷ ಆಕ್ರಮಣಗಳನ್ನು ನಡೆಸಿದ 'ಕೀರ್ತಿ' ಈ ಸಮ್ರಾಟನದ್ದು. ಅದೇ ರೀತಿ ಆಂತರಿಕ ಮಾನವ ಹಕ್ಕುಗಳ ಬಗ್ಗೆ ಉಲ್ಲಂಘನೆಯಲ್ಲೂ. ದೇಶದ ದೊಡ್ಡ ಅಪಮಾನದಲ್ಲೂ.

ಆಗಸ್ಟ್ 15 , 1945 ರಂದು ತಮ್ಮ ಸ್ವರ್ಗದ ಪುತ್ರನ ಬಾಯಿಂದ ಜಪಾನಿನ ಶರಣಾಗತಿ (ಎರಡನೇ ವಿಶ್ವಯುದ್ಧದಲ್ಲಿ)ಯ ಘೋಷಣೆ ಕೇಳಿ ಬಹುಪಾಲು ಜಪಾನೀಯರು ಆವಾಕ್ಕಾದರು.

ಯುದ್ಧನಂತರದ ಜಪಾನ್ ಹೊಸ ಸಂವಿಧಾನ ಅಂಗೀಕರಿಸಿತು. ಇದರಲ್ಲಿ ಜನತೆಯ ಸಾರ್ವಭೌಮತ್ವವನ್ನು ಘೋಷಿಸಲಾಯ್ತು. ಈ ಸಂವಿಧಾನ ಸಮ್ರಾಟನ ಅಧಿಕಾರಗಳನ್ನು ತೀವ್ರವಾಗಿ ಮಿತಿಗೊಳಿಸಿತು. ಆದರೆ ಆತನನ್ನು ಒಂದು ಚಿಹ್ನೆಯಾಗಿ ಉಳಿಸಲು ನಿರ್ಧರಿಸಿತು. ಇದರ ಉದ್ದೇಶ ಜನತೆಯ ಮೇಲೆ ಗುತ್ತೇದಾರಿ ಬಂಡವಾಳ ಶಾಹಿಯ ರಾಜಕಿಯ ಮತ್ತು ಸೈದ್ಧಾಂತಿಕ ಆಳ್ವಿಕೆಯನ್ನು ಕಾಪಾಡಿಕೊಳ್ಳುವುದಷ್ಟೆ ಎಂದು ಜಪಾನೀ ಕಮ್ಯೂನಿಸ್ಟ್ ಪಕ್ಷದ ವಿಶ್ಲೇಷಣೆ ಹೇಳುತ್ತದೆ. ಹಿರೋಹಿಟೋನ ಸಮ್ರಾಟತ್ವದಲ್ಲಿ ಹಲವು ಬಾರಿ ಪ್ರಜಾಪ್ರಭುತ್ವ ಸಂವಿಧಾನದ ಮೂಲಭೂತ ಅಂಶಗಳ ಉಲ್ಲಂಘನೆ ಮಾಡಿದೆ. ಸಮ್ರಾಟನೇ ಕೆಲವು ಬಾರಿ ತನ್ನ ಮಿತಿಮೀರಿ ಅಮೆರಿಕನ್ ಸಾಮ್ರಾಜ್ಯಶಾಹಿಗಳ ಪರವಾಗಿ ಮಾತಾಡಿದ್ದ. ಜಪಾನಿನ ಬಲಪಂಥೀಯರಿಗೆ ಇದು ಅನುಕೂಲವಾಗಿತ್ತು.

ಸಂವಿಧಾನಾತ್ಮಕವಾಗಿ ರೂಪಿಸಲ್ಪಟ್ಟ "ಜನತೆಯ ಸಾರ್ವಭೌಮತ್ವ"ದ ನೀತಿಯ ರಕ್ಷಣೆಗಾಗಿ ದೃಢವಾಗಿ ನಿಲ್ಲಬೇಕು, ಮಹಾಯುದ್ಧದ ಮೊದಲ}ನೆ ಕಹಿ ಅನು ಭವಗಳ ಪುನರಾವರ್ತನೆಯಾಗದಂತೆ ನೋಡಿಕೊಳ್ಳಬೇಕು ಎಂದು ಜಪಾನ್ ಕಮ್ಯೂನಿಸ್ಟ್ ಪಕ್ಷ ಜನತೆಗೆ ಕರೆ ನೀಡಿದೆ.

ಜಮ್ಮು-ಕಾಶ್ಮೀರದಲ್ಲಿ ಗಂಭೀರ ಪರಿಸ್ಥಿತಿ

ಜನವರಿ 13 ಮತ್ತು ಜನವರಿ 26ರಂದು ಜಮ್ಮು-ಕಾಶ್ಮೀರದಲ್ಲಿ ನಡೆದ ಘಟನೆಗಳು ರಾಜ್ಯದಲ್ಲಿ ಕೋಮು ಸೌಹಾರ್ದತೆಗೆ ಮತ್ತು ದೇಶದ ಐಕ್ಯತೆಗೆ ಗಂಭೀರ ಅಪಾಯವೊಡ್ಡಿವೆ.

ಜನವರಿ 13ರಂದು ಜಮ್ಮು-ಕಾಶ್ಮೀರದಲ್ಲಿ ಮೊತ್ತ ಮೊದಲ ಬಾರಿಗೆ ಹಿಂದೂ-ಸಿಖ್ಖ್ ಕೋಮು ಗಲಭೆ ನಡೆದವು. ಗುರುಗೋವಿಂದಸಿಂಗ್ ಜನ್ಮ ದಿನೋತ್ಸವ ಸಂದರ್ಭದಲ್ಲಿ ಇದು ನಡೆಯಿತು. ಲೂಟಿ, ಆಸ್ತಿ ನಾಶ ಹಾಗೂ ಮುಗ್ಧ ಜನಗಳ ಕೊಲೆ ನಡೆಯಿತು.

ಜನವರಿ 26ರಂದು ಜಮ್ಮು ಕಣಿವೆಯಲ್ಲಿ ಪ್ರತ್ಯೇಕತಾವಾದಿ ಮತ್ತು ಛಿದ್ರಕಾರೀ ಶಕ್ತಿಗಳು ಸಂಪೂರ್ಣ ಹರತಾಳ ನಡೆಸಿದರು. ಪೊಲೀಸರೊಡನೆ ಘರ್ಷಣೆ ನಡೆಸಿದರು.

ಇವೆರಡೂ ಆಕಸ್ಮಿಕ ಘಟನೆಗಳೇನಲ್ಲ. ಬಹಳ ದಿನಗಳಿಂದ ಸಿಖ್ಖ್ ಉಗ್ರಗಾಮಿಗಳು ಈ ರಾಜ್ಯವನ್ನು ಪಾಕಿಸ್ತಾನಕ್ಕೆ ಹೋಗಿ ಬರಲು ಒಂದು ನೆಲೆಯಾಗಿ ಬಳಸುತ್ತಿದ್ದುದು ಕೇಂದ್ರ ಸರ್ಕಾರಕ್ಕೂ ಗೊತ್ತಿದೆ. ರಾಜ್ಯ ಸರ್ಕಾರಕ್ಕೂ ಗೊತ್ತಿದೆ.

ಈ ಬಾರಿಯ ಗುರುಗೋವಿಂದ ಸಿಂಗ್ ಜನ್ಮದಿನೋತ್ಸವ ಸತ್ವಂತ್‌ಸಿಂಗ್ ಹಾಗೂ ಕೇಹರ್‌ಸಿಂಗ್‌ರನ್ನು ಗಲ್ಲಿಗೇರಿಸಿದ ಕೆಲವೇ ದಿನಗಳಲ್ಲಿ ಬಂದಿತ್ತು. ಜನ್ಮ ದಿನೋತ್ಸವದ ಮೆರವಣಿಗೆಯಲ್ಲಿ ಕೆಲವು ಯುವಕರು ಉದ್ರೇಕಕಾರಿ ಘೋಷಣೆ ಕೂಗಿದರು. ಅತ್ತ ಮೆರವಣಿಗೆಯ ಮೇಲೆ ಒಂದೆಡೆ ಕಲ್ಲು, ಬಿಸಿನೀರು ಬಾಟಲುಗಳ ಸುರಿಮಳೆಯಾಯಿತು. ತಕ್ಷಣ ಲೂಟಿ, ಬೆಂಕಿ ಎರಡೂ ಕಡೆಯಿಂದ ವ್ಯಾಪಕ ಪ್ರಮಾಣದಲ್ಲಿ ನಡೆಯಿತು. ಪೊಲೀಸರು ಹಾಗೂ ಆಡಳಿತ ಸಂಪೂರ್ಣವಾಗಿ ಕಕ್ಕಾಬಿಕ್ಕಿಯಾಗಿದ್ದರು. ಮೂಕ ಪ್ರೇಕ್ಷಕರಾಗಿದ್ದರು. ಲೂಟಿಗಾರರು ಹೆಂಗಸರು, ಮಕ್ಕಳನ್ನು ಬಿಡಲಿಲ್ಲ. ಅಧಿಕೃತವಾಗಿ 14ಮಂದಿ ಕೊಲೆಯಾದರು. ಎಲ್ಲರೂ ಸಿಖ್ಖರೇ. ಮೆರವಣಿಗೆ ಮೇಲೆ ಹಲ್ಲೆ ನಡೆಸಿದ್ದವರು ಶಿವಸೇನೆ ನೇತೃತ್ವದ ಹಿಂದೂ ಮೂಲಭೂತವಾದಿಗಳು. ಶಿವಸೇನೆ ಇತ್ತೀಚೆಗೆ ಜಮ್ಮುವಿನಲ್ಲಿ ಸಕ್ರಿಯಗೊಳ್ಳುತ್ತಿದೆ. ಕಾಂಗ್ರೆಸ್(ಐ) ಅದನ್ನು ತನ್ನ ಚುನಾವಣಾ ಉದ್ದೇಶಕ್ಕೆ ಬಳಸಿಕೊಳುತ್ತಾ ಬಂದಿದೆ. ಒಟ್ಟಿನಲ್ಲಿ ಪಂಜಾಬ್ ಪರಿಸ್ಥಿತಿಯ ಪುನರಾವರ್ತನೆಯಾಗುತ್ತಿದೆ ಜಮ್ಮು-ಕಾಶ್ಮೀರದಲ್ಲಿ.

ನ್ಯಾಷನಲ್ ಕಾನ್ಫರೆನ್ಸ್ ಪಕ್ಷದಲ್ಲಿ ಪಕ್ಷಾಂತರ ಯೋಜಿಸಿ ಕಾಂಗ್ರೆಸ್(ಐ) ಮೂಲಭೂತವಾದಿಗಳಿಗೆ ಜಮ್ಮು-ಕಾಶ್ಮೀರದಲ್ಲಿ ದೊಡ್ಡ ಅವಕಾಶ ಒದಗಿಸಿಕೊಟ್ಟಿತು. ಈ ಅವಧಿಯಲ್ಲೇ ಕೋಮುವಾದಿಗಳು ದೊಡ್ಡ ಶಕ್ತಿಯಾಗಿ ಬೆಳೆದರು.

ನ್ಯಾಶನಲ್ ಕಾನ್ಫರೆನ್ಸ್ ಅಥವಾ ಕಾಂಗ್ರೆಸ್(ಐ) ತಮ್ಮ ಅಂತಃ ಕಲಹಗಳ ನಡುವೆ ಈ ಅಪಾಯದ ಬಗ್ಗೆ ಗಮನಹರಿಸುತ್ತಿಲ್ಲ. ಆದ್ದರಿಂದ ಎಲ್ಲಾ ಪ್ರಜಾಪ್ರಭುತ್ವವಾದಿ ಮತ್ತು ದೇಶ ಪ್ರೇಮೀ ಶಕ್ತಿಗಳು ಒಂದಾಗಿ ಈ ಸವಾಲನ್ನು ಸ್ವೀಕರಿಸಿ ಮಹಾರಾಜರುಗಳನ್ನು ಬ್ರಿಟಿಷ್ ಸಾಮ್ರಾಜ್ಯಶಾಹಿಗಳನ್ನು ಒಟ್ಟಿಗೇ ಎದುರಿಸಿದ ರಾಜ್ಯದ ಪರಂಪರೆ ಮುಂದುವರೆಸುವುದು ಅಗತ್ಯ ಎಂದು ಕಾ॥ ಹರ್ಕಿಶನ್‌ಸಿಂಗ್ ಹೇಳಿದ್ದಾರೆ.

ತ್ರಿಪುರಾ ರಾಜ್ಯದಲ್ಲಿ

ಸಿ.ಪಿ.ಐ.(ಎಂ)ನ ತ್ರಿಪುರಾ ರಾಜ್ಯ ಸಮಿತಿ ರಾಜ್ಯದಲ್ಲಿ ವಿಸರ್ಜನೆಗೊಂಡ ಪಂಚಾಯತುಗಳಿಗೆ ತಕ್ಷಣ ಚುನಾವಣೆ ನಡೆಸಬೇಕೆಂದು ಸಹಿಸಂಗ್ರಹ ಚಳುವಳಿ ನಡೆಸಲು ನಿರ್ಧರಿಸಿದೆ. 1 ಲಕ್ಷ 5 0ಸಾವಿರ ಜನರ ಸಹಿ ಸಂಗ್ರಹಿಸಿ ಮಾರ್ಚ್ 15 ರೊಳಗೆ ತ್ರಿಪುರಾ ವಿಧಾನ ಸಭೆಯ ಅರ್ಜಿ ಸಮಿತಿಗೆ ಸಲ್ಲಿಸಲಾಗುವುದು ಎಡರಂಗದ ಇತರ ಘಟಕಗಳಿಗೂ ಈ ಚಳುವಳಿ ಸೇರಲು ಮನವಿ ಮಾಡಿಕೊಳ್ಳಲಾಗುವುದು.

ಫೆಬ್ರವರಿ 20ರಂದು ತ್ರಿಪುರಾದಲ್ಲಿ ಸಫ್ದರ್ ಹಶ್ಮಿ ದಿವಾಚರಣೆ ನಡೆಸಲು ರಾಜ್ಯ ಸಮಿತಿ ನಿರ್ಧರಿಸಿತು. ಫೆಬ್ರವರಿ 6 ಸಮಿತಿ ಹಾಗೂ ಇತರ ಹಲವು ಸಾಂಸ್ಕೃತಿಕ ಸಂಘಟನೆಗಳೊಂದಿಗೆ ಇದನ್ನು ಆಚರಿಸಲಾಗುವುದು. ಅಗರ್ತಲಾದಲ್ಲಿ ಫೆಬ್ರವರಿ ಮಧ್ಯ ಭಾಗದಲ್ಲಿ ವ್ಯವಸ್ಥೆ ಮಾಡಲಿರುವ ಸಾಂಸ್ಕೃತಿಕ ಉತ್ಸವಗಳಲ್ಲಿ ಭಾಗವಹಿಸಲು ದೆಹಲಿಯ 'ಜನನಾಟ್ಯಮಂಚ್' ತಂಡವನ್ನು ಆಮಂತ್ರಿಸಲಾಗಿದೆ.

ತ್ರಿಪುರಾದಲ್ಲಿ ಕಾಂಗ್ರೆಸ್(ಐ)-ಟಿ.ಯು.ಜೆ.ಎಸ್.ನ ಸಮಿಶ್ರ ಸರ್ಕಾರದ ರಚನೆಯ ನಂತರದ ಅರೆ-ಫ್ಯಾಸಿಸ್ಟ್ ಭಯೋತ್ಪಾದನೆಯ ವಿರುದ್ಧ ವಿರೋಧೀ ಎಂ.ಪಿಗಳು, ಎಂ.ಎಲ್.ಎ.ಗಳ ಒಂದು ನಿಯೋಗ ಬಜೆಟ್ ಅಧಿವೇಶನದ ಸಮಯದಲ್ಲಿ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡುವುದೆಂದೂ ತಿಳಿದು ಬಂದಿದೆ.

ಅನಿರ್ದಿಷ್ಟ ಕಾಲದ ಮುಷ್ಕರಕ್ಕೆ ಸಾರ್ವಜನಿಕ ವಲಯದ ಕಾರ್ಮಿಕರ ಸಿದ್ಧತೆ

ಫೆಬ್ರವರಿಯಲ್ಲಿ ಕೆಲವು ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿನ ವೇತನ ಮಾತುಕತೆಗಳಲ್ಲಿ ತೃಪ್ತಿಕರ ಇತ್ಯರ್ಥ ಮೂಡಿಬರದಿದ್ದರೆ ಎಲ್ಲಾ ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ ಕಾರ್ಮಿಕರು ಅನಿರ್ದಿಷ್ಟ ಕಾಲದ ಮುಷ್ಕರ ಹೂಡಲು ನಿರ್ಧರಿಸಿದ್ದಾರೆ.

. ಜನವರಿ 30ರಂದು ನವದೆಹಲಿಯಲ್ಲಿ ಸೇರಿದ್ದ ಸಾರ್ವಜನಿಕ ವಲಯದ ಕಾರ್ಮಿಕ ಸಂಘಗಳ ಸಮಿತಿ (ಸಿ.ಪಿ.ಎಸ್.ಟಿ.ಯು.)ಯ ವಿಸ್ತೃತ ಸಭೆ ತನ್ನ ಈ ನಿಲುವನ್ನು ಪುನರುಚ್ಚರಿಸಿ ಈ ಮುಷ್ಕರಕ್ಕೆ ಧುಮುಕಲು ಸಿದ್ಧರಾಗಬೇಕೆಂದು ಕಾರ್ಮಿಕರಿಗೆ ಕರೆ ಕೊಡಲು ನಿರ್ಧರಿಸಿತು.

ದೇಶದ ಎಲ್ಲೆಡೆಗಳಿಂದಲೂ ಬಂದಿದ್ದ 112 ಪ್ರತಿನಿಧಿಗಳು ಭಾಗವಹಿಸಿದ್ದ ಈ ವಿಸ್ತೃತ ಸಭೆ ವಿವಿಧ ಉದ್ದಿಮೆಗಳಲ್ಲಿ ವೇತನ ಮಾತುಕತೆಗಳಲ್ಲಿನ ಅನಗತ್ಯ ವಿಳಂಬದ ಪರಿಸ್ಥಿತಿಯನ್ನು ವಿಶ್ಲೇಷಿಸಿ ಸರ್ಕಾರ ಬಿ.ಪಿ.ಇ. ಮೂಲಕ ಹೇರಿದ ಅನುಚಿತ ಮಿತಿಗಳಿಂದಾಗಿ ವೇತನ ಇತ್ಯರ್ಥಗಳಾಗುತ್ತಿಲ್ಲ ಎಂದಿದೆ. ಎಲ್ಲಾ ಇತ್ಯರ್ಥಗಳೂ ಪೂರ್ವಾನ್ವಯವಾಗ ಬೇಕು ಎಂದೂ ಸಿ.ಪಿ.ಎಸ್.ಟಿ.ಯು. ಪುನರುಚ್ಚರಿಸಿದೆ.

ಸರ್ಕಾರ ನೇಮಿಸಿದ ತುಟ್ಟಿಭತ್ಯೆ ಕುರಿತಾದ ತ್ರಿಪಕ್ಷೀಯ ಸಮಿತಿಯ ಮುಂದೆ ಎಲ್ಲಾ ಹಂತಗಳಲ್ಲಿ ಶತ-ಪ್ರತಿಶತ ಬೆಲೆಯೇರಿಕೆ ಸರಿದೂಗಿಸುವ ತುಟ್ಟಿಭತ್ಯೆ ಪಾಯಿಂಟಿಗೆ ಕನಿಷ್ಠ ರೂ. 2-5 0ಯಂತೆ ನೀಡಬೇಕೆಂಬ ಬೇಡಿಕೆಯನ್ನು ಒತ್ತಾಯಿಸಲು ಕೂಡಾ ಸಭೆ ನಿರ್ಧರಿಸಿತು. ಇಲ್ಲಿ ಕೂಡಾ ಸರ್ಕಾರದ ನಿರ್ಲಕ್ಷ್ಯದಿಂದಾಗಿ ತ್ರಿಪಕ್ಷೀಯ ಸಮಿತಿ ಕೆಲಸ . ವಿಳಂಬಗೊಳ್ಳುತ್ತಿದೆ ಎಂದು ಸಿ.ಪಿ.ಎಸ್.ಟಿ.ಯು. ಹೇಳಿಕೆ ತಿಳಿಸಿದೆ.

1982ರ ಗ್ರಾಹಕ ಬೆಲೆ ಸೂಚ್ಯಂಕ ಸರಣಿಯನ್ನು ಕಾರ್ಮಿಕ ಸಂಘಗಳ ಆಕ್ಷೇಪಗಳನ್ನು ಗಂಭೀರವಾಗಿ ಪರಿಗಣಿಸದೆ ರಾಥ್ ಸಮಿತಿಅವಿರೋಧವಾಗಿ ತೋರಿಸಿಕೊಟ್ಟ ನ್ಯೂನ್ಯತೆಗಳನ್ನು ಸರಿಪಡಿಸದೆ ಏಕಪಕ್ಷೀಯವಾಗಿ ಆರಂಭಿಸುವುದನ್ನು ವಿರೋಧಿಸಿದ ಸಭೆ ಬೆಲೆ ಸೂಚ್ಯಂಕವನ್ನು ಕೃತಕವಾಗಿ ತಗ್ಗಿಸಿ ಕಾರ್ಮಿಕರಿಗೆ ನ್ಯಾಯಬದ್ಧ ತುಟ್ಟಿಭತ್ಯೆಯನ್ನು ವಂಚಿಸುವ ಈ ಸರ ಣಿಯ ವಿರುದ್ಧ ದೇಶಾದ್ಯಂತ ಹೋರಾಟ ಸಂಘಟಿಸಲು ನಿರ್ಧರಿಸಲಾಗಿದೆಯೆಂದು ಸಿ.ಪಿ.ಎಸ್.ಟಿ.ಯು. ಹೇಳಿಕೆ ತಿಳಿಸಿದೆ.

ಸಿ.ಐ.ಟಿ.ಯು.ನ ಎಂ.ಕೆ.ಪಂಧೆ, ಎ.ಐ.ಯು.ಟಿ.ಸಿ.ನ ಹೋಮಿದಾಜಿ, ಬಿ.ಎಂ.ಎಸ್.ನ ಓ.ಪಿ.ಅಘಿ, ಹೆಚ್.ಎಂ.ಎಸ್.ನ ರಾಜು ಸಮಂತ್‌ರಾಯ್, ಬೆಂಗಳೂರು ಜಿ.ಎಫ್.ನ ಮೈಕೆಲ್ ಫರ್ನಾಂಡೀಸ್ ಮತ್ತು ಹೈದರಾಬಾದ್ ; ಸಂಯೋಜಕ ಸಮಿತಿಯ ನರಸಿಂಹರೆಡ್ಡಿ ಜಂಟಿಯಾಗಿ ಹೇಳಿಕೆ ನೀಡಿದ್ದಾರೆ.

KRNW / BGS-312 MAG(2) PRB DECR 319-78-79

ಕೇರಳ ದಿನಾಚರಣೆ

(ಪುಟ 1ರಿಂದ)

ಚಟುವಟಿಕೆಗಳು ಎಷ್ಟೊಂದು ಅವಶ್ಯ ವ್ಯಕ್ತಿಗೊಳಿಯುತ್ತವೆಯೆಂದರೆ ಕೇರಳ ಸರ್ಕಾರ ಆಕೆಯನ್ನು ವಾಪಸು ಕರೆಸ ಬೇಕೆಂದು ಬಹಿರಂಗವಾಗಿ ಒತ್ತಾಯಿಸ ಬೇಕಾಗಿ ಬಂದಿದೆ. ಆಕೆಯ ವಿರುದ್ಧ ವಿಧಾನಸಭೆಯಲ್ಲಿ ಒಂದು ನಿಲುವಳಿ ಸೂಚನೆ ಮಂಡಿಸುವ ಅಭೂತಪೂರ್ವ ಘಟನೆ ನಡೆಯಬೇಕಾಗಿ ಬಂತು. ಇದಕ್ಕೆ ಕೇಂದ್ರ ಸರ್ಕಾರವೇ ಪೂರ್ಣ ಜವಾಬ್ದಾರಿ ಎಂದು ಇ.ಎಂ.ಎಸ್. ಹೇಳಿದ್ದಾರೆ.

ಆರ್ಥಿಕವಾಗಿಯೂ ಕೇಂದ್ರ ಸರ್ಕಾರ ತನ್ನ ಹತೋಟಿಯನ್ನು ಎಲ್.ಡಿ.ಎಫ್. ಸರ್ಕಾರದ ವಿರುದ್ಧ ಬಳಸಿಕೊಂಡು ಬಂದಿದೆ ಎಂಬುದನ್ನು ಇ.ಎಂ.ಎಸ್. ಈ ಲೇಖನದಲ್ಲಿ ಉದಾಹರಣೆ ಸಹಿತ ವಿವರಿಸಿದ್ದಾರೆ. ಎಲ್.ಡಿ.ಎಫ್. ಸರ್ಕಾರ ಹಣಕಾಸಿನ ಶಿಸ್ತು ಮುರಿದು ಓವರ್ ಡ್ರಾಫ್ಟ್ ತೆಗೆದುಕೊಳ್ಳುತ್ತಾ ಬಂದಿದೆ ಯೆಂದು ಆಪಾದಿಸಲಾಗಿದೆ. ಇದಕ್ಕೆ ಕಾರಣ ದುಂದುವೆಚ್ಚ ಎಂಬ ಭಾವನೆ ಮೂಡಿಸಲು ಕಾಂಗ್ರೆಸ್(ಐ) ಮುಖಂಡರು ಪ್ರಯತ್ನಿಸಿದ್ದಾರೆ. ಆದರೆ ನಿಜ ಸಂಗತಿ ಯೇನು?

ಎಲ್.ಡಿ.ಎಫ್. ಸರ್ಕಾರ ಅಧಿಕಾರ ವಹಿಸಿಕೊಂಡದ್ದು ಮಾರ್ಚ್ 1987ರಲ್ಲಿ. 1986-87ರ ಹಣಕಾಸು ವರ್ಷ 21.11 ಕೋಟಿ ರೂ.ಗಳ ಕೊರತೆಯೊಂದಿಗೆ ಅಂತ್ಯ ವಾಗಬೇಕಾಗಿತ್ತು. ಆದರೆ ರೂ. 15 02.5 3 ಕೋಟಿ ರೂ.ಗಳ ರೆವಿನ್ಯೂ ಆದಾಯಕ್ಕೆ ಬದಲಾಗಿ ಸರ್ಕಾರದ ಮೇಲಿನ ನಿವ್ವಳ ಹೊರೆ 2779 ಕೋಟಿ ರೂ.ಗಳು ಹಿಂದಿನ ವರ್ಷದ ಈ ಅಗಾಧ ಕೊರತೆಯನ್ನು ಎಲ್.ಡಿ.ಎಫ್. ಸರ್ಕಾರದ ಮೇಲೆ ಹೊರಿಸಲು ಸಾಧ್ಯವಿಲ್ಲವಷ್ಟೆ.

1987-88ರಲ್ಲಿ, ಅಂದರೆ ಎಲ್.ಡಿ.ಎಫ್. ಸರ್ಕಾರದ ಮೊದಲ ಹಣ ಕಾಸು ವರ್ಷದಲ್ಲಿ ಕೇಂದ್ರದಿಂದ ದೊರೆತ ಪಾಲು ಕೇವಲ 219 ಕೋಟಿ ರೂ.ಗಳು ಹಿಂದಿನ ಎರಡು ವರ್ಷಗಳಿಗಿಂತ ಅನು ಕ್ರಮವಾಗಿ 5 5 ಕೋಟಿ ಮತ್ತು 45 ಕೋಟಿ ರೂ. ಕಡಿತ! 1988-89ರಲ್ಲಿ ಕೇಂದ್ರ ದಿಂದ ಬರುವ ಪಾಲು 228 ಕೋಟಿ ರೂ. ಹಿಂದಿನ ಸರ್ಕಾರ ತಗೊಂಡ ಸಾಲದ ಬಡ್ಡಿ ಮತ್ತು ಭಾಗಶಃ ಮರು ಪಾವತಿಗೆ ಕೇರಳ ಸರ್ಕಾರ ತೆರಬೇಕಾದದ್ದು 260 ಕೋಟಿ ರೂ.

ಎಲ್.ಡಿ.ಎಫ್. ಸರ್ಕಾರದ ಅವಧಿ ಯಲ್ಲಿ ಬರಬೇಕಾಗಿದ್ದ ಯೋಜನಾ ನೆರ ವನ್ನು ಹಿಂದಿನ ಯು.ಡಿ.ಎಫ್. ಸರ್ಕಾರ ಮುಂಗಡವಾಗಿ ಪಡೆದು ಖರ್ಚು ಮಾಡಿತು. ಅದರ ಬಡ್ಡಿ, ಮರು ಪಾವತಿ ಮಾಡಬೇಕಾಗಿರುವುದು ಎಲ್.ಡಿ.ಎಫ್. ಸರ್ಕಾರ! ಇದಕ್ಕೆ ಎಲ್.ಡಿ.ಎಫ್.ನ 'ದುಂದುವೆಚ್ಚ' ಕಾರಣವಲ್ಲ ಎಂಬುದು ಸ್ಪಷ್ಟ. ಇನ್ನೂ ಹಲವು ರಾಜ್ಯಗಳೂ ಇದೇ ಸ್ಥಿತಿಯಲ್ಲಿವೆ.

ಕೇರಳದ ರಾಜಕೀಯದ ಚಿತ್ರ ಆರ್.ಎಸ್.ಎಸ್.- ಬಿ.ಜೆ.ಪಿ.ಯ ಚಟುವ ಟಿಕೆ ಗಮನಿಸದೆ ಪೂರ್ಣವಾಗುವುದಿಲ್ಲ. ರಾಷ್ಟ್ರೀಯ ಮಟ್ಟದಲ್ಲಿ ಕಾಂಗ್ರೆಸ್(ಐ)-ವಿರೋಧೀ ಐಕ್ಯತೆಯ ಪ್ರತಿಪಾದಕರೆನ್ನು ವಂತೆ ವರ್ತಿಸುವ ಈ ಶಕ್ತಿಗಳು ಕೇರಳ ದಲ್ಲಿ ಕಾಂಗ್ರೆಸ್ ನೇತೃತ್ವದ ಯು.ಡಿ.ಎಫ್. ಜತೆಗಿವೆ!

ಶ್ರೀಮತಿ ಸಿನ್ಹಾ ರಾಜ್ಯಪಾಲರಾಗಿ ಮುಂದುವರಿಯುವುದು ಮತ್ತು ಕೇಂದ್ರ ಸರ್ಕಾರದ ಹಣಕಾಸು ನೀತಿಯ ಮುಂದುವರಿಕೆ ಎಲ್.ಡಿ.ಎಫ್. ಆಳ್ವಿಕೆಯ ಕೇರಳದ ವಿರುದ್ಧ ತೋರುತ್ತಿರುವ ಬಹಿರಂಗ ಪಕ್ಷಪಾತ. ಇದು ಇತರ ವಿರೋಧಿ ಪಕ್ಷಗಳ ಆಳ್ವಿಕೆಯ ರಾಜ್ಯ ಗಳನ್ನು ತಟ್ಟುವ ಪ್ರಶ್ನೆಗಳು ಕೂಡಾ. ಆದ್ದರಿಂದ ಕೇರಳದ ಬಗ್ಗೆ ಕೇಂದ್ರ ಸರ್ಕಾರದ ನಿಲುವಿನ ವಿರುದ್ಧ ದನಿಯೆತ್ತ ಬೇಕೆಂದು ಇತರ ವಿರೋಧ ಪಕ್ಷಗಳನ್ನು ಕೇಳಲು ಪಾಲಿಟ್‌ಬ್ಯೂರೋ ನಿರ್ಧರಿಸಿದೆ ಯೆಂದು ಕಾ|| ಇ.ಎಂ.ಎಸ್. ಹೇಳಿ ದ್ದಾರೆ.

"ಪ್ರಜಾವಾಣಿ" ಸಮೀಕ್ಷೆಯಲ್ಲಿ ಸಿ.ಪಿ.ಐ.(ಎಂ) ಜನಪ್ರಿಯ

18 ವರ್ಷಕ್ಕೆ ಮತದಾನದ ಹಕ್ಕು ನೀಡುತ್ತಿರುವ ಸಂದರ್ಭಕ್ಕಾಗಿ 'ಪ್ರಜಾವಾಣಿ' ಇಡೀ ರಾಜ್ಯದಲ್ಲಿ ಹಲವು ಯುವಕ, ಯುವತಿಯರನ್ನು ಸಂದರ್ಶಿಸಿ ಸಮೀಕ್ಷೆ ನಡೆಸಿತು.

ಈ ಸಮೀಕ್ಷೆಯಲ್ಲಿ ಸಿ.ಪಿ.ಐ.(ಎಂ) ಜಯಭೇರಿ ಭಾರಿಸಿದೆ. "18 ವರ್ಷಕ್ಕೆ ಮತದಾನ ನೀಡಿದರೆ ನಮ್ಮ ಆಯ್ಕೆ ಸಿ.ಪಿ.ಐ.(ಎಂ)" ಎಂದು ಹಲವರು ಪ್ರತಿಪಾದಿಸಿದ್ದಾರೆ.

"ನನ್ನ ಮತ ಕಮ್ಯೂನಿಸ್ಟ್ ಪಕ್ಷಕ್ಕೆ. ನನಗೆ ಬೇರೆ ಪರ್ಯಾಯವಿಲ್ಲ. ಕಾಂಗ್ರೆಸ್‌ನವರು ಕೆಟ್ಟು ಹೋಗಿದ್ದಾರೆ ಜನತಾದವರೂ ಸಾಚಾ ಅಲ್ಲ. ಹಾಗಿರುವಾಗ ನಾನು ಸಿ.ಪಿ.ಎಂ.ಗೆ ಮತ ಹಾಕುವೆ" ಎಂದು ಎಂ.ಇ.ಎಸ್. ಕಾಲೇಜಿನ ಪದವೀಧರೆ ಕಾಂಚನ್ ಹೇಳುತ್ತಾರೆ.

ಇದೇ ಅಭಿಪ್ರಾಯ ಹಲವರದು. ಸಂವಹನ ವಿಭಾಗದ ಫುಫುಲ್ಲಾ, ಶರ್ಮಿಲಾ, ಅಮೀನಾ, ಆರತಿ ಸಹ "ನಾನು ಜನತಾಕ್ಕಂತೂ ಮತ ಹಾಕುವುದಿಲ್ಲ" ಎಂದರು "ಕಾಂಗ್ರೆಸ್ಸಿಗೆ ಹಾಕುತ್ತೀರಾ" ಎಂದು ಕೇಳಿದಾಗ "ಛಿ ! ಛಿ ! ಅದಕ್ಕೂ ಅಲ್ಲ ಕಮ್ಯೂನಿಸ್ಟ್ ಪಕ್ಷಕ್ಕೆ" ಎಂದಿದ್ದಾರೆ.

ಅವರ ಸಹಪಾಠಿಗಳೂ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ಎಂದು ಸಮೀಕ್ಷೆ ತಿಳಿಸಿದೆ. "ನಮ್ಮ ಮತ ಏನಿದ್ದರೂ ಎಡಪಂಥೀಯ ಪಕ್ಷಕ್ಕೆ ಅವರೇ ಏನಾದರೂ ಕೊಂಚ ಒಳ್ಳೆಯದು ಮಾಡಿಯಾರು" ಎನ್ನುವುದು ಅವರ ಅಭಿಪ್ರಾಯ.

ಬಿ.ಟಿ.ಎಂ. ಬಡಾವಣೆಯ ತರುಣ ವರ್ತಕ ಗಂಗಾರೆಡ್ಡಿ "ಸ್ವಚ್ಛ ರಾಜಕಾರಣಕ್ಕೆ ತರುಣರಲ್ಲಿ ಇರುವ ಒಲವು ಕಮ್ಯೂನಿಸ್ಟ್ ಪಕ್ಷಕ್ಕೆ ಮತ ಹಾಕಲು ಬಯಸುತ್ತದೆ" ಎಂದಿದ್ದಾರೆ.

'18 ವರ್ಷಕ್ಕೆ ಮತದಾನ ಬೇಡ' ಎಂದ ಕಾಂಗ್ರೆನ ವೀರೇಂದ್ರಪಾಟೀಲರ ಅಭಿಪ್ರಾಯವನ್ನು ಹಲವರು ಸಾರಾಸಗಟಾಗಿ ತಳ್ಳಿ ಹಾಕಿದ್ದಾರೆ.

"ಸಾಮಾಜಿಕ ಅನಿಷ್ಟಗಳ ವಿರುದ್ಧ ನಾನು ಬಹಿರಂಗ ವೇದಿಕೆ ಮೇಲೆ ನಿಂತು ಅಭಿಪ್ರಾಯ ಹೇಳಲು ನನ್ನ ತಾಯಿ ವಿರೋಧಿಸಬಹುದು. ಆದರೆ ಅಂಥ ಅನಿಷ್ಟಗಳನ್ನು ಪೋಷಿಸಿಕೊಂಡು ಬರುತ್ತಿರುವ ಸರ್ಕಾರದ ವಿರುದ್ಧ ಮತ ಹಾಕಿ ನನ್ನ ಪ್ರತಿಭಟನೆ ವ್ಯಕ್ತಪಡಿಸುವುದಕ್ಕೆ ವಿರೋಧ ಬರುವ ಸಾಧ್ಯತೆಯಿಲ್ಲ ಮತ್ತು ಅದು ಹೆಚ್ಚು ಅರ್ಥಪೂರ್ಣ" ಎಂದು ವಿದ್ಯಾರ್ಥಿನಿ ವತ್ಸಲಾ ಹೇಳಿ 18 ವರ್ಷಕ್ಕೆ ಮತದಾನದ ಹಕ್ಕು ನೀಡುವುದರಿಂದ ಉಂಟಾಗಬಹುದಾದ ಬದಲಾವಣೆಯ ಮಹತ್ವವನ್ನು ಸಾರಿದ್ದಾರೆ.

ನಮಗೊಂದು ಸವಾಲು

(1ನೇ ಪುಟದಿಂದ)

ಸಮಾವೇಶವನ್ನು ತುಮಕೂರಿನ ಕಾಳಿದಾಸ ಕಾಲೇಜು ಪ್ರಾಧ್ಯಾಪಕರಾದ ಪ್ರೊ|| ಯತಿರಾಜು ಉದ್ಘಾಟಿಸಿದರು. ಅವರು ತಮ್ಮ ಉದ್ಘಾಟನಾ ಭಾಷಣದಲ್ಲಿ ವಿದ್ಯಾರ್ಥಿಗಳು ಇಂದು ಎದುರಿಸುತ್ತಿ ರುವ ಸಮಸ್ಯೆಗಳಿಗೂ ರಾಜೀವ್‌ಗಾಂಧಿ ಸರ್ಕಾರ ಜಾರಿಗೆ ತರುತ್ತಿರುವ ನೂತನ ಶಿಕ್ಷಣ ನೀತಿ, ನೂತನ ಆರ್ಥಿಕ ನೀತಿಗೂ ಇರುವ ಸಂಬಂಧವನ್ನು ವಿವರಿಸಿದರು. ಕರ್ನಾಟಕ ಶಿಕ್ಷಣ ರಂಗದಲ್ಲಿ ಮಹಾ ಮಾರಿಯಂತೆ ಹಬ್ಬುತ್ತಿರುವ ಖಾಸಗೀಕರಣ ವ್ಯಾಪಾರೀಕರಣದತ್ತ ಗಮನ ಸೆಳೆದರು. ರಾಜ್ಯದ ವಿದ್ಯಾ ಕ್ಷೇತ್ರದಲ್ಲಿ ಮತೀಯ ಶಕ್ತಿಗಳು ಬಲಗೊಳ್ಳುತ್ತಿದ್ದು ಭಾಷಾ-ಮತೀಯ ಶಕ್ತಿಗಳ ಪರವಾದ ಪ್ರತಿಗಾಮಿ ವಿದ್ಯಾರ್ಥಿ ಸಂಘಟನೆಗಳು ವಿದ್ಯಾರ್ಥಿ ಐಕ್ಯತೆ ವಿರುದ್ಧ ನಡೆಸುತ್ತಿರುವ ಹಲ್ಲೆಯ ವಿರುದ್ಧ ಹೋರಾಟ ಎಸ್.ಎಫ್.ಐ.ಯ ತತ್‌ಕ್ಷಣದ ಕರ್ತವ್ಯ ಗಳಲ್ಲೊಂದು ಎಂದು ತಿಳಿಸಿದರು.

ವಿಶೇಷ ಅತಿಥಿಯಾಗಿ ಆಗಮಿಸಿದ್ದ ತುಮಕೂರು ಸರ್ಕಾರಿ ಕಾಲೇಜಿನ ಪ್ರಾಧ್ಯಾಪಕ ಪ್ರೊ|| ಸಣ್ಣಗುಡ್ಡಯ್ಯ ವಿದ್ಯಾರ್ಥಿಗಳು ತಾವು ಆರಿಸಿದ ಕ್ಷೇತ್ರಗಳಲ್ಲಿ ಉತ್ಕೃಷ್ಟತೆ ಸಾಧಿಸುವ ಅಗತ್ಯದ ಬಗ್ಗೆ ಒತ್ತಿ ಹೇಳಿದರು. ಸಂಘಟನೆ ಬೆಳೆಯಬೇಕಾದರೆ ಕಾರ್ಯಕರ್ತರು ವಿದ್ಯಾರ್ಥಿ ಸಮೂಹವನ್ನು ಗೆಲ್ಲೋದಕ್ಕೆ, ವಿಶ್ವಾಸ ಗಳಿಸುವುದಕ್ಕೆ ನಾಯಕತ್ವ ಬೆಳೆಸುವ ರೀತಿಯನ್ನು ವಿವರಿಸಿದರು.

ಅಖಿಲ ಭಾರತ ಎಸ್.ಎಫ್.ಐ. ಅಧ್ಯಕ್ಷ ಕಾ|| ವಿಜಯರಾಘವನ್ ಮಾತಾ ಡುತ್ತಾ 6ನೇ ಮತ್ತು ಬರಲಿರುವ 7ನೇ ಸಮ್ಮೇಳನಗಳ ನಡುವೆ ರಾಜೀವ್‌ಗಾಂಧಿ ಯವರ ನೀತಿಗಳು ದೇಶದ ಮತ್ತು ವಿದ್ಯಾರ್ಥಿಗಳ ಮೇಲೆ ಬೀರಿರುವ ಪರಿಣಾಮಗಳನ್ನು ವಿವರಿಸಿದರು. ಈ ಅವಧಿಯಲ್ಲಿ ರಾಜೀವ್‌ಗಾಂಧಿಯವರ ಜನ ವಿರೋಧಿ ನೀತಿಗಳ ವಿರುದ್ಧ ಗರಿಗೆದರಿ ಗಟ್ಟಿಗೊಳ್ಳುತ್ತಿರುವ ಚಳುವಳಿಯ ಆರಂಭ ಎಸ್.ಎಫ್.ಐ. 1987 ಸೆಪ್ಟೆಂಬರ್‌ನಲ್ಲಿ ಸಂಘಟಿಸಿದ ವಿದ್ಯಾರ್ಥಿ-ಯುವಜನ ಸಂಘಟನೆಗಳ ರ್‍ಯಾಲಿ "ರಾಜೀವ್‌ಗಾಂಧಿ ರಾಜೀನಾಮೆ'ಗೆ ಮಾಡಿದ ಒತ್ತಾಯದ ಮೂಲಕ ಆಯಿತೆಂದರು. 1989 ಚುನಾವಣೆಯಲ್ಲಿ ರಾಜೀವ್ ಸರ್ಕಾರವನ್ನುರುಳಿಸಿ ಸರ್ಕಾರ ರಚಿಸಬಲ್ಲ, ಎಡ ಪ್ರಜಾಸತ್ತಾತ್ಮಕ ಜಾತ್ಯಾತೀತ ಬದಲಿಯನ್ನು ಕಟ್ಟುವ ರಾಜಕೀಯ ಕರ್ತವ್ಯ ವಿದ್ಯಾರ್ಥಿ ಸಮು ದಾಯದ ಮುಂದೆ ಇದೆ ಎಂದರು.

ಚೆನ್ನಪ್ಪವಾಲಿ ನಿಧನ

ಬ್ರಿಟಿಷರ ವಿರುದ್ಧ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯ ಭಾಗವಹಿಸಿ "ಕ್ರಾಂತಿವೀರ"ರೆಂದು ಜನರಿಂದ ಹೇಳಿಸಿಕೊಂಡ ಚೆನ್ನಪ್ಪವಾಲಿ ಯವರು ತಮ್ಮ 92ನೆಯ ವಯಸ್ಸಿ ನಲ್ಲಿ ನಿಧನ ಹೊಂದಿದ್ದಾರೆ. ಕಮ್ಯೂನಿಸ್ಟ್ ಪಕ್ಷದ ಜೊತೆ ಸೇರಿ ಇವರು ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಮಂಚೂಣಿಯಲ್ಲಿ ದ್ದರು. ಸ್ವಾತಂತ್ರ್ಯಕ್ಕಾಗಿ ಹೋರಾಡುವಾ ಗಲೂ ಏಕೀಕರಣ ಚಳುವಳಿಯ ಲ್ಲಿಯೂ ಇವರು ಹಲವಾರು ವರ್ಷ ಜೈಲುವಾಸ ಅನುಭವಿಸಿದರು. ಇವರು ಧೀರ ಹೋರಾಟಗಾರರು, ಉತ್ತಮ ಭಾಷಣಗಾರರಾಗಿದ್ದರು. ರಾಜ್ಯ ವಿಧಾನ ಸಭೆ ಸದಸ್ಯರಾಗಿ ಆಯ್ಕೆಯಾಗಿದ್ದರು. ಕಮ್ಯುನಿಸ್ಟ್ ಪಕ್ಷ ಸಂಘಟಿಸುತ್ತಿದ್ದ ರೈತ-ಕಾರ್ಮಿಕರ ಚಳುವಳಿಗೂ, ಯುವ ಜನರ ಹೋರಾಟಗಳಿಗೂ ಇವರು ತನ್ನಯದಿಂದ ಸಹಾಯ ಸಹಕಾರ ನೀಡುತ್ತಿದ್ದರು. ಇವರ ನಿಧನಕ್ಕೆ ಸಿ.ಪಿ.ಐ.(ಎಂ) ರಾಜ್ಯ ಸಮಿತಿ ಅಪಾರ ಸಂತಾಪ ಸೂಚಿಸುತ್ತದೆ.

ಲೆಕ್ಕಪತ್ರ ವರದಿ

ಪುಟ 1ರಿಂದ

ಬೆಲೆಯನ್ನು ವಿಮರ್ಶಿಸುವ ಅವಕಾಶ ಕಲ್ಪಿಸಿರಲಿಲ್ಲ. 1982ರಲ್ಲಿ ದರ ಹೆಚ್ಚಿಸ ಬೇಕೆಂದು ನಿರ್ಧಾರ ಕೈಗೊಂಡಿದ್ದರೂ ಕೂಡ ಅದು ಜಾರಿಯಾಗಲಿಲ್ಲ ಮಾತ್ರ ವಲ್ಲ 1985 ಮತ್ತು 1986ರಲ್ಲಿ ಬೆಲೆ ಇಳಿಸಿದ ಸಂಗತಿ ಕಂಡು ಬಂದಿದೆಂದು ವರದಿ ಹೇಳುತ್ತದೆ. ಆ ಕಾರಣದಿಂದಾ ಗಿಯೇ ಸರ್ಕಾರ ಉದ್ಯಮಿಗಳ ಪ್ರಭಾವಕ್ಕೆ ಮಣಿದು ಸರ್ಕಾರೀ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿರುವುದರಿಂದ ಇದರ ಕುರಿತು ಪೂರ್ಣ ಚೌಕಾಸಿಯಾಗಬೇ ಕೆಂದು ಕೇಳಿಕೊಂಡಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸಂಬಂಧಿಸಿದ ವರದಿಯಲ್ಲಿ ಸರ್ಕಾರೀ ಆಸ್ಪತ್ರೆಗಳಿಂದ ತಾವು ಪಡೆಯುತ್ತಿರುವ ಸೇವೆಗಾಗಿ ಕೊಡಬೇಕಾದ ಹಣ ಪಾವತಿ ಮಾಡದಿರು ವುದನ್ನು ಉಲ್ಲೇಖಿಸಿರುವುದು ಮಾತ್ರ ವಲ್ಲ, ಸರ್ಕಾರೀ ಆಸ್ಪತ್ರೆಗಳ ನಿರ್ಮಾಣ ನವೀಕರಣಗಳಲ್ಲಾಗುತ್ತಿರುವ ವಿಳಂಬ, ಶುಶ್ರೂಷೆಯ ಕೊರತೆ, ಚುಚ್ಚುಮದ್ದು ನೀಡಲು ಉಪಯೋಗಿಸುವ ಸೂಜಿಯ ದುರುಪಯೋಗ, ಆಸ್ಪತ್ರೆಗಳಲ್ಲಿ ವೈದ್ಯರ ಅಭಾವ, ವಿಶೇಷ ತಜ್ಞರು ಕೆಲವೇ ನಗರ ಗಳಲ್ಲಿ ಮಾತ್ರ ಕೇಂದ್ರೀಕೃತವಾಗಿರುವುದು ಮೊದಲಾದ ಅಂಶಗಳ ಕುರಿತು ಸರ್ಕಾರದ ಗಮನ ಸೆಳೆದಿದೆ.

ಹಿಂದಿನ ಜನತಾ ಈಗಿನ ಜನತಾ ದಳದ ಸರ್ಕಾರ ಖಾಸಗಿ ಮಾಲಿಕರಿಗೆ-ಅವರು ಉದ್ಯಮಿಗಳಿರಲಿ ಅಥವಾ ವೈದ್ಯಕೀಯ ಕಾಲೇಜುಗಳಿರಲಿ-ಯಾವ ರೀತಿ ಬಲಿಯಾಗುತ್ತಾರೆ, ಅವರಿಂದ ಸರ್ಕಾರದ ಬೊಕ್ಕಸಕ್ಕೆ ಯಾವ ರೀತಿ ಮೋಸ ಮಾಡಿಸುತ್ತಾರೆ ಎಂಬ ಅಂಶ ಬಯಲಾಗಿದೆ. ತಮ್ಮ ತಪ್ಪನ್ನು ಕೂಡಲೇ ಸರಿಪಡಿಸಿಕೊಂಡು ಸರ್ಕಾರಕ್ಕಾಗುತ್ತಿರುವ ಹಾನಿಯನ್ನು ತುಂಬಿಸಿಕೊಳ್ಳಲಿಕ್ಕೆ ಬೊಮ್ಮಾಯಿ ಸರ್ಕಾರ ಕೂಡಲೇ ಕ್ರಮ ಕೈಗೊಂಡು, ಈ ರೀತಿಯ ತಪ್ಪಿಗೆ ಕಾರಣವೇನೆಂಬುದನ್ನು ಸಾರ್ವಜನಿಕರಿಗೆ ತಿಳಿಯಪಡಿಸುವುದು ಅತ್ಯಗತ್ಯ.

ಅವಿವೇಕ, ಅವಿಚಾರ

"ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ವಿರುದ್ಧ ಸ್ಟೆನ್‌ಗನ್, ಕತ್ತಿ, ಖಡ್ಗ, ಲಾಠಿ ಹಿಡಿದು ಸಂಪೂರ್ಣ ಕ್ರಾಂತಿ ಘೋಷಿಸುವಂತೆ "ಪಶ್ಚಿಮಬಂಗಾಳದ ಕಾಂಗ್ರೆ ಅಧ್ಯಕ್ಷ ಘನಿಖಾನ್ ಚೌಧುರಿಯವರು ನೀಡಿದ ಹೇಳಿಕೆ ರಾಷ್ಟ್ರಾದ್ಯಂತ ಖಂಡನೆಗೆ ಗುರಿಯಾಗಿದೆ. ಈ ಕುರಿತು-

ಪ್ರಜಾವಾಣಿ

....ನಮ್ಮ ನೇತಾರರ ನಡೆ-ನುಡಿಗಳಿಗೆ ದೀಪ ಹಿಡಿದರೆ ಬೇಲಿಯೇ ಎದ್ದು ಹೊಲ ಮೇಯ್ದಂತೆ ಎಂಬ ನಾಣ್ಣುಡಿ ನೆನಪಾಗುತ್ತದೆ. ಇದಕ್ಕೆ ಘನಿಖಾನ್ ಚೌಧುರಿಯವರ ಇತ್ತೀಚಿನ ಅಚ್ಚಲ ನಿದರ್ಶನ.

ಪಶ್ಚಿಮಬಂಗಾಳದ ವಾಮಪಂಥೀಯ ಸರ್ಕಾರದ ಬಗೆಗಿನ ಚೌಧುರಿಯವರ ಆಕ್ಷೇಪಣೆ, ಪೂರ್ವಾಗ್ರಹಗಳು ನಿರೀಕ್ಷಿತವೇ. ಈ ಹಿಂದೆ ಎಷ್ಟೋ ಬಾರಿ ಅವರು ಹಣೆ ಮಸೆದಿದ್ದಾರೆ. ಒಮ್ಮೆ ಜ್ಯೋತಿಬಸು, ಸರ್ಕಾರವನ್ನು ಬಂಗಾಳಕೊಲ್ಲಿಗೆ ಎಸೆಯುವಂತೆ ಅವರು ಅಪ್ಪಣೆ, ಕೊಡಿಸಿದ್ದರು. ಇದೀಗ ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋಗಿ ಸ್ಟೆನ್‌ಗನ್ ಹಿಡಿಯಲು ಕರೆ ನೀಡಿದ್ದಾರೆ.

ಚೌಧುರಿಯವರು ಕಳೆದ ಒಂದು ವಾರದಿಂದ ಇಂಥ ಕರೆ ನೀಡುತ್ತಿದ್ದು ಅದು ವಾರ್ತಾ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಪ್ರಚಾರ ಪಡೆಯುತ್ತಿದೆ. ಈ ಪ್ರಚೋದನಾಕಾರಿ ಭಾಷಣದಿಂದ ಉದ್ರಿಕ್ತರಾದ ಸಭಿಕರು ಸ್ಟೆನ್‌ಗನ್‌ಗಳಿಗಾಗಿ ಕೇಳುತ್ತಿದ್ದಾರೆಂಬ ವರದಿ ಇಂಥ ಭಾಷಣದ ಶೀಘ್ರಗಾಮಿ ಪರಿಣಾಮ ಏನಾಗುತ್ತದೆ ಎಂಬುದಕ್ಕೆ ತೋರುಬೆರಳು.

ಈ ಹಿಂಸಾಚಾರದ ಕರೆಯ ಅಸಹನೆಯ ಮೂಲ ಪಶ್ಚಿಮ ಬಂಗಾಳದಲ್ಲಿ ವಿರೋಧಪಕ್ಷವಿದೆ ಎಂಬುದು ಹಾಗೂ ಅಲ್ಲಿ ಕಾಂಗ್ರೆ ಏನು ಮಾಡಿದರೂ ತನ್ನ ರಾಜಕೀಯ ಭವಿಷ್ಯ ಉತ್ತಮಪಡಿಸಿಕೊಳ್ಳಲು ಸಾಧ್ಯವಾಗಿಲ್ಲ ಎಂಬುದು....

ಕನ್ನಡಪ್ರಭ

....ರಾಜಕೀಯ ಕೋವಿಯ ನಳಿಕೆಯ ಮೂಲಕವೇ ನಡೆಯಬೇಕೇ?.... ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆ ಸೋತು ಸುಣ್ಣವಾಗಿರುವುದು ಎಲ್ಲರಿಗೂ ಗೊತ್ತು. ಮೂರು ಸಾರ್ವತ್ರಿಕ ಚುನಾವಣೆಗಳಲ್ಲೂ ಕಾಂಗ್ರೆ ಸೋತು ಹೋಗಿದೆ. ಜ್ಯೋತಿಬಸು ಅವರಂಥ ಅತ್ಯಂತ ಜನಪ್ರಿಯ ಮುಖ್ಯಮಂತ್ರಿ ಮೂರನೆಯ ಅವಧಿಗೆ ಅಧಿಕಾರ ಸೂತ್ರ ವಹಿಸಿದ್ದಾರೆ. ಹೀಗಿರುವಾಗ ತಮ್ಮ ಕಾರ್ಯಕರ್ತರನ್ನು ಹಿಂಸಾಚಾರಕ್ಕೆ ಪ್ರಚೋದಿಸಿ ಘನೀಖಾನ್ ಚೌಧುರಿ ರಾಷ್ಟ್ರದ್ರೋಹಕರ ಮಾತನಾಡಿದ್ದಾರೆ.

ಚೌಧುರಿ ಮಾತನ್ನು ರಾಜೀವ್‌ಗಾಂಧಿ ಏಕೆ ಇನ್ನೂ ಖಂಡಿಸಿಲ್ಲ. ಅವರೂ ಅದನ್ನು ಅನುಮೋದಿಸುತ್ತಾರೆಯೆ? ಕಾಂಗ್ರೆ ಪಕ್ಷ ಹಲವಾರು ಮಾತುಗಳಿಂದ ಕ್ಷುದ್ರ ಗೂಂಡಾಗಿರಿಯನ್ನು ಬೆಳೆಸುತ್ತಿರುವುದು ಎಲ್ಲರಿಗೂ ಗೊತ್ತು.

ಘನೀಖಾನ್ ಚೌಧುರಿಯವರಿಗೆ ಅವರ ಮಾತೇ ತಿರುಗಬಾಣವಾದೀತೆಂಬ ಪರಿವೆ ಇಲ್ಲ.

Printed & Published by P.Ramachandra Rao on behalf of Communist Party of India (Marxist) Karnataka State Committee, K.V.Temple Street, Sulthanpet, Bangalore-560053. Editor: P.Ramachandra Rao Managing Editor N.K.Upadhyaya
Managerial Office: Shobha Lodge Complex, 5th Main Road, Gandhinagar, Bangalore-560009.